ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 8 ಗುರುವಾರ 2022

ಸಂಪುಟ: 43 | ಸಂಚಿಕೆ: 143 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರು ಆರ್‌ಬಿಐ ಆವರಣದಲ್ಲಿ ಚಿರತೆ ಸಂಸಾರ

● ಕೇಂದ್ರೀಯ ವಿದ್ಯಾಲಯಕ್ಕೆ ಸೆ.1ರಿಂದ ರಜೆ ಘೋಷಣೆ: ನಿವಾಸಿಗಳಲ್ಲಿ ಆತಂಕ ● ಚಿರತೆ ಸೆರೆಗೆ ಮೂರು ಬೋನ್ ಇಟ್ಟು ಕಾರ್ಯಾಚರಣೆ ಆರಂಭಿಸಿದ ಅರಣ್ಯ ಇಲಾಖೆ

ಮೈಸೂರು, ಸೆ.7(ಎಂಟಿವೈ)– ಮೈಸೂರಿನ ಮೇಟಗಳ್ಳಿಯಲ್ಲಿರುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಸಂಸ್ಥೆ ಆವರಣದಲ್ಲಿ ಚಿರತೆಯ ಸಂಸಾರವೇ ಪ್ರತ್ಯಕ್ಷವಾಗಿದ್ದು, ಸ್ಥಳೀಯ ನಿವಾಸಿಗಳಲ್ಲಿ ಆತಂಕ ನಿರ್ಮಾಣವಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಆರ್‌ಬಿಐ ಸಮೀಪದ ಕೇಂದ್ರೀಯ ವಿದ್ಯಾಲಯಕ್ಕೆ ರಜೆ ಘೋಷಿಸಲಾಗಿದೆ.

ಕಳೆದ ಕೆಲ ದಿನಗಳಿಂದ ಎರಡು ಮರಿಗಳೊಂದಿಗೆ ಚಿರತೆ ರಾತ್ರಿ ವೇಳೆ ಆರ್‌ಬಿಐ ಆವರಣದಲ್ಲಿ ಓಡಾಡುತ್ತಿದ್ದು, ಅವುಗಳ ಚಲನವಲನ ಅಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಇದರಿಂದ ಆರ್‌ಬಿಐ ಸಿಬ್ಬಂದಿ, ವಸತಿ ಗೃಹದ ನಿವಾಸಿಗಳು ಆತಂಕಕ್ಕೊಳಗಾಗಿದ್ದು, ಸೆ.1ರಿಂದಲೇ ಕೇಂದ್ರೀಯ ವಿದ್ಯಾಲಯಕ್ಕೆ ರಜೆ ಘೋಷಿಸಲಾಗಿದೆ. ಆರ್‌ಬಿಐ ಹಾಗೂ ಕೇಂದ್ರೀಯ ಶಾಲೆಯ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಅರಣ್ಯ ಇಲಾಖೆ ಸಿಬ್ಬಂದಿ ತಂಡ, ಚಿರತೆ ಸೆರೆಗೆ ಕಾರ್ಯಾಚರಣೆ ಆರಂಭಿಸಿದ್ದಾರೆ. ಅಲ್ಲದೆ, ಮೂರು ಪ್ರತ್ಯೇಕ ಸ್ಥಳಗಳಲ್ಲಿ ಬೋನ್ ಇಟ್ಟು, ಎಚ್ಚರ ವಹಿಸಿದ್ದಾರೆ.

ಮನೆಯಿಂದ ಹೊರ ಬರಲು ಭಯ: ಆರ್‌ಬಿಐ ಕ್ವಾರ್ಟರ್ಸ್ ನಿವಾಸಿಗಳು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕಳೆದ ಒಂದು ತಿಂಗಳಿಂದ ಮೂರು ಚಿರತೆಗಳು ರಾತ್ರಿ ವೇಳೆ ಆರ್‌ಬಿಐ ಕ್ವಾರ್ಟರ್ಸ್‌ನಲ್ಲಿ ಓಡಾಡುತ್ತಿವೆ. ಮನೆಯಿಂದ ಹೊರ ಬರಲು ನಮಗೆ ಭಯವಾಗುತ್ತಿದೆ. ಸಾಕುನಾಯಿಗಳನ್ನು ಬೇಟೆಯಾಡಿ ತಿನ್ನುತ್ತಿವೆ. ಚಿರತೆ ಜನರ ಮೇಲೆ ದಾಳಿ ಮಾಡಬಹುದೆಂಬ ಆತಂಕವಿದೆ. ▶ 9ನೇ ಪುಟಕ್ಕೆ


ಆರ್‌ಬಿಐ ಆವರಣದ ಸಿಸಿ ಕ್ಯಾಮರಾದಲ್ಲಿ ದಾಖಲಾದ ಚಿರತೆಯ ಚಲನವಲನದ ದೃಶ್ಯ


"ಆರ್‌ಬಿಐ ಹಾಗೂ ಕೇಂದ್ರೀಯ ವಿದ್ಯಾಲಯದ ಆವರಣದಲ್ಲಿ ಚಿರತೆ ಸೆರೆಗೆ ಕಾರ್ಯಾಚರಣೆ ಆರಂಭಿಸಲಾಗಿದೆ. ಅಲ್ಲಿರುವ ಪೊದೆಗಳಲ್ಲಿ ಶೋಧಿಸಲಾಗುತ್ತಿದೆ. ಇದುವರೆಗೆ ಕಂಡುಬಂದಿಲ್ಲ. ಸಾಮಾನ್ಯವಾಗಿ ಚಿರತೆ ರಾತ್ರಿ ವೇಳೆ ಓಡಾಡುವ ಪ್ರಾಣಿಯಾಗಿದ್ದು, ಇದರಿಂದ ಅವುಗಳ ಸೆರೆ ಸಾಧ್ಯವಾಗಿಲ್ಲ. ಆದರೂ ಕಾರ್ಯಾಚರಣೆ ಮುಂದುವರೆಸಲಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಪಶುವೈದ್ಯರ ತಂಡವನ್ನು ಕಾಯ್ದಿರಿಸಲಾಗಿದೆ. ಚಿರತೆ ಕಂಡು ಬಂದರೆ ಅರವಳಿಕೆ ಮದ್ದು ನೀಡಿ, ಸೆರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ


ಚಿರತೆ ಸೆರೆಗಾಗಿ ಆರ್‌ಬಿಐ ಆವರಣದಲ್ಲಿ ಅರಣ್ಯ ಸಿಬ್ಬಂದಿ ಬೋನ್ ಇಟ್ಟಿರುವುದು

ಸರ್ಕಾರಿ ಗೌರವದೊಂದಿಗೆ ವೀರಶೈವ ಲಿಂಗಾಯತ ಸಂಪ್ರದಾಯದಂತೆ ಉಮೇಶ್ ಕತ್ತಿ ಅಂತ್ಯಕ್ರಿಯೆ



ಅಗಲಿದ ನೆಚ್ಚಿನ ನಾಯಕನಿಗೆ ಸಹಸ್ರ ಸಹಸ್ರ ಜನರ ಅಶ್ರುತರ್ಪಣ



ಬೆಳಗಾವಿ, ಸೆ.7–ಬೆಂಗಳೂರಿನಲ್ಲಿ ಮಂಗಳವಾರ ರಾತ್ರಿ ಹೃದಯಾಘಾತದಿಂದ ನಿಧನರಾದ ಬಿಜೆಪಿ ಹಿರಿಯ ನಾಯಕರೂ ಆದ ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಉಮೇಶ್ ಕತ್ತಿ ಅಂತ್ಯಕ್ರಿಯೆ ಹುಟ್ಟೂರಾದ ಬೆಳಗಾವಿ ಜಿಲ್ಲೆ ಬೆಲ್ಲದ ಬಾಗೇವಾಡಿಯ ಅವರ ತೋಟದಲ್ಲಿ ವೀರಶೈವ ಲಿಂಗಾಯಿತ ಸಂಪ್ರದಾಯದಂತೆ ಇಂದು ರಾತ್ರಿ ನೆರವೇರಿತು.

ಬೆಲ್ಲದ ಬಾಗೇವಾಡಿಯ ವಿಶ್ವರಾಜ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಕತ್ತಿಯವರ ಪಾರ್ಥಿವ ಶರೀರಕ್ಕೆ ಸಕಲ ಸರ್ಕಾರಿ ಗೌರವಗಳನ್ನು ಇಂದು ಸಂಜೆ ಸಲ್ಲಿಸಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಾರ್ಥಿವ ಶರೀರದ ಮೇಲೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಕತ್ತಿಯವರ ಪತ್ನಿ ಶೀಲಾ ಅವರಿಗೆ ಹಸ್ತಾಂತರಿಸಿದರು. ಇಂದು ಬೆಳಗ್ಗೆ 6.30ಕ್ಕೆ ಬೆಂಗಳೂರಿನ ಹೆಚ್‌ಎಎಲ್ ▶ 9ನೇ ಪುಟಕ್ಕೆ

ರಾಜ್ಯದಲ್ಲಿ ಮೂರು ದಿನ ಶೋಕಾಚರಣೆ

ಮೈಸೂರು, ಸೆ.7(ಪಿಎಂ)– ಸಚಿವ ಉಮೇಶ್ ವಿಶ್ವನಾಥ ಕತ್ತಿ ನಿಧನದ ಹಿನ್ನೆಲೆಯಲ್ಲಿ ಅವರ ಗೌರವಾರ್ಥವಾಗಿ ರಾಜ್ಯದಲ್ಲಿ ಮೂರು ದಿನಗಳ ಶೋಕಾಚರಣೆ ಘೋಷಿಸಿ, ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಉಮೇಶ್ ಕತ್ತಿ ಅವರ ನಿಧನಕ್ಕೆ ರಾಜ್ಯ ಸರ್ಕಾರ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಮೂರು ದಿನಗಳ ಶೋಕಾಚರಣೆ ಅವಧಿಯಲ್ಲಿ ಯಾವುದೇ ಅಧಿಕೃತ ಮನರಂಜನಾ ಕಾರ್ಯಕ್ರಮ ಇರುವುದಿಲ್ಲ. ಅಲ್ಲದೆ, ನಿಯತವಾಗಿ ರಾಷ್ಟ್ರಧ್ವಜವನ್ನು ಹಾರಿಸಲ್ಪಡುವ ಸರ್ಕಾರದ ಎಲ್ಲಾ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಪ್ರಧಾನಿ ಮೋದಿ ಸಂತಾಪ



'ಉಮೇಶ್ ಕತ್ತಿ ಅವರು ಓರ್ವ ಅನುಭವಿ ನಾಯಕರಾಗಿದ್ದು, ಕರ್ನಾಟಕದ ಅಭಿವೃದ್ಧಿಗೆ ಅಭೂತಪೂರ್ವ ಕೊಡುಗೆ ನೀಡಿದ್ದರು. ಇದೀಗ ಅವರ ನಿಧನದ ಸುದ್ದಿ ಕೇಳಿ ಮನಸ್ಸಿಗೆ ತುಂಬಾ ನೋವಾಗಿದೆ. ಈ ಸಮಯದಲ್ಲಿ ಅವರ ಕುಟುಂಬಸ್ಥರ ದುಃಖದಲ್ಲಿ ನಾನೂ ಪಾಲುದಾರನಾಗಿದ್ದೇನೆ. ಓಂ ಶಾಂತಿಃ'

ರಾಜ್ಯದಲ್ಲಿ ಮಳೆಯಿಂದ ಭಾರೀ ಹಾನಿ ನ್ಯಾಯಯುತ ಪರಿಹಾರಕ್ಕೆ ಶಿಫಾರಸು ಮಾಡಿ

● ಮಳೆ ಹಾನಿ ಅಧ್ಯಯನಕ್ಕೆ ಬಂದಿರುವ ಕೇಂದ್ರ ತಂಡಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಸಲಹೆ

● ಜುಲೈ, ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಇಲ್ಲಿಯವರೆಗೆ ಆಗಿರುವ ಹಾನಿಯ ಕೂಲಂಕಷ ಮಾಹಿತಿ ಸಲ್ಲಿಕೆ



ಬೆಂಗಳೂರು, ಸೆ. 7(ಕೆಎಂಶಿ)–ರಾಜ್ಯ ಸರ್ಕಾರವು ಅತ್ಯಂತ ನಿಖರ ಹಾಗೂ ಪಾರದರ್ಶಕವಾಗಿ ಮಳೆ ಹಾನಿಯ ಅಂದಾಜು ಪಟ್ಟಿ ಸಿದ್ಧಪಡಿಸಿ, ಪ್ರಸ್ತಾವನೆ ಸಲ್ಲಿಸಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ನ್ಯಾಯಯುತ ಪರಿಹಾರ ಒದಗಿಸಲು ಶಿಫಾರಸು ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ರಾಜ್ಯದ ಪ್ರವಾಹ ಪರಿಸ್ಥಿತಿ ಅಧ್ಯಯನಕ್ಕೆ ಆಗಮಿಸಿರುವ ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಆಶಿಶ್‌ಕುಮಾರ್ ನೇತೃತ್ವದ ಕೇಂದ್ರ ಅಧ್ಯಯನ ತಂಡದೊಂದಿಗೆ ಸಭೆ ನಡೆಸಿ, ರಾಜ್ಯದಲ್ಲಿ ಪ್ರವಾಹದಿಂದ ಜುಲೈ, ಆಗಸ್ಟ್ ಹಾಗೂ ಈ ತಿಂಗಳು ಸಂಭವಿಸಿದ ಹಾನಿಯ ಕುರಿತು ಚರ್ಚಿಸಿದರು. ರಾಜ್ಯದಲ್ಲಿ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಪ್ರವಾಹ ಪರಿಸ್ಥಿತಿಯಿಂದ ಸಂಭವಿಸಿದ ಹಾನಿಯ ಕುರಿತು ಹಾಗೂ ರಾಜ್ಯ ಸರ್ಕಾರ ಕೈಗೊಂಡ ಪರಿಹಾರ ಕ್ರಮಗಳ ಕುರಿತು ಸಭೆಯಲ್ಲಿ ವಿವರವಾದ ಮಾಹಿತಿ ಒದಗಿಸಲಾಯಿತು. ತಂಡವು ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಹಾವೇರಿ, ಧಾರವಾಡ, ಗದಗ, ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಿಗೆ ಭೇಟಿ ನೀಡುವ ಕಾರ್ಯಕ್ರಮ ರೂಪಿಸಲಾಗಿತ್ತು ಇದರೊಂದಿಗೆ ಅತೀ ಹೆಚ್ಚು ಭೂಕುಸಿತ, ಸಮುದ್ರ ಕೊರೆತ ಸಂಭವಿಸಿರುವ ಕೊಡಗು, ದಕ್ಷಿಣಕನ್ನಡ ಹಾಗೂ ಉತ್ತರಕನ್ನಡ ಜಿಲ್ಲೆಗಳಿಗೂ ಭೇಟಿ ನೀಡುವಂತೆ ಮುಖ್ಯಮಂತ್ರಿಗಳು ಸಲಹೆ ನೀಡಿದರು. ಜೊತೆಗೆ ಬೆಂಗಳೂರು ನಗರ, ನೆರೆಯ ಮಂಡ್ಯ, ರಾಮನಗರ ಜಿಲ್ಲೆಗಳ ಪ್ರವಾಹ ಪರಿಸ್ಥಿತಿಯನ್ನು ಸಹ ಅವಲೋಕಿಸುವಂತೆ ತಿಳಿಸಲಾಯಿತು. ಭಾರಿ ಸಂಖ್ಯೆಯಲ್ಲಿ ಮೀನುಗಾರಿಕಾ ದೋಣಿಗಳಿಗೆ, ಅಂಗಡಿ ಮುಂಗಟ್ಟುಗಳಿಗೆ ಸಂಭವಿಸಿದ ಹಾನಿ ಹಾಗೂ ರಾಮನಗರದ ರೇಷ್ಮೆ ರೀಲಿಂಗ್, ಟ್ವಿಸ್ಟಿಂಗ್ ಘಟಕಗಳಿಗೆ ಸಂಭವಿಸಿದ ಹಾನಿಯ ಕುರಿತೂ ಕೇಂದ್ರ ತಂಡದ ಗಮನಕ್ಕೆ ತಂದ ಮುಖ್ಯಮಂತ್ರಿಗಳು, ಮೊದಲ ಬಾರಿಗೆ ಇಂತಹ ಹಾನಿ ಸಂಭವಿಸಿದ್ದು, ಅವರಿಗೆ ▶ 4ನೇ ಪುಟಕ್ಕೆ





ಮೈಸೂರು ಅರಮನೆ ಅಖಾಡದಲ್ಲಿ ಕಾಳಗಕ್ಕೆ ಸಜ್ಜಾಗುತ್ತಿರುವ ಜಗ ಜಟ್ಟಿಗಳು! ■ ಪುಟ–10



'ಭಾರತ್ ಜೋಡೋ' ಯಾತ್ರೆ ಆರಂಭ

ದ್ವೇಷದ ರಾಜಕಾರಣಕ್ಕೆ ತಂದೆಯನ್ನು ಕಳೆದುಕೊಂಡೆ ಆದರೆ ದೇಶವನ್ನು ಕಳೆದುಕೊಳ್ಳುವುದಿಲ್ಲ: ರಾಹುಲ್‌ಗಾಂಧಿ

ಚೆನ್ನೈ, ಸೆ.7–2024ರ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿಟ್ಟು ಕೊಂಡು ಕಾಂಗ್ರೆಸ್‌ನ ರಾಹುಲ್ ಗಾಂಧಿ ಅವರು ಪಕ್ಷದ ಬೃಹತ್ ಜನ ಸಂಪರ್ಕ ಕಾರ್ಯಕ್ರಮ 'ಭಾರತ್ ಜೋಡೋ ಯಾತ್ರೆಗೆ ಇಂದು ಕನ್ಯಾಕುಮಾರಿಯಿಂದ ಚಾಲನೆ ನೀಡಿದರು. 150 ದಿನಗಳಲ್ಲಿ 3,500 ಕಿ.ಮೀ ದೂರ ಪಾದಯಾತ್ರೆ ಸಾಗಲಿದೆ. ಮೇ 21, 1991 ರಂದು ಆತ್ಮಾಹುತಿ ದಾಳಿಯಲ್ಲಿ ಸಾವನ್ನಪ್ಪಿದ, ತಮಿಳುನಾಡಿನ ಶ್ರೀಪೆರಂಬದೂರಿನಲ್ಲಿರುವ ತಮ್ಮ ತಂದೆ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಸ್ಮಾರಕಕ್ಕೆ ಭೇಟಿ ನೀಡುವ ಮೂಲಕ ರಾಹುಲ್ ಗಾಂಧಿ ತಮ್ಮ ದಿನವನ್ನು ಪ್ರಾರಂಭಿ ಸಿದರು. ತಮ್ಮ ತಂದೆಯ ಸ್ಮಾರಕಕ್ಕೆ ಭೇಟಿ ನೀಡಿದ ನಂತರ ಟ್ವೀಟ್ ಮಾಡಿದ ರಾಹುಲ್ ಗಾಂಧಿ, ದ್ವೇಷ ಮತ್ತು ವಿಭಜನೆಯ ರಾಜ ಕೀಯದಿಂದ ನಾನು ನನ್ನ ತಂದೆಯನ್ನು ಕಳೆದುಕೊಂಡೆ. ಆದರೆ ಇದಕ್ಕಾಗಿ ನಾನು ನನ್ನ ಪ್ರೀತಿಯ ದೇಶವನ್ನು ಕಳೆದುಕೊಳ್ಳು ವುದಿಲ್ಲ. ಪ್ರೀತಿ ದ್ವೇಷವನ್ನು ಜಯಿಸುತ್ತದೆ, ಭರವಸೆಯು ಭಯವನ್ನು ಸೋಲಿಸುತ್ತದೆ, ನಾವು ಒಟ್ಟಾಗಿ ಜಯಿಸುತ್ತೇವೆ ಎಂದು ಹೇಳಿದರು. ಬಿಜೆಪಿ ಆಡಳಿತದ ಅಡಿಯಲ್ಲಿ ಸಾಮಾಜಿಕ ಧ್ರುವೀಕರಣ ಮತ್ತು ರಾಜಕೀಯ ಕೇಂದ್ರೀಕರಣವನ್ನು ಆರೋಪಿಸಿದ ರಾಹುಲ್ ಗಾಂಧಿ, 'ಭಾರತ್ ಜೋಡೋ ಯಾತ್ರೆ' ದೇಶವನ್ನು ಒಗ್ಗೂಡಿಸಲು ತನಗೆ ತಪಸ್ಸು ▶ 4ನೇ ಪುಟಕ್ಕೆ

ಇಂದು ದೊಡ್ಡಬಳ್ಳಾಪುರದಲ್ಲಿ ಏರ್ಪಡಿಸಿದ್ದ ಬಿಜೆಪಿ 'ಜನೋತ್ಸವ' ಸೆ.10ಕ್ಕೆ ಮುಂದೂಡಿಕೆ




ಬೆಂಗಳೂರು, ಸೆ. 7(ಕೆಎಂಶಿ)–ಬಿಜೆಪಿ ಸರ್ಕಾರಕ್ಕೆ ಮೂರು ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ನಾಳೆ ದೊಡ್ಡಬಳ್ಳಾಪುರದಲ್ಲಿ ಹಮ್ಮಿಕೊಂಡಿದ್ದ ಜನೋತ್ಸವ ಸಮಾವೇಶವನ್ನು ಮತ್ತೆ ಮುಂದೂಡಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಜುಲೈ 28 ರಂದು ಜನೋತ್ಸವ ಹಮ್ಮಿಕೊಳ್ಳಲಾಗಿತ್ತು. ಆದರೆ ಕಾರಣಾಂತರ ಗಳಿಂದ ಮುಂದೂಡಲಾಗಿದ್ದ ಸಮಾವೇಶವನ್ನು ಆಗಸ್ಟ್ 8 ರಂದು ನಡೆಸಲು ತೀರ್ಮಾನಿಸಿ, ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸಚಿವರ ದಂಡೇ ಮುಂದಾಗಿತ್ತು. ಆದರೆ ಸಚಿವ ಉಮೇಶ್ ಕತ್ತಿ ಅವರ ಅಕಾಲಿಕ ಮರಣದಿಂದ ನಾಳಿನ ಕಾರ್ಯಕ್ರಮವನ್ನು ಸೆ.11ಕ್ಕೆ ಮುಂದೂಡಲಾಗಿತ್ತು. ಆದರೆ ರಾತ್ರಿ ಮತ್ತೆ ಸೆ.10ಕ್ಕೆ ನಡೆಸುವ ನಿರ್ಧಾರ ಕೈಗೊಳ್ಳಲಾಗಿದೆ. ಈ ಮೊದಲು ಕತ್ತಿ ಅವರ ಅಂತ್ಯಕ್ರಿಯೆ ಇಂದೇ ಮುಗಿಯುವುದರಿಂದ ನಾಳೆ ಸಮಾವೇಶ ನಡೆಸಲು ಸಚಿವರುಗಳು ತೀರ್ಮಾನಿಸಿದ್ದರು. ಆದರೆ ಉತ್ತರಕರ್ನಾಟಕ ಭಾಗಕ್ಕೆ ಸೇರಿದ ಶಾಸಕರು, ಮುಖಂಡರುಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಅನಿವಾರ್ಯವಾಗಿ ಜನೋತ್ಸವವನ್ನು ಮುಂದೂಡುವ ನಿರ್ಧಾರಕ್ಕೆ ಬರಲಾಗಿದೆ.

ಅರಮನೆ ಆವರಣಕ್ಕೆ ಆಗಮಿಸಿದ ದಸರಾ ಗಜಪಡೆಯ 2ನೇ ತಂಡ

ಮೈಸೂರು,ಸೆ.7(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಎರಡನೇ ತಂಡದಲ್ಲಿ ಮೂರು ಹೊಸ ಆನೆ ಸೇರಿದಂತೆ ಐದು ಆನೆಗಳು ಬುಧವಾರ ಮಧ್ಯಾಹ್ನ ಮೈಸೂರು ಅರಮನೆ ಆವರಣವನ್ನು ತಲುಪಿದವು.

ಇದೀಗ ದಸರಾ ಗಜಪಡೆಯ ಸಂಖ್ಯೆ 14ಕ್ಕೇರಿದಂತಾಗಿದೆ. ಇವುಗಳಲ್ಲಿ 18 ವರ್ಷದ ಪಾರ್ಥಸಾರಥಿ ಅತ್ಯಂತ ಕಿರಿಯ ಆನೆಯಾಗಿದ್ದರೆ, 63 ವರ್ಷದ ಅರ್ಜುನ ಹಿರಿಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾನೆ. 4 ಹೆಣ್ಣಾನೆಗಳಲ್ಲಿ 20 ವರ್ಷದ ಲಕ್ಷ್ಮೀ ಕಿರಿಯಳಾದರೆ, 63 ವರ್ಷದ ವಿಜಯ ಹಿರಿಯಳಾಗಿದ್ದಾಳೆ. ಈ ಬಾರಿಯ ದಸರಾ ಗಜಪಡೆಯಲ್ಲಿ 18ರಿಂದ 63 ವರ್ಷದ ಆನೆಗಳಿದ್ದು, ಸಮತೋಲನ ಕಾಯ್ದುಕೊಂಡಂತಾಗಿದೆ. ಎರಡನೇ ತಂಡದ 5 ಆನೆಗಳನ್ನು ಕರೆತರಲು ಇಂದು ಮುಂಜಾನೆಯೇ ಆನೆ ಕ್ಯಾಂಪ್‌ಗಳಿಗೆ ಲಾರಿ ಕಳುಹಿಸಲಾಗಿತ್ತು. ಭಾರೀ ಮಳೆ ಕಾರಣ 4 ಆನೆಗಳು ಮೈಸೂರು ತಲುಪುವುದು 2 ಗಂಟೆ ವಿಳಂಬವಾಯಿತು.



ಎರಡನೇ ತಂಡದಲ್ಲಿ ಹೊಸ ಆನೆ ಬಂಡೀಪುರದ ರಾಮಪುರ ಶಿಬಿರದ ಪಾರ್ಥಸಾರಥಿ(18) ಮಧ್ಯಾಹ್ನ 12.30ಕ್ಕೆ ಅರಮನೆಯನ್ನು ಸುರಕ್ಷಿತವಾಗಿ ತಲುಪಿದರೆ, ಸಂಜೆ 4 ಗಂಟೆಗೆ ದುಬಾರೆ ಕ್ಯಾಂಪ್‌ನ ಶ್ರೀರಾಮ(40), ಸುಗ್ರೀವ(40), ಗೋಪಿ(41) ಹಾಗೂ ವಿಜಯ(63) ಆಗಮಿಸಿದವು. ಲಾರಿಯಿಂದ ಅತ್ಯಂತ ಸುರಕ್ಷಿತವಾಗಿ ಕೆಳಗಿಳಿಸಿದ ಬಳಿಕ ಎಲ್ಲಾ ಆನೆಗಳನ್ನು ಉಪಚರಿಸಲಾಯಿತು. ನಂತರ ನಿಗದಿತ ಸ್ಥಳದಲ್ಲಿ ಆನೆಗಳನ್ನು ಕಟ್ಟಿಹಾಕಿ, ಮಾವುತ, ಕಾವಾಡಿಗಳಿಗೆ ಅಗತ್ಯ ವಸ್ತುಗಳ ಕಿಟ್ ವಿತರಿಸಲಾಯಿತು.

ಮಾಟ–ಮಂತ್ರದ ಭೀತಿ ಹುಟ್ಟಿಸಿ ನಗದು, ಚಿನ್ನಾಭರಣ ಸುಲಿಗೆ

ಪಂಡಿತ್ ಸಚ್ಚಿದಾನಂದ ಗುರೂಜಿ ವಿರುದ್ಧ ಪ್ರಕರಣ ದಾಖಲು

ಕ್ರೈಂ ಬಾಕ್ಸ್

ಚಾಮರಾಜನಗರ,ಸೆ.7–ಮಾಟ–ಮಂತ್ರದ ಹೆಸರಿನಲ್ಲಿ ಹೆದರಿಸಿ ಗೃಹಿಣಿಯೊಬ್ಬರಿಂದ 32,800 ರೂ. ನಗದು ಮತ್ತು 13 ಗ್ರಾಂ ಚಿನ್ನಾಭರಣ ಪಡೆದು ವಂಚಿಸಿರುವ ಬಗ್ಗೆ ವರದಿಯಾಗಿದೆ. ತಿ.ನರಸೀಪುರದ ಗೃಹಿಣಿ ಎಂ.ಕಾವ್ಯ(20) ವಂಚನೆಗೊಳಗಾದವರಾಗಿದ್ದು, ಇವರು ಯೂ–ಟ್ಯೂಬ್‌ನಲ್ಲಿ ಜ್ಯೋತಿಷ್ಯದ ಜಾಹೀರಾತನ್ನು ನೋಡಿ, ಅದರಲ್ಲಿದ್ದ ಪಂಡಿತ್ ಸಚ್ಚಿದಾನಂದ ಗುರೂಜಿ ಎಂಬುವರ ಮೊಬೈಲ್ ನಂಬರ್‌ಗೆ ಕರೆ ಮಾಡಿ, 'ನಮ್ಮ ಮನೆಯಲ್ಲಿ ಕಷ್ಟವಿದೆ. ಗಂಡ–ಹೆಂಡತಿ ನಡುವೆ ಜಗಳ ನಡೆಯುತ್ತಿದೆ. ಸಾಲ ಬಾಧೆಯೂ ಇದೆ' ಎಂದು ತಿಳಿಸಿ ಪರಿಹಾರ ಕೇಳಿದ್ದಾರೆ. ಕರೆ ಸ್ವೀಕರಿಸಿದವರು ಕಾವ್ಯ ಮತ್ತು ಅವರ ಪತಿಯ ಫೋಟೋ ಕಳುಹಿಸಲು ಹೇಳಿದ ಮೇರೆಗೆ ವಾಟ್ಸಾಪ್ ಮೂಲಕ ದಂಪತಿಯ ಫೋಟೋವನ್ನು ಕಳುಹಿಸಿದರು.

ಫೋಟೋ ನೋಡಿದ ನಂತರ ಕರೆ ಮಾಡಿದ ವ್ಯಕ್ತಿ, ನಿಮಗೆ ದೋಷವಿದೆ. ಗಂಡ– ಹೆಂಡತಿ ನಡುವೆ ಹೊಂದಾಣಿಕೆ ಇಲ್ಲ. ನಿಮ್ಮ ಗಂಡ ಮನೆಯವರನ್ನೆಲ್ಲಾ ಕೊಲೆ ಮಾಡುತ್ತಾನೆ. ಅದಕ್ಕೆ ದೋಷ ಪರಿಹಾರ ಮಾಡಬೇಕು ಎಂದು ತಿಳಿಸಿ, 4300 ರೂ.ಗಳನ್ನು ಫೋನ್ ಪೇ ಮೂಲಕ ವರ್ಗಾವಣೆ ಮಾಡಿಸಿಕೊಂಡಿದ್ದಾರೆ.

ಇದಾದ ನಂತರ ಮತ್ತೆ ಕರೆ ಮಾಡಿದ ವ್ಯಕ್ತಿ 'ನಿಮ್ಮ ಮನೆಯವರಿಗೆ ಯಾರೋ ಮಾಟ ಮಾಡಿಸಿದ್ದಾರೆ. ಅದಕ್ಕೆ ಪರಿಹಾರ ಮಾಡಲು 21 ಸಾವಿರ ರೂ. ಕಳುಹಿಸಿಕೊಡಿ. ಇಲ್ಲದಿದ್ದರೆ ನಿಮ್ಮ ಮನೆಯಲ್ಲಿ ಒಂದೊಂದಾಗಿ ಹೆಣ ಬೀಳುತ್ತದೆ' ಎಂದು ಹೆದರಿಸಿದ್ದಾನೆ. ಆಗ ಕಾವ್ಯ ಮತ್ತು ಅವರ ಗಂಡ 21 ಸಾವಿರ ರೂ.ಗಳನ್ನು ಫೋನ್ ಪೇ ಮೂಲಕ ರವಾನಿಸಿದ್ದಾರೆ. ಮತ್ತೆ ಕರೆ ಮಾಡಿದ ವ್ಯಕ್ತಿ 'ನೀವು ಕಳುಹಿಸಿರುವ ದುಡ್ಡಿನಲ್ಲಿ ದಿಗ್ಬಂಧನ ಹೊರ ಬರುತ್ತಿಲ್ಲ. ನಿಮಗೆ ಚಿನ್ನದ ದೋಷ ಇರುವುದರಿಂದ 12 ಗ್ರಾಂ ಚಿನ್ನವನ್ನು ಕೊಡಬೇಕು' ಎಂದು ಕೇಳಿದ್ದಾನೆ.

ಆತನ ಮಾತುಗಳಿಂದ ಹೆದರಿದ ಕಾವ್ಯ ಅವರು, ಚಿನ್ನವನ್ನು ಹೇಗೆ ತಲುಪಿಸುವುದು ಎಂದು ಕೇಳಿದಾಗ ಚಾಮರಾಜನಗರ ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್‌ಗೆ ಬರುವಂತೆ ತಿಳಿಸಿದ್ದಾನೆ. ಅಲ್ಲಿಗೆ ತೆರಳಿದ ಕಾವ್ಯ, 13 ಗ್ರಾಂ ಚಿನ್ನಾಭರಣ ಹಾಗೂ ಮತ್ತೆ 4500 ರೂ. ಕೊಟ್ಟು ಹಿಂತಿರುಗಿದ್ದಾರೆ. ಅದೇ ದಿನ ರಾತ್ರಿ ಮತ್ತೆ ಕರೆ ಮಾಡಿದ ವ್ಯಕ್ತಿ 'ನೀವು ಕೊಟ್ಟ ಚಿನ್ನವನ್ನು ಗೊಂಬೆಗೆ ಹಾಕಿದ್ದೇನೆ. ಅದನ್ನು ಮುಟ್ಟಲು ಹೋದರೆ ಕೈ ಸುಟ್ಟು ಹೋಗುತ್ತದೆ. ಅದನ್ನು ತೆಗೆಯಬೇಕಾದರೆ ಮತ್ತೆ 47 ಸಾವಿರ ರೂ. ಕೊಡಬೇಕು' ಎಂದು ಹೆದರಿಸಿದ್ದಾನೆ. ಇದರಿಂದ ಹೆದರಿದ ಕಾವ್ಯ ಮತ್ತು ಅವರ ಪತಿ ಹಣಕ್ಕಾಗಿ ಕಾವ್ಯ ಅವರ ತಂದೆ–ತಾಯಿ ಬಳಿಗೆ ತೆರಳಿದಾಗ ಅವರು ಜ್ಯೋತಿಷ್ಯದ ಹೆಸರಿನಲ್ಲಿ ನಂಬಿಸಿ ಮೋಸ ಮಾಡಿದ್ದಾರೆ ಎಂದು ದಂಪತಿಗೆ ಮನವರಿಕೆ ಮಾಡಿದ್ದಾರೆ. ನಂತರ ಕಾವ್ಯ ಈ ಸಂಬಂಧ ಚಾಮರಾಜನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಆ್ಯಪಲ್ ಮೊಬೈಲ್ ಚಾರ್ಜರ್ ನಕಲಿ ಮಾಡಿ 25 ಲಕ್ಷ ವಂಚನೆ

ಕುಶಾಲನಗರ,ಸೆ.7–ಪಾರ್ಸಲ್‌ನಲ್ಲಿ ಬಂದ ಆ್ಯಪಲ್ ಮೊಬೈಲ್ ಚಾರ್ಜರ್‌ಗಳನ್ನು ಬದಲಿಸಿ ನಕಲಿ ಚಾರ್ಜರ್‌ಗಳನ್ನು ಕಂಪನಿಗೆ ಹಿಂತಿರುಗಿಸುವ ಮೂಲಕ 25 ಲಕ್ಷ ರೂ. ವಂಚಿಸಿರುವ ಬಗ್ಗೆ ಕುಶಾಲನಗರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುಶಾಲನಗರದ ರವಿನಾಥಜೀ ಮೊಬೈಲ್ ಅಂಡ್ ಆ್ಯಕ್ಸಸರೀಸ್, ವಿನಾಯಕ ಎಂಟರ್‌ಪ್ರೈಸಸ್ ಮತ್ತು ಕೃಷ್ಣ ಮೊಬೈಲ್ ಎಲೆಕ್ಟ್ರಾನಿಕ್ಸ್ ಅಂಡ್ ಹೋಂ ಅಪ್ಲೈಯನ್ಸ್ ಮಾಲೀಕರು, ಕುಶಾಲನಗರದ ಎಸ್.ಆರ್.ವಿನಯ್, ಉಡಾನ್ ಡೆಲಿವರಿ ಲಿಮಿಟೆಡ್ ಕಂಪನಿಯ ಮಾಜಿ ನೌಕರ ಹಿತೇಶ್‌ರಾಜ್ ಕಂಪನಿ ಡೆಲಿವರಿ ಬಾಯ್‌ಗಳಾದ ಧರ್ಮ, ತೀರ್ಥೇಶ್ ಮತ್ತು ಕೀರ್ತನ್ ಆರೋಪಕ್ಕೆ ಗುರಿಯಾಗಿರುವವರು.

ಬೆಂಗಳೂರಿನ ಉಡಾನ್ ಡೆಲಿವರಿ ಲಿಮಿಟೆಡ್ ಕಂಪನಿಯು ಹಲವಾರು ಕಂಪನಿಗಳೊಂದಿಗೆ ಅವರ ಉತ್ಪನ್ನಗಳನ್ನು ಗ್ರಾಹಕರಿಗೆ ರವಾನೆ ಮಾಡಲು ಒಪ್ಪಂದ ಮಾಡಿಕೊಂಡಿದೆ. ಈ ಕಂಪನಿಯು ಕುಶಾಲನಗರದ ಗ್ರಾಹಕರಾದ ಮೂರು ಶಾಪ್‌ಗಳಿಗೆ ಹಾಸನದ ವೇರ್‌ಹೌಸ್ ಮೂಲಕ ಆ್ಯಪಲ್ ಮೊಬೈಲ್ ಚಾರ್ಜರ್‌ಗಳನ್ನು ಕಳೆದ 3 ತಿಂಗಳಿಂದ ರವಾನಿಸಿದೆ. ಕಂಪನಿಯಿಂದ ರವಾನೆಯಾದ ಅಸಲಿ ಮೊಬೈಲ್ ಚಾರ್ಜರ್‌ಗಳನ್ನು ಬದಲಿಸಿ ನಕಲಿ ಚಾರ್ಜರ್‌ಗಳನ್ನು ಕಂಪನಿಗೆ ಹಿಂತಿರುಗಿಸುವ ಮೂಲಕ ಎಲ್ಲಾ ಆರೋಪಿಗಳು 25 ಲಕ್ಷ ರೂ.ಗಳನ್ನು ವಂಚಿಸಿದ್ದಾರೆ ಎಂದು ಉಡಾನ್ ಡೆಲಿವರಿ ಲಿಮಿಟೆಡ್‌ನ ಸೆಕ್ಯೂರಿಟಿ ಮ್ಯಾನೇಜರ್ ಯಶವಂತ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಮಾರಾಟ ಮಾಡಿದ್ದ ಜಮೀನು ಮರು ಮಾರಿ 2.70 ಲಕ್ಷ ರೂ. ವಂಚನೆ

ಐವರ ವಿರುದ್ಧ ಪ್ರಕರಣ ದಾಖಲು

ಚಾಮರಾಜನಗರ, ಸೆ.7–ಬೇರೆಯವರಿಗೆ ಮಾರಾಟ ಮಾಡಿದ ಜಮೀನನ್ನೇ ಮತ್ತೊಬ್ಬರಿಗೆ ಮಾರುವ ಮೂಲಕ 2.70 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಚಾಮರಾಜನಗರ ತಾಲೂಕು ಅಮಚವಾಡಿ ಗ್ರಾಮದ ಸೋಮಣ್ಣ(25) ವಂಚನೆಗೊಳಗಾದವರಾಗಿದ್ದು, ಚಾಮರಾಜನಗರ ಟೌನ್‌ನ ಮಹದೇವು, ಮಂಜುನಾಥ, ಜಗದೀಶ, ಮಹೇಶ ಮತ್ತು ಮಾರುತಿ ಆರೋಪಕ್ಕೆ ಒಳಗಾಗಿರುವವರು. ಇವರು ಅಮಚವಾಡಿ ಗ್ರಾಮದ ಸರ್ವೆ ನಂ.742ರಲ್ಲಿ ಒಂದು ಎಕರೆ ಮತ್ತು ಸರ್ವೆ ನಂ.743ರಲ್ಲಿ 1.30 ಗುಂಟೆ ಜಮೀನನ್ನು ಸೋಮಣ್ಣ ಅವರಿಗೆ ಮಾರಾಟ ಮಾಡಲು ಒಪ್ಪಿ, ಮುಂಗಡವಾಗಿ 2.70 ಲಕ್ಷ ರೂ.ಗಳನ್ನು ಪಡೆದು 2018ರ ಡಿ.17ರಂದು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ. ಜಮೀನನ್ನು ನೋಂದಣಿ ಮಾಡಿಸಿಕೊಳ್ಳಲು ಸೋಮಣ್ಣ ಅವರು ದಾಖಲೆಗಳನ್ನು ಪರಿಶೀಲಿಸಿದಾಗ ಇದೇ ಜಮೀನನ್ನು 2012ರ ಮಾ.26ರಂದೇ ಇದೇ ವ್ಯಕ್ತಿಗಳು ಲಕ್ಷ್ಮೀಪುರ ಗ್ರಾಮದ ಮಹದೇವಶೆಟ್ಟಿ ಎಂಬುವರಿಗೆ ಮಾರಾಟ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಈ ಸಂಬಂಧ ಚಾಮರಾಜನಗರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮನೆ ಬಾಗಿಲು ಮೀಟಿ 1.40 ಲಕ್ಷ ಮೌಲ್ಯದ ಚಿನ್ನಾಭರಣ ಕಳವು



ಮೈಸೂರು, ಸೆ.7–ಮನೆ ಬಾಗಿಲು ಮೀಟಿ ಒಳ ನುಗ್ಗಿದ ಖದೀಮರು 1.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ರಾಜೀವ್ ನಗರ 1ನೇ ಹಂತದ 7ನೇ ಕ್ರಾಸ್‌ನಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಅಬ್ದುಲ್ ಸತ್ತಾರ್(71) ಅವರು ಪತ್ನಿ ರಿಹಾನಾ ಬೇಗಂ ಅವರೊಂದಿಗೆ ಕಳೆದ ಆ.21ರಂದು ಮಧ್ಯಾಹ್ನ ಬೆಂಗಳೂರಿನ ಪುತ್ರನ ಮನೆಗೆ ತೆರಳಿದ್ದು, ಸೆ.5ರಂದು ಮಧ್ಯಾಹ್ನ ಹಿಂತಿರುಗಿದಾಗ ಖದೀಮರು ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಿನಿ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಪಾದಚಾರಿ ಸಾವು



ಮೈಸೂರು, ಸೆ.7–ಮಿನಿ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಅಪರಿಚಿತ ವ್ಯಕ್ತಿ ಸಾವನ್ನಪ್ಪಿದ ಘಟನೆ ಮೈಸೂರಿನ ನೆಲ್ಸನ್ ಮಂಡೇಲಾ ರಸ್ತೆಯ ಬಾಲಭವನ ಮುಖ್ಯ ದ್ವಾರದ ಬಳಿ ಬುಧವಾರ ಮುಂಜಾನೆ ಸಂಭವಿಸಿದೆ. ಮುಂಜಾನೆ 5.30ರ ಸುಮಾರಿನಲ್ಲಿ ರಸ್ತೆ ದಾಟುತ್ತಿದ್ದ ಸುಮಾರು 55 ರಿಂದ 60 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಗೆ ಮಿನಿ ಗೂಡ್ಸ್ ವಾಹನ (ಕೆಎ 09 ಸಿ 8647) ಡಿಕ್ಕಿ ಹೊಡೆದ ಪರಿಣಾಮ ಆತ ಸಾವನ್ನಪ್ಪಿದ್ದಾನೆ. ಮೃತನ ಕುತ್ತಿಗೆಯ ಕೆಳ ಭಾಗದಲ್ಲಿ ಕಪ್ಪು ಕಾರಳ್ಳು ಇದೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಮೈಸೂರಿನ ಎನ್.ಆರ್. ಸಂಚಾರ ಠಾಣೆ ಪೊಲೀಸರು, ಮಿನಿ ಗೂಡ್ಸ್ ವಾಹನ ವಶಪಡಿಸಿಕೊಂಡು ಚಾಲಕ ಎನ್.ಆರ್.ಮೊಹಲ್ಲಾ ನಿವಾಸಿ ಹರೀಶ್‌ನನ್ನು ಬಂಧಿಸಿ ತನಿಖೆ ಮುಂದುವರೆಸಿದ್ದಾರೆ. ಮೃತನ ಬಗ್ಗೆ ಮಾಹಿತಿ ಇರುವವರು ಅಥವಾ ವಾರಸುದಾರರು ಎನ್.ಆರ್. ಸಂಚಾರ ಠಾಣೆ ದೂರವಾಣಿ ಸಂಖ್ಯೆ: 0821–2418527 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ: 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಳೆ ಹಾನಿ ಕುರಿತು ಶಾಸಕ ಜಿಟಿಡಿ ಅಧಿಕಾರಿಗಳ ಸಭೆ

ಕ್ಷೇತ್ರದಲ್ಲಿ ಒಟ್ಟಾರೆ ನೂರು ಕೋಟಿಗೂ ಹೆಚ್ಚು ನಷ್ಟ

18 ಕೆರೆ, ನೂರಕ್ಕೂ ಹೆಚ್ಚು ಮನೆ, ಬಹುತೇಕ ರಸ್ತೆಗಳಿಗೆ ಹಾನಿ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಮಳೆಯಿಂದಾದ ಹಾನಿ ಕುರಿತಂತೆ ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳ ಸಭೆ ನಡೆಸಿ ಮಾಹಿತಿ ಪಡೆದರು. ಚಿತ್ರದಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ ಸಿಇಒ ಪೂರ್ಣಿಮಾ, ಎಡಿಸಿ ಮಂಜುನಾಥಸ್ವಾಮಿ, ತಹಶೀಲ್ದಾರ್ ಗಿರೀಶ್ ಇನ್ನಿತರೆ ಅಧಿಕಾರಿಗಳನ್ನು ಕಾಣಬಹುದು.



ದೇವರಾಜ ಅರಸು ನಿಗಮದಿಂದ 2019–20ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆಯಾಗಿದ್ದ ಚಾಮುಂಡೇಶ್ವರಿ ಕ್ಷೇತ್ರದ 23 ಮಂದಿ ಫಲಾನುಭವಿಗಳಿಗೆ ಕೊಳವೆ ಬಾವಿ ಪಂಪ್‌ಸೆಟ್ ಮತ್ತು ಮೋಟಾರ್‌ಗಳನ್ನು ಶಾಸಕ ಜಿ.ಟಿ.ದೇವೇಗೌಡರು ವಿತರಿಸಿದರು. ಫಲಾನುಭವಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಮೈಸೂರು,ಸೆ.7(ಆರ್‌ಕೆಬಿ)–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 18 ಕೆರೆಗಳು, ನೂರಕ್ಕೂ ಹೆಚ್ಚು ಮನೆಗಳು, ಬಹುತೇಕ ರಸ್ತೆಗಳಿಗೆ ಹಾನಿಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ನೆರವು ಒದಗಿಸುವಂತೆ ತುರ್ತಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಶಿಫಾರಸು ಮಾಡಲು ಪೂರ್ಣ ಮಾಹಿತಿ ನೀಡುವಂತೆ ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರು ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂಗನಹುಂಡಿ, ತಿಪ್ಪಯ್ಯನಹುಂಡಿ ರಸ್ತೆ ಸಂಪೂರ್ಣ ಹಾಳಾಗಿದೆ. ಅಲ್ಲಿನ ಫಾರಂ ಒಂದರಲ್ಲಿ 4 ಸಾವಿರ ಕೋಳಿ, ಇನ್ನೊಂದು ಫಾರಂನಲ್ಲಿ 800 ಕೋಳಿಗಳು ಸಾವಿಗೀಡಾಗಿವೆ. ಕೆ.ಎಂ.ಹಳ್ಳಿ ಕೆರೆಯಿಂದ ಕರುಂಬಯ್ಯ ಎಂಬುವರ 18 ಎಕರೆ ತೋಟಕ್ಕೆ ಹಾನಿಯಾಗಿದೆ ಎಂದರು. ಕ್ಷೇತ್ರಾದ್ಯಂತ ಸುಮಾರು 100 ಕೆರೆಗಳಿದ್ದು, ಈ ಪೈಕಿ 20 ಕೆರೆಗಳಿಗೆ ಹಾನಿಯಾಗಿದೆ. ಹುಯಿಲಾಳು ಕೆರೆ, ಸಾಹುಕಾರಹುಂಡಿ ಕೆರೆ, ಜಟ್ಟಿಹುಂಡಿಕೆರೆ, ಲಿಂಗಾಂಬುದಿಕೆರೆವರೆಗೂ ಕೆರೆಗಳಿಗೆ ಹಾನಿಯಾಗಿದೆ. ರೈತರು ಬೆಳೆದಿದ್ದ ಬೆಳೆಗಳು ನಾಶವಾಗಿವೆ. ಸೇತುವೆಗಳು ಹಾನಿಗೀಡಾಗಿವೆ. ಲೋಕೋಪಯೋಗಿ ಇಲಾಖೆಯ 16 ಸೇತುವೆಗಳು, ಜಿಲ್ಲಾ ಪಂಚಾಯತ್‌ನ ಸೇತುವೆಗಳು ಹಾನಿಗೀಡಾಗಿವೆ. ಈ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ, ವರದಿ ನೀಡುವಂತೆ ತಿಳಿಸಲಾಗಿದೆ ಹಾಗಾಗಿ ಇಂದು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಸಭೆಯನ್ನು ಜಿಲ್ಲಾಧಿಕಾರಿಗಳು ನಡೆಸಿದ್ದು, ನಾಳೆ ಸಂಪೂರ್ಣ ವರದಿ ನೀಡಲಿದ್ದಾರೆ ಎಂದರು. ಡಿಸಿ ಡಾ.ಬಗಾದಿ ಗೌತಮ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎಡಿಸಿ ಮಂಜುನಾಥ ಸ್ವಾಮಿ, ಜಿಪಂ ಸಿಇಓ ಪೂರ್ಣಿಮಾ, ತಹಶೀಲ್ದಾರ್ ಗಿರೀಶ್ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿ

ಹುದ್ದೆಗಳ ಹೆಚ್ಚಳಕ್ಕೆ ಆಗ್ರಹಿಸಿ ಪತ್ರ ಚಳವಳಿ



ಮೈಸೂರು,ಸೆ.7(ಪಿಎಂ)–ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಹುದ್ದೆಗಳನ್ನು ಹೆಚ್ಚುವರಿ ಮಾಡುವಂತೆ ಒತ್ತಾಯಿಸಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ ವತಿಯಿಂದ ಬುಧವಾರ ಪತ್ರ ಚಳುವಳಿ ನಡೆಸಲಾಯಿತು. ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ಮುಖ್ಯದ್ವಾರದ ಅಂಚೆ ಪೆಟ್ಟಿಗೆಗೆ ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರಗಳನ್ನು ಹಾಕುವ ಮೂಲಕ ಪತ್ರ ಚಳವಳಿ ನಡೆಸಲಾಯಿತು.

ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ವಿವಿಧ 29 ವಿಷಯಗಳ ಸಂಬಂಧ ಒಟ್ಟು 1,242 ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟವಾಗಿದೆ. ಪ್ರಸ್ತುತ ರಾಜ್ಯದಲ್ಲಿ 410 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇದ್ದು, ಈ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಹೀಗಾಗಿ ಹುದ್ದೆಗಳ ಸಂಖ್ಯೆ ಹೆಚ್ಚಿಸಲು ಕ್ರಮ ವಹಿಸಲು ಒತ್ತಾಯಿಸಿದರು.

ಜೊತೆಗೆ ನೂತನ ಶಿಕ್ಷಣ ನೀತಿ ಪ್ರಾರಂಭಗೊಳ್ಳುತ್ತಿದೆ. ಅಲ್ಲದೆ, ಈ ಕಾಲೇಜುಗಳಲ್ಲಿ ಹಲವು ವಿಷಯಗಳಲ್ಲಿ ಕಾರ್ಯಭಾರವೂ ಹೆಚ್ಚಿದೆ. ಹೀಗಾಗಿ 1,242 ಹುದ್ದೆಗಳಿಗಿಂತ ಹೆಚ್ಚಿನ ಹುದ್ದೆಗಳ ಭರ್ತಿಗೆ ಕ್ರಮ ವಹಿಸಬೇಕು. ಕೆಲವು ಅಂಕಿ ಅಂಶಗಳ ಪ್ರಕಾರ 2,022 ಹುದ್ದೆಗಳು ಖಾಲಿ ಇವೆ. ಹಾಗಾಗಿ ನೇಮಕಾತಿಯಲ್ಲಿ 700ರಿಂದ 800 ಹುದ್ದೆಗಳ ಸಂಖ್ಯೆ ಹೆಚ್ಚಿಸಿ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಸಮಿತಿ ಗೌರವಾಧ್ಯಕ್ಷ ಎಂ.ಚಂದ್ರಶೇಖರ್, ಅಧ್ಯಕ್ಷ ಜಾಕೀರ್ ಹುಸೇನ್, ಪ್ರಧಾನ ಸಂಚಾಲಕ ಅರವಿಂದ ಶರ್ಮ, ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ದಲಿತ ಪ್ರಗತಿಪರ ಒಕ್ಕೂಟಗಳ ಸಂಚಾಲಕ ಪಿ.ರಾಜು ಮತ್ತಿತರರು ಪಾಲ್ಗೊಂಡಿದ್ದರು.



ಮಂಗಳವಾರ ವಿಧಿವಶರಾದ ವೀರಶೈವ–ಲಿಂಗಾಯತ ಸಮಾಜದ ಮುಖಂಡರೂ ಆದ ಆಹಾರ ಮತ್ತು ನಾಗರಿಕ ಸರಬರಾಜು, ಅರಣ್ಯ ಸಚಿವ ಉಮೇಶ್ ಕತ್ತಿ ಅವರಿಗೆ ಮೈಸೂರಿನ ಶ್ರೀನಿರಂಜನ ಮಠದ ಆವರಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಬಸವ ಬಳಗಗಳ ಒಕ್ಕೂಟದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಲೈಂಗಿಕ ದೌರ್ಜನ್ಯ: ಸಂತ್ರಸ್ತರು, ನೆರವಾದ ಸಂಸ್ಥೆ ಮುಖ್ಯಸ್ಥರಿಗೆ ರಕ್ಷಣೆ ನೀಡಲು ಒತ್ತಾಯಿಸಿ ಪ್ರತಿಭಟನೆ



ಮೈಸೂರು,ಸೆ.7(ಪಿಎಂ)– ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತರು ಹಾಗೂ ಇವರಿಗೆ ನೆರವಾದ ಒಡನಾಡಿ ಸೇವಾ ಸಂಸ್ಥೆಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿ ಫೆವಾರ್ಡ್–ಕೆ (ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ) ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿ ಚೌಕದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಪ್ರತಿಷ್ಠಿತ ಮಠವೊಂದರ ಸ್ವಾಮೀಜಿ ಅವರ ವಿರುದ್ಧ ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ಪ್ರಕರಣ ದಾಖಲಾಗಿರುವುದು ಆಘಾತಕಾರಿ. ಸಂತ್ರಸ್ತರು ಪ್ರಕರಣ ದಾಖಲಿಸಲು ನೆರವಾದ ಒಡನಾಡಿ ಸೇವಾ ಸಂಸ್ಥೆ ಮುಖ್ಯಸ್ಥರಿಗೆ ಬೆದರಿಕೆ ಬಂದಿರುವ ಹಿನ್ನೆಲೆಯಲ್ಲಿ ಅವರಿಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಬೆದರಿಕೆಯೊಡ್ಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅಲ್ಲದೆ, ಸಂತ್ರಸ್ತ ಬಾಲಕಿಯರಿಗೂ ಸೂಕ್ತ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿದರು. ಬಳಿಕ ಡಿಸಿ ಕಚೇರಿಗೆ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ ಮನವಿ ಸಲ್ಲಿಸಲಾಯಿತು. ಮಕ್ಕಾಜಿ ಚೌಕ, ಸಯ್ಯಾಜಿರಾವ್ ರಸ್ತೆ, ಚಿಕ್ಕ ಗಡಿಯಾರ ವೃತ್ತ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಹುಣಸೂರು ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಲಾಯಿತು. ಫೆವಾರ್ಡ್–ಕೆ ರಾಜ್ಯಾಧ್ಯಕ್ಷ ಮಹೇಶ್ ಚಂದ್ರಗುರು, ಮೈಸೂರು ವಿಭಾಗದ ಉಪಾಧ್ಯಕ್ಷೆ ಎ.ಎಸ್.ಪ್ರೇಮಾ, ಜಿಲ್ಲಾಧ್ಯಕ್ಷೆ ಕೆ.ಸರಸ್ವತಿ, ನಿಕಟಪೂರ್ವ ರಾಜ್ಯ ಉಪಾಧ್ಯಕ್ಷ ಡಾ.ಎಂ.ಪಿ.ವರ್ಷ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಏಕಮುಖ ಸಂಚಾರಕ್ಕೆ ಆದೇಶ

ಮೈಸೂರು,ಸೆ.7–ಸಾರ್ವಜನಿಕರ ಹಿತದೃಷ್ಟಿಯಿಂದ ಸುಗಮ ಸಂಚಾರ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶದಿಂದ ಮತ್ತು ಸಂಚಾರ ದಟ್ಟಣೆ ನಿಯಂತ್ರಿಸಿ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದಿನ ಗೋಕುಲ ರಸ್ತೆಯನ್ನು ಪಟ್ಟಣದ ಹಳೆ ಬಿಎಂ ರಸ್ತೆಯ ದಕ್ಷಿಣದಿಂದ ಉತ್ತರದ ರಾಷ್ಟ್ರೀಯ ಹೆದ್ದಾರಿ 275 ಕ್ಕೆ ಸೇರುವ ರಸ್ತೆವರೆಗೆ ಎಲ್ಲಾ ವಿಧವಾದ ವಾಹನಗಳನ್ನು ಏಕಮುಖ ಸಂಚಾರ ಮಾಡುವಂತೆ ಡಿಸಿ ಡಾ.ಬಗಾದಿಗೌತಮ್ ಆದೇಶಿಸಿದ್ದಾರೆ.

ಕಾಗದ ಪತ್ರ ಸಮಿತಿಯಿಂದ ಮುಡಾದ ಲೆಕ್ಕಪತ್ರ ಪರಿಶೀಲನೆ



ಮೈಸೂರು, ಸೆ. 7(ಆರ್‌ಕೆ)–ಮಂಗಳವಾರದಿಂದ ಮೈಸೂರಲ್ಲಿ ಪ್ರವಾಸ ಕೈಗೊಂಡಿರುವ ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ ಸದಸ್ಯರು ಇಂದು ಮುಡಾ ಕಚೇರಿ ಸಭಾಂಗಣದಲ್ಲಿ ನಿರ್ವಹಿಸುತ್ತಿರುವ ಲೆಕ್ಕಪತ್ರಗಳ ಪರಿಶೀಲನೆ ನಡೆಸಿದರು.

ಸಮಿತಿ ಅಧ್ಯಕ್ಷರಾದ ಶಾಸಕ ಸಾ.ರಾ. ಮಹೇಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಹಾಗೂ ಮುಖ್ಯ ಲೆಕ್ಕಾಧಿಕಾರಿ ಶ್ವೇತಾ, ಪ್ರಾಧಿಕಾರದಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ವ್ಯಯಿಸಿರುವ ಹಣ, ಕಚೇರಿ, ವಾಹನ ನಿರ್ವಹಣೆ, ಇತರ ಖರ್ಚುಗಳು, ವಿವಿಧ ಬಾಬ್ತುಗಳ ಶುಲ್ಕ ಹಾಗೂ ಇತರ ಮೂಲಗಳಿಂದ ಸಂಗ್ರಹವಾಗುತ್ತಿರುವ ಆರ್ಥಿಕ ಸಂಪನ್ಮೂಲಗಳ ಕುರಿತಂತೆ ಮಾಹಿತಿ ನೀಡಿ ಸಂಬಂಧಿಸಿದಂತೆ ಲೆಕ್ಕ ಶಾಖೆಯಲ್ಲಿ ನಿರ್ವಹಿಸುತ್ತಿರುವ ದಾಖಲೆಪತ್ರಗಳನ್ನು ಸಲ್ಲಿಸಿದರು.


ಆದಾಯ ಮತ್ತು ಖರ್ಚಿನ ಬಗ್ಗೆ ಚೆಕ್ ಹಾಗೂ ಆನ್‌ಲೈನ್ ಮೂಲಕವೇ ವಹಿವಾಟು ನಡೆಸುತ್ತಿದ್ದು, ನಿಯಮಾನುಸಾರ ಬ್ಯಾಂಕ್ ಖಾತೆಗೆ ಹಣ ಜಮಾ ಆಗುತ್ತಿದ್ದು, ನಗದು ವ್ಯವಹಾರ ಶೂನ್ಯವಾಗಿದೆ ಎಂಬುದನ್ನು ಶ್ವೇತಾ ಅವರು ಸಮಿತಿ ಗಮನಕ್ಕೆ ತಂದರು. ಅದೇ ಸಭಾಂಗಣದಲ್ಲಿ ಸಮಿತಿ ಸದಸ್ಯರು ಮೈಸೂರು ನಗರಪಾಲಿಕೆ ಕಚೇರಿಗೆ ಸಂಬಂಧಿಸಿದ ಲೆಕ್ಕಪತ್ರಗಳ ಕುರಿತಂತೆ ದಾಖಲಾತಿಗಳನ್ನು ಪರಿಶೀಲಿಸಿ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಹೆಚ್ಚುವರಿ ಆಯುಕ್ತೆ ಎಂ.ಕೆ.ಸವಿತಾ ಹಾಗೂ ಮುಖ್ಯ ಲೆಕ್ಕಾಧಿಕಾರಿ ಮುತ್ತಾ ಮಾಹಿತಿ ನೀಡಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಎಲ್ಲಾ ಬಗೆಯ ಆರ್ಥಿಕ ವಹಿವಾಟುಗಳ ಕುರಿತಂತೆ ನಿರ್ವಹಿಸುತ್ತಿರುವ ಕಾಗದ ಪತ್ರಗಳನ್ನು ಕಾಲ ಕಾಲಕ್ಕೆ ವರದಿಯೊಂದಿಗೆ ನಗರಾಭಿವೃದ್ಧಿ ಇಲಾಖೆಗೆ ತಲುಪಿಸುವ ಮೂಲಕ ಆರ್ಥಿಕ ಶಿಸ್ತು, ಪಾರದರ್ಶಕ ಆಡಳಿತಕ್ಕೆ ಆದ್ಯತೆ ನೀಡಬೇಕೆಂದು ಸಮಿತಿ ಅಧ್ಯಕ್ಷ ಸಾ.ರಾ.ಮಹೇಶ್, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರಿಗೆ ಸಲಹೆ ನೀಡಿದರು.

ಸಮಿತಿ ಸದಸ್ಯರಾದ ಎಲ್.ನಾಗೇಂದ್ರ, ಡಾ.ಕೆ.ಅನ್ನದಾನಿ, ಡಾ.ಡಿ.ತಿಮ್ಮಯ್ಯ, ಎಂ.ಜಿ. ದಿನೇಶ್ ಗೂಳಿಗೌಡ, ಕೆ.ಎಸ್.ನವೀನ್, ಪರಣ್ಣ ಈಶ್ವರಪ್ಪ, ಜೆ.ಬಿ.ಜ್ಯೋತಿ ಗಣೇಶ್, ಎ.ಎಸ್.ಜಯರಾಂ, ಸಿ.ಎನ್.ಮಂಜೇಗೌಡ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು. ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಅಜಯ್ ನಾಗಭೂಷಣ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮುಡಾ ಮತ್ತು ಪಾಲಿಕೆ ಅಧಿಕಾರಿಗಳು ಸಭೆಯಲ್ಲಿದ್ದರು.

ಮಂಗಳವಾರ ತೀವ್ರ ಹೃದಯಾಘಾತದಿಂದ ನಿಧನರಾದ ಉಮೇಶ್ ಕತ್ತಿ ಅವರಿಗೆ ಎರಡು ನಿಮಿಷ ಮೌನಾಚರಣೆ ಮೂಲಕ ಇದೇ ವೇಳೆ ಸಂತಾಪ ಸೂಚಿಸಲಾಯಿತು. ನಿನ್ನೆ (ಸೆ.6) ಸಾ.ರಾ. ಮಹೇಶ್ ನೇತೃತ್ವದ ಸಮಿತಿ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ ಕಾಗದ ಪತ್ರಗಳ ನಿರ್ವಹಣೆ ಕುರಿತಂತೆ ದಾಖಲೆಗಳ ಪರಿಶೀಲನೆ ನಡೆಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.09.2022 ಗುರುವಾರ, ಮಳೆ ನಕ್ಷತ್ರ: ಪುಬ್ಬ, 31.08.2022ರಿಂದ 13.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ : ತ್ರಯೋದಶಿ, ನಕ್ಷತ್ರ : ಶ್ರವಣ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಓಣಂ ಹಬ್ಬ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 61ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ ವಿದುಷಿ ಶ್ಯಾಮಲಾ ಪ್ರಕಾಶ್ ಮತ್ತು ಶೋಭಾ ಆನಂದ್ ಅವರಿಂದ ಅರ್ಜುನನ ತಪಸ್ಸು ಕುರಿತು ಕಾವ್ಯವಾಚನ, ಸಂಜೆ 6.45ಕ್ಕೆ ವಿದುಷಿ ವಾರಿಜಾಶ್ರೀ ವೇಣುಗೋಪಾಲ್ ಅವರಿಂದ ಗಾಯನ, ವಿದ್ವಾನ್ ಮತ್ತೂರ್ ಶ್ರೀನಿಧಿ–ವಯೋಲಿನ್, ವಿದ್ವಾನ್ ರಾಧೇಶ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನಮಹೋತ್ಸವ–ಅರಣ್ಯ ಇಲಾಖೆಯ ಪ್ರಾಯೋಜಿತ ಕಾರ್ಯಕ್ರಮ, 10.00 ಎಸ್. ಶಂಕರ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20 ಭಾವಗೀತೆ, 3.00 ರಾಗಲಹರಿ, ಪ್ರಸ್ತುತಿ– ಜಿ. ಪುಷ್ಪಲತಾ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಹಳ್ಳಿಹಾಡು–ಸಿ.ಎಂ. ನರಸಿಂಹಮೂರ್ತಿ ಮತ್ತು ಸಂಗಡಿಗರು, 4.30 ರಸಮಂಜರಿ– ಭಾಸ ಮಹಾಕವಿಯ ಏಕಾಂಕ ನಾಟಕ "ಕರ್ಣಭಾರಂ", ಪ್ರಸ್ತುತಿ– ಡಾ.ಟಿ.ವಿ.ಸತ್ಯನಾರಾಯಣ ಮತ್ತು ಸಂಗಡಿಗರು, 6.50 ಕೃಷಿರಂಗ–ಕಿಸಾನ್‌ವಾಣಿ–ಜೈವಿಕ ಗೊಬ್ಬರಗಳು ಮತ್ತು ಪ್ರಯೋಜನಗಳನ್ನು ಕುರಿತು ಡಾ.ಎಲ್.ಮಾಲತಿ ಅವರೊಡನೆ ಸಂದರ್ಶನ. ಸಂದರ್ಶಕರು– ಎಸ್.ಸುಬ್ರಮಣ್ಯ, 9.00 ಯುವವಾಣಿ–ಯುವ ಪ್ರತಿಭೆ, 9.30 ಕನ್ನಡ ಭಾರತಿ, 10.30 ಸವಿನೆನಪು

■ **ಮೈಸೂರು ವಿಶ್ವವಿದ್ಯಾನಿಲಯ, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗ, ಇಂಡಿಯನ್ ಅಕಾಡೆಮಿ ಆಫ್ ಬಯೊಮೆಡಿಕಲ್ ಸೈನ್ಸ್:** ಟ್ರಾನ್ಸ್‌ಲೇಷನ್ ರಿಸರ್ಚ್ ಕುರಿತು ದಕ್ಷಿಣ ಭಾರತದ ಮೊದಲ ಅಂತರ ರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಪ್ರಾಸ್ತಾವಿಕ ಭಾಷಣ: ಬೆಂಗಳೂರು ಜಯದೇವ ಹೃದಯ ರೋಗ ವಿಜ್ಞಾನ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಉಪಸ್ಥಿತರು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಯೂನಿವರ್ಸಿಟಿ ಮೆಡಿಕಲ್ ಸೆಂಟರ್‌ನ ಡಾ.ಹರಿ ಎಸ್. ಶರ್ಮ, ಲಕ್ನೋ ಕಿಂಗ್ ಜಾರ್ಜಸ್ ಮೆಡಿಕಲ್ ಯೂನಿವರ್ಸಿಟಿಯ ಪ್ರೊ. ಅಬ್ಬಾಸ್ ಆಲಿ ಮೇದಿ, ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗದ ಅಧ್ಯಕ್ಷೆ ಪ್ರೊ.ಎಸ್.ಎಸ್ ಮಾಲಿನಿ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 12.30ಕ್ಕೆ.

■ **ಮಹಾಲಿಂಗೇಶ್ವರ ಸೇವಾ ಸಮಿತಿ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನ :** ಕಾರ್ತಿಕೇಯ ಕಲ್ಯಾಣ ಯಕ್ಷಗಾನ ಪ್ರದರ್ಶನ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30 ರಿಂದ.

ಉಮೇಶ್ ಕತ್ತಿಯವರಿಗೆ ಶ್ರದ್ಧಾಂಜಲಿ



ಮೈಸೂರು, ಸೆ.7(ಎಸ್‌ಪಿಎನ್)– ಅರಣ್ಯ, ಆಹಾರ ಮತ್ತು ನಾಗರಿಕ ಇಲಾಖೆ ಸಚಿವ ಉಮೇಶ್ ಕತ್ತಿ ಅವರ ನಿಧನಕ್ಕೆ ಮಂಡಿ ಮೊಹಲ್ಲಾ ನಿವಾಸಿಗಳು, ಆಟೋ ಚಾಲಕರು ಕಂಬನಿ ಮಿಡಿದಿದ್ದು, ಸಯ್ಯಾಜಿರಾವ್ ರಸ್ತೆಯ ಪಂಚಮುಖಿ ಗಣಪತಿ ದೇವಸ್ಥಾನ ಬಳಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮೇಣಬತ್ತಿ ಹಿಡಿದು ಶ್ರದ್ಧಾಂಜಲಿ ಸಲ್ಲಿಸಿದರು. ಕ್ರಿಯಾಶೀಲ ಮುಖಂಡ ಉಮೇಶ್ ಕತ್ತಿ ಅವರ ಅಕಾಲಿಕ ನಿಧನದಿಂದ ರಾಜ್ಯಕ್ಕೆ ಅಪಾರ ನಷ್ಟವಾಗಿದೆ. 8 ಬಾರಿ ಶಾಸಕರಾಗಿ, ಮೂರು ಬಾರಿ ಸಚಿವರಾಗಿ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿ, ಜನರ ಮೆಚ್ಚುಗೆಗೆ ಪಾತ್ರವಾಗಿದ್ದಾರೆ ಎಂದು ನಿವಾಸಿಗಳು ಕಂಬನಿ ಮಿಡಿದರು. ಈ ವೇಳೆ ಕೇಬಲ್ ವಿಜಿ, ಸೂರಜ್, ಸದಾಶಿವ, ಗೋಪಾಲ್, ಶಿವಾಜಿ, ಸ್ವಾಮಿ, ಮಧು, ಸುಧೀರ್, ಸತೀಶ್, ಪಂಕಜ್, ಹರಿಯಾರ್, ಚಿರು, ಪ್ರಭು, ಜೀವಧಾರ ರಕ್ತ ನಿಧಿ ಕೇಂದ್ರ ನಿರ್ದೇಶಕ ಗಿರೀಶ್ ಹಾಗೂ ಆಟೋ ಚಾಲಕರು, ರಸ್ತೆ ಬದಿ ವ್ಯಾಪಾರಿಗಳು ಶ್ರದ್ಧಾಂಜಲಿ ಸಭೆಯಲ್ಲಿ ಭಾಗಿಯಾಗಿದ್ದರು.

ಉಮೇಶ್ ಕತ್ತಿ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ



ಮೈಸೂರು, ಸೆ.7– ಅರಣ್ಯ, ಆಹಾರ ಮತ್ತು ನಾಗರಿಕ ಇಲಾಖೆ ಸಚಿವ ಉಮೇಶ್ ಕತ್ತಿ ಅವರ ನಿಧನಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಸಚಿವ ಉಮೇಶ್ ಕತ್ತಿ ಅವರು, ಮೂರು ಬಾರಿ ಸಚಿವರಾಗಿ ಪ್ರಸ್ತುತ ಅರಣ್ಯ ಮತ್ತು ಆಹಾರ ಇಲಾಖೆಯಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ತಂದೆ ವಿಶ್ವನಾಥ್ ಕತ್ತಿ ನಿಧನದ ನಂತರ ಸಕ್ರಿಯ ರಾಜಕಾರಣ ಪ್ರವೇಶಿಸಿ, ಜನನಾಯಕರಾಗಿ ಬೆಳೆದಿದ್ದರು. ಹುಕ್ಕೇರಿ ವಿಧಾನಸಭಾ ಕ್ಷೇತ್ರದಿಂದ 8 ಬಾರಿ ಆಯ್ಕೆಯಾಗಿ, ಜನ ಸೇವೆಯಲ್ಲಿ ತೊಡಗಿಕೊಂಡಿದ್ದರು. ಸಚಿವ ಉಮೇಶ್ ಕತ್ತಿ ಅವರು, ಮೈಸೂರಿನ ಶ್ರೀ ಮಠಕ್ಕೆ ಆಗಿಂದಾಗ್ಗೆ ಆಗಮಿಸಿ, ಕುಶಲೋಪರಿ ಮಾತುಕತೆ ನಡೆಸುತ್ತಿದ್ದರು. ಈ ಅನಿರೀಕ್ಷಿತ ಘಟನೆಗೆ ಶ್ರೀಗಳು, ತೀವ್ರ ಸಂತಾಪ ವ್ಯಕ್ತಪಡಿಸುತ್ತ, ಅವರ ಆತ್ಮಕ್ಕೆ ಶಾಂತಿ ಕೋರಿ, ಅವರ ಕುಟುಂಬ ವರ್ಗದವರು, ಬಂಧು–ಬಾಂಧವರು ಮತ್ತು ಅಪಾರ ಅಭಿಮಾನಿ ವೃಂದಕ್ಕೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇನೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತ್ಯಾಚಾರ, ಹತ್ಯೆ ಅಪರಾಧಿಗಳ ಬಿಡುಗಡೆ ವಿರೋಧಿಸಿ ಪ್ರತಿಭಟನಾ ಸಭೆ

ದೇಶದ ಸಂವಿಧಾನ ಉಳಿಸಲು ಪರ್ಯಾಯ ರಾಜಕೀಯ ಅಗತ್ಯ

ಬಿಲ್ಕಿಸ್ ಬಾನುಗೆ ಮಾತ್ರವಲ್ಲದೆ, ಇಡೀ ದೇಶದ ಜನತೆಗೆ ನ್ಯಾಯ ಒದಗಿಸಬೇಕು; ಜನವಾದಿ ಮಹಿಳಾ ಸಂಘಟನೆ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲ ಬಲವಾದ ಪ್ರತಿಪಾದನೆ



ಮೈಸೂರಿನ ಗಾಂಧಿಚೌಕದಲ್ಲಿ ಬಿಲ್ಕಿಸ್ ಬಾನು ಪ್ರಕರಣದ 11 ಮಂದಿ ಅಪರಾಧಿಗಳ ಬಿಡುಗಡೆ ಖಂಡಿಸಿ ಬುಧವಾರ ಪ್ರತಿಭಟನಾ ಸಭೆ ನಡೆಯಿತು.

ದೇಶದಲ್ಲಿ ಹೋರಾಟದ ದನಿಗಳು ಗಟ್ಟಿಗೊಳ್ಳಬೇಕು. ಬಿಲ್ಕಿಸ್ ಬಾನು ಪ್ರಕರಣದಲ್ಲಿ ಅಪರಾಧಿಗಳ ಹೆಸರುಗಳು ನಮ್ಮ ಮನಸ್ಸಿನಲ್ಲಿ ಇಲ್ಲ. ಕೇವಲ 11 ಮಂದಿ ಎಂದು ಅಂಕಿಗಳಾಗಿ ಉಳಿದಿದ್ದು, ಇದಕ್ಕಿಂತಲೂ ಮುಖ್ಯವಾಗಿ ಅವರ ಹೆಸರುಗಳನ್ನು ಬಯಲಿಗೆಳೆಯಬೇಕು. ಸನ್ನಡತೆ ನಿಯಮ ಮೀರಿ ಬಿಡುಗಡೆಗೊಂಡ ಇವರಿಗೆ ಆರತಿಯೆತ್ತಿ ಸ್ವಾಗತಿಸಲಾಗಿದೆ. ಅವರನ್ನು ಸುರಕ್ಷಿತ ಜಾಗದಲ್ಲಿ ಇರುವಂತೆಯೂ ನೋಡಿಕೊಳ್ಳಲಾಗಿದೆ. ಇಂತಹ ಮನಸ್ಥಿತಿ ಪ್ರಶ್ನಿಸಬೇಕಿದೆ. **–ಡಾ.ಸಬೀಹಾ ಭೂಮಿಗೌಡ**

11 ಮಂದಿ ಅಪರಾಧಿಗಳ ಬಿಡುಗಡೆ ಮೂಲಕ ಸಂವಿಧಾನ ಮತ್ತು ಮಹಿಳಾ ಸಮುದಾಯದ ಘನತೆಗೆ ಅಪಮಾನ ಮಾಡಲಾಗಿದೆ. ಈ ಎಲ್ಲಾ ಅಪರಾಧಿಗಳಿಗೆ ಮರಣ ದಂಡನೆ ಶಿಕ್ಷೆ ಆಗಬೇಕು. ಬಿಡುಗಡೆಯ ಇಂತಹ ನಡೆ ರೂಢಿಯಾಗುವ ಸಾಧ್ಯತೆ ಇದ್ದು, ಇದು ಬಹಳ ಅಪಾಯಕಾರಿ. ದೇಶದ ಮಹಿಳಾ ಸಮುದಾಯ ಇಂತಹ ಪ್ರಭುತ್ವದ ಬಗ್ಗೆ ಎಚ್ಚರ ವಹಿಸಬೇಕು. ಈ ನಿಟ್ಟಿನಲ್ಲಿ ಮುಂಬರುವ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. **–ಬಡಗಲಪುರ ನಾಗೇಂದ್ರ**

ಮೈಸೂರು,ಸೆ.7(ಪಿಎಂ)– ದೇಶದ ಸಂವಿಧಾನ ಉಳಿಸಿಕೊಳ್ಳಲು ಪರ್ಯಾಯ ರಾಜಕೀಯ ಅಗತ್ಯವಿದ್ದು, ಅದಕ್ಕೆ ಪೂರಕವಾಗಿ ಮುನ್ನಡೆಯಬೇಕಿದೆ. ಆ ಮೂಲಕ ಬಲ್ಕಿಸ್ ಬಾನುಗೆ ಮಾತ್ರವಲ್ಲದೆ, ಇಡೀ ದೇಶದ ಜನತೆಗೆ ನ್ಯಾಯ ಒದಗಿಸಿಕೊಡಬೇಕಿದೆ ಎಂದು ಜನವಾದಿ ಮಹಿಳಾ ಸಂಘಟನೆ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲ ಹೇಳಿದರು.

ಮೈಸೂರಿನ ಗಾಂಧಿಚೌಕದಲ್ಲಿ ದೇಶದ ಸಂವಿಧಾನ ರಕ್ಷಣಾ ಸಮಿತಿ ವತಿಯಿಂದ ಬಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ, ಆಕೆಯ ಕುಟುಂಬದ 7 ಮಂದಿ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದ ಎಲ್ಲಾ 11 ಮಂದಿಯನ್ನು ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ಕ್ರಮ ಖಂಡಿಸಿ 'ಗುಂಪು ಅತ್ಯಾಚಾರ, ಕೊಲೆ ಅಪರಾಧಿಗಳ ಬಿಡುಗಡೆ ನ್ಯಾಯವೇ!' ಶೀರ್ಷಿಕೆಯಡಿ ಬುಧವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು. ಬಲ್ಕಿಸ್‌ಬಾನು ಪರ ನ್ಯಾಯ ಕೇಳುವುದು ಕೇವಲ ಆಕೆ ಪರವಾದ ನ್ಯಾಯ ಮಾತ್ರವಲ್ಲ, ಸಂವಿಧಾನ ರಕ್ಷಣೆಯ ಕರ್ತವ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇಂದಿಗೂ ಈ ದೇಶದ ಎಲ್ಲಾ ಧರ್ಮ, ಜಾತಿಯ ಬಹುಸಂಖ್ಯಾತ ಜನತೆ ಶಾಂತಿ ಹಾಗೂ ನೈಜ ಪ್ರಗತಿಯನ್ನು ಬಯಸುತ್ತಾರೆ. ಬಲ್ಕಿಸ್ ಬಾನು ಪ್ರಕರಣ ಸೇರಿದಂತೆ ಇಂತಹ ಘಟನೆಗಳ ವಿರುದ್ಧ ನಾವು ಪ್ರತಿಭಟಿಸುವ ಹಕ್ಕು ಉಳಿಸಿಕೊಳ್ಳಬೇಕೆಂದರೆ ದೇಶದಲ್ಲಿ ತರಬೇಕಿರುವ ರಾಜಕೀಯ ಬದಲಾವಣೆ ಬಗ್ಗೆ ಆಲೋಚಿಸಬೇಕಿದೆ ಎಂದು ತಿಳಿಸಿದರು.

ರೈತರ ಹೋರಾಟ ಮಾದರಿ: ಈ ದೇಶದ ಸಂವಿಧಾನ ಉಳಿಸಿಕೊಳ್ಳಬೇಕೆಂದರೆ ನೈಜವಾದ ರಾಜಕೀಯ ಪರ್ಯಾಯಕ್ಕಾಗಿ ನಾವು ಕೆಲಸ ಮಾಡಬೇಕಿದೆ. ಇಂತಹ ಬದಲಾವಣೆಗೆ ನಾವು ಮುಂದಾಗದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟಿಸುವ, ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳಬೇಕಾಗುತ್ತದೆ. ರೈತರು ವರ್ಷ ಕಾಲ ಹೋರಾಟ ಮಾಡಿದರು. ಎಲ್ಲಾ ರೀತಿಯ ಕಠಿಣ ಅಡೆತಡೆ ನಡುವೆಯೂ ಹಿಂದೆ ಸರಿಯಲಿಲ್ಲ. ಪರಿಣಾಮ ಕೊನೆಗೆ ಕರಾಳ ಕೃಷಿ ಮಸೂದೆ ವಾಪಸ್ಸು ಪಡೆಯಬೇಕಾಯಿತು. ಅಂತಹ ಹೋರಾಟವನ್ನು ದೇಶದ ಸಂವಿಧಾನ ಉಳಿಸಲು ಮಾಡಲೇಬೇಕಿದೆ ಎಂದರು.

ಸಾಮೂಹಿಕ ಅತ್ಯಾಚಾರ, ಭ್ರಷ್ಟಾಚಾರ ಪ್ರಕರಣ, ಮಾನವ ಕಳ್ಳ ಸಾಗಾಣಿಕೆ ಕೃತ್ಯಗಳಿಗೆ ಕ್ಷಮಾದಾನ ನೀತಿಯಡಿ ಬಿಡುಗಡೆ ಮಾಡುವಂತಿಲ್ಲ ಎಂದು ಪ್ರಧಾನಿಗಳ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಇದು ಇಡೀ ದೇಶದ ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ. ಇತ್ತೀಚೆಗೆ ಮಾಧ್ಯಮದ ಪ್ಯಾನೆಲ್ ಚರ್ಚೆ ನೋಡುತ್ತಿದ್ದೆ. ಈ ಎಲ್ಲಾ 11 ಮಂದಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಕೈದಿಗಳಿಗೆ ಕ್ಷಮಾದಾನದಡಿ ಬಿಡುಗಡೆಗೆ ಕೇಂದ್ರ ಸರ್ಕಾರದ ಅನುಮತಿ ಇದೆ ಎಂದು ವಕೀಲರೊಬ್ಬರು ಗಟ್ಟಿ ದನಿಯಲ್ಲಿ ಚರ್ಚೆ ವೇಳೆ ಹೇಳಿದರು. ಅಂದರೆ ಇವರು ಹೇಳುವುದು ಒಂದು, ಮಾಡುವುದು ಇನ್ನೊಂದು. **–ಕೆ.ಎಸ್.ವಿಮಲ, ಜನವಾದಿ ಮಹಿಳಾ ಸಂಘಟನೆ ರಾಜ್ಯ ಉಪಾಧ್ಯಕ್ಷೆ**

ಡಾ.ಅಂಬೇಡ್ಕರ್ ಅವರ ಎಲ್ಲಾ ಪ್ರಯತ್ನಗಳ ಫಲವಾಗಿ ಬಂದ ಸಂವಿಧಾನ ಉಳಿಸಿಕೊಳ್ಳಬೇಕು. ದೇವರು–ಧರ್ಮ ಹಾಗೂ ಗಡಿ ವಿಚಾರ ಮುಂದಿಟ್ಟುಕೊಂಡು ಭಾವನಾತ್ಮಕವಾಗಿ ಸೆಳೆಯುವ ಪ್ರಯತ್ನಗಳ ಬಗ್ಗೆ ಎಚ್ಚರ ವಹಿಸಬೇಕು ಎಂದರು. ಹಿಂದುತ್ವದ ಅಮಲು ತಲೆಗೆ ಏರಿಸಿಕೊಂಡ ವ್ಯಕ್ತಿಗಳು ಬಲ್ಕಿಸ್ ಬಾನು ಮತ್ತು ಆಕೆ ಕುಟುಂಬದವರ ಮೇಲೆ ದಾಳಿ ಮಾಡಿದರು. 'ಮಾತೃ ದೇವೋ ಭವ' ಎಂದು ಜಪಿಸುವ ಇವರಿಂದ 5 ತಿಂಗಳ ಗರ್ಭಿಣಿ ಬಲ್ಕಿಸ್‌ಬಾನು ಮೇಲೆ ಸಾಮೂಹಿಕ ಅತ್ಯಾಚಾರ ನಡೆಯಿತು. ಆಕೆಯ ಕಂಕುಳಲ್ಲಿದ್ದ ಮಗುವನ್ನು ಕಿತ್ತು ಕಲ್ಲಿಗೆ ಬಡಿದು ಕೊಲ್ಲುತ್ತಾರೆ. ಈ ಘಟನೆ ನಡೆದ ಕೇವಲ 10 ದಿನಗಳಲ್ಲಿ ಜನವಾದಿ ಮಹಿಳಾ ಸಂಘಟನೆಯ ನಿಯೋಗ ಗುಜರಾತ್‌ನ ಹಿಂಸಾಚಾರ ನಡೆದ ಸ್ಥಳಗಳಿಗೆ ಭೇಟಿ ನೀಡಿತ್ತು. ಅಲ್ಲಿ ಅಧ್ಯಯನ ನಡೆಸಿ, 'ಗುಜರಾತ್ ನರಮೇಧ' ಹೆಸರಿನಲ್ಲಿ ಪುಸ್ತಕ ಕೂಡ ಹೊರತರಲಾಗಿದೆ. ಹಾಗಾಗಿ ನಾನು ಮಾತನಾಡುತ್ತಿರುವುದು ಮಾಧ್ಯಮ, ಸಾಮಾಜಿಕ ಮಾಧ್ಯಮಗಳಲ್ಲಿ ಕೇಳಿದಂತಹ ಆಧಾರದಲ್ಲಿ ಅಲ್ಲ. ಬಲ್ಕಿಸ್ ಬಾನು ಅವಳು ತನ್ನ ಅಂದಿನ ಕರಾಳ ಕಥೆ ಹೇಳಿಕೊಳ್ಳುವಾಗ ಕಲ್ಲು ಕರಗುವಂತಹ ವ್ಯಥೆ ವ್ಯಕ್ತಪಡಿಸಿದಳು ಎಂದು ವಿಷಾದಿಸಿದರು.

ವಿಜಯಪುರ ಮಹಿಳಾ ವಿವಿ ವಿಶ್ರಾಂತ ಕುಲಪತಿ ಡಾ.ಸಬೀಹಾ ಭೂಮಿಗೌಡ, ಕರ್ನಾಟಕ ರಾಜ್ಯ ರೈತರ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿದರು. ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ಅಧ್ಯಕ್ಷತೆ ವಹಿಸಿದ್ದರು. ವಿವಿಧ ಸಂಘಟನೆಗಳ ಮುಖಂಡರಾದ ಕೆ.ಬಸವರಾಜ್, ಎನ್.ವಿಜಯ್ ಕುಮಾರ್, ಜಗದೀಶ್ ಸೂರ್ಯ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಇಂದಿನಿಂದ 'ಟ್ರಾನ್ಸ್‌ಲೇಷನಲ್ ರೀಸರ್ಚ್': ಅಂತರ್ರಾಷ್ಟ್ರೀಯ ವಿಚಾರಗೋಷ್ಠಿ

ಮೈಸೂರು,ಸೆ.7(ಆರ್‌ಕೆ)– ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಾಳೆ (ಸೆ.8)ಯಿಂದ ಎರಡು ದಿನಗಳ 'ಟ್ರಾನ್ಸ್‌ಲೇಷನಲ್ ರೀಸರ್ಚ್' ಕುರಿತ ಅಂತರರಾಷ್ಟ್ರೀಯ ವಿಚಾರಗೋಷ್ಠಿ ಹಾಗೂ ಇಂಡಿಯನ್ ಅಕಾಡೆಮಿ ಆಫ್ ಬಯೋ ಮೆಡಿಕಲ್ ಸೈನ್ಸಸ್ ಪ್ರಥಮ ದಕ್ಷಿಣ ವಲಯ ಸಮ್ಮೇಳನವನ್ನು ಏರ್ಪಡಿಸಲಾಗಿದೆ.



ಪ್ರೊ.ಹೇಮಂತಕುಮಾರ್



ಡಾ.ಸಿ.ಎನ್.ಮಂಜುನಾಥ್

ಮೈಸೂರು ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ಅಂಡ್ ಜೆನೋಮಿಕ್ಸ್ ವತಿಯಿಂದ ಮಾನವನ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಬಯೋ ಮೆಡಿಕಲ್ ಸೈನ್ಸಸ್‌ನ ಅನ್ವೇಷಣೆ ಕುರಿತಾಗಿ ಆಯೋಜಿಸಿರುವ ಅಂತರರಾಷ್ಟ್ರೀಯ ಸಮ್ಮೇಳನವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಗುರುವಾರ ಮಧ್ಯಾಹ್ನ 12.30 ಗಂಟೆಗೆ ಉದ್ಘಾಟಿಸುವರು. ನಾಡಿನ ಖ್ಯಾತ ಹೃದ್ರೋಗ ತಜ್ಞರಾದ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್. ಮಂಜುನಾಥ್ ಪ್ರಧಾನ ಭಾಷಣ ಮಾಡುವರು. ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಆಮ್‌ಸ್ಟರ್‌ಡಾಮ್ ಯೂನಿವರ್ಸಿಟಿ ಮೆಡಿಕಲ್ ಸೆಂಟರ್‌ನ ಡಾ.ಹರಿ ಎಸ್.ಶರ್ಮಾ, ಲಕ್ನೋದ ಕಿಂಗ್ ಜಾರ್ಜಸ್ ಮೆಡಿಕಲ್ ಯೂನಿವರ್ಸಿಟಿಯ ಪ್ರೊ. ಅಬ್ಬಾಸ್ ಅಲಿ ಮಹ್ದಿ ಹಾಗೂ ಜೆನೆಟಿಕ್ಸ್ ಅಂಡ್ ಜೆನೋಮಿಕ್ಸ್ ಅಧ್ಯಯನ ಕೇಂದ್ರದ ಮುಖ್ಯಸ್ಥೆ ಪ್ರೊ. ಎಸ್.ಎಸ್.ಮಾಲಿನಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ದೇಶ–ವಿದೇಶಗಳಿಂದ ಖ್ಯಾತ ವೈದ್ಯರು, ವೈದ್ಯಕೀಯ ಕ್ಷೇತ್ರದ ಹೆಸರಾಂತ ತಜ್ಞರು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದು, ಶುಕ್ರವಾರ ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ.

ಕೆಎಸ್‌ಐಸಿಯಲ್ಲಿ ಅನುಕಂಪದ ಉದ್ಯೋಗಕ್ಕೆ ಆಗ್ರಹಿಸಿ ಪ್ರತಿಭಟನೆ

ಮೈಸೂರು, ಸೆ.7–ಕೆಎಸ್‌ಐಸಿ ರೇಷ್ಮೆ ಕಾರ್ಖಾನೆಯಲ್ಲಿ ಸೇವೆಯಲ್ಲಿರುವಾಗಲೇ ಮೃತಪಟ್ಟ 76 ಸಿಬ್ಬಂದಿಯ ವಾರಸುದಾರರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿ ಮೈಸೂರಿನ ರೇಷ್ಮೆ ಕಾರ್ಖಾನೆ ಮುಂಭಾಗ ಕೆಎಸ್‌ಐಸಿ ಹಾಗೂ ಇತರ ಸಂಸ್ಥೆ ನೌಕರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

2000ನೇ ವರ್ಷದಿಂದ 2016ರವರೆಗೆ ಸೇವೆಯಲ್ಲಿದ್ದಾಗಲೇ ಮೃತಪಟ್ಟಿರುವ 76 ಸಿಬ್ಬಂದಿಯ ವಾರಸುದಾರರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು, ಈ ಸಿಬ್ಬಂದಿಯ ವಾರಸುದಾರರಿಗೆ ಉದ್ಯೋಗ ನೀಡಬೇಕೆಂದು ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಅಧೀನ ಕಾರ್ಯದರ್ಶಿಗಳು ನಿರ್ದೇಶನ ನೀಡಿದ್ದರೂ, ಅದನ್ನು ಉಲ್ಲಂಘಿಸಿ 2017ರ ಆ.3ರ ನಂತರ ಸಲ್ಲಿಸಲ್ಪಟ್ಟಿರುವ 22 ಅರ್ಜಿದಾರರಿಗೆ ಮಾತ್ರ ಉದ್ಯೋಗ ನೀಡಲಾಗಿದೆ ಎಂದು ಆರೋಪಿಸಿದ್ದಾರೆ. ಮನವಿಯನ್ನು ಕೆಎಸ್‌ಐಸಿ ರೇಷ್ಮೆ ನೇಯ್ಗೆ ಕಾರ್ಖಾನೆ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸಲಾಯಿತು.

ಮಣಿಪಾಲ್ ಸಂಸ್ಥೆಗಳ ಮೇಲೆ ಏಕಕಾಲಕ್ಕೆ 22 ಕಡೆ ಐಟಿ ದಾಳಿ

ಬೆಂಗಳೂರು, ಸೆ.7– ಬೆಂಗಳೂರು ಸೇರಿದಂತೆ ದೇಶದ 22 ಕಡೆಗಳಲ್ಲಿ ಮಣಿಪಾಲ್ ಸಂಸ್ಥೆಗಳ ಮೇಲೆ ಏಕಕಾಲಕ್ಕೆ ಐಟಿ ಅಧಿಕಾರಿಗಳು ಬೆಳ್ಳಂಬೆಳಗ್ಗೆ ದಾಳಿ ನಡೆಸಿದ್ದಾರೆ.

4 ಇನ್ನೋವಾ ವಾಹನದಲ್ಲಿ ಆಗಮಿಸಿರುವ ಅಧಿಕಾರಿಗಳು ಹೈಗ್ರೌಂಡ್ಸ್ ಪೊಲೀಸ್ ಠಾಣೆ ಬಳಿ ಇರುವ ಮಣಿಪಾಲ್ ಆಸ್ಪತ್ರೆ ಮೇಲೆ ದಾಳಿ ನಡೆಸಿದ್ದಾರೆ. ಬೆಳಗಿನ ಜಾವ 6 ಗಂಟೆಗೆ ಆಗಮಿಸಿದ ಐಟಿ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ. 200ಕ್ಕೂ ಹೆಚ್ಚು ಐಟಿ ಅಧಿಕಾರಿಗಳಿಂದ ಒಟ್ಟು 22 ಕಡೆಗಳಲ್ಲಿ ದಾಳಿ ನಡೆಸಿ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ. ಓಲ್ಡ್ ಏರ್‌ಪೋರ್ಟ್ ರೋಡ್, ಕನ್ನಿಂಗ್ ಹ್ಯಾಮ್ ರೋಡ್, ಯಶವಂತಪುರ, ಏರ್‌ಪೋರ್ಟ್ ರೋಡ್ ಸೇರಿದಂತೆ 22 ಕಡೆ ದಾಳಿ ನಡೆದಿದೆ. ಬೆಂಗಳೂರಿನಲ್ಲಿ ಮಣಿಪಾಲ್ ಗ್ರೂಪ್ ಮೇಲೆ ಐಟಿ ದಾಳಿ ಹಿನ್ನೆಲೆ, ಮಣಿಪಾಲ ಗ್ರೂಪ್‌ನ ಫೈನಾನ್ಸ್ ವಿಭಾಗದಲ್ಲಿ ಐಟಿ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

ಅಕ್ರಮ ಖಾತೆಗಳ ರದ್ದುಪಡಿಸಲು ಆಗ್ರಹಿಸಿ ಇಂದು ಬೋಗಾದಿ ಪಪಂ ಮುಂದೆ ಗ್ರಾಮಸ್ಥರ ಪ್ರತಿಭಟನೆ

ಮೈಸೂರು,ಸೆ.7(ಆರ್‌ಕೆಬಿ)–ಮೈಸೂರು ತಾಲೂಕು ಬೋಗಾದಿ ಗ್ರಾಮದ ಸರ್ವೆ ನಂ.319ರ ಆಶ್ರಯ ಬಡಾವಣೆಯಲ್ಲಿ ನಿರ್ಗತಿಕರಿಗೆ ನೀಡಬೇಕಾದ ನಿವೇಶನಗಳಿಗೆ ಸಂಬಂಧಿಸಿದಂತೆ ನಕಲಿ ದಾಖಲಾತಿ ಸೃಷ್ಟಿಸಿ ನೂರಕ್ಕೂ ಹೆಚ್ಚು ನಿವೇಶನಗಳಿಗೆ ಮಾಡಿರುವ ಅಕ್ರಮ ಖಾತೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ ಬೋಗಾದಿ ಗ್ರಾಮದ ಮುಖಂಡರು ಗುರುವಾರ (ಸೆ.8) ಬೆಳಗ್ಗೆ 11 ಗಂಟೆಗೆ ಬೋಗಾದಿ ಪಟ್ಟಣ ಪಂಚಾಯಿತಿ ಮುಂದೆ ಪ್ರತಿಭಟನೆ ನಡೆಸಲಿರುವುದಾಗಿ ಬಿಜೆಪಿ ಮುಖಂಡ ಅರುಣ್‌ಕುಮಾರ್‌ಗೌಡ ತಿಳಿಸಿದ್ದಾರೆ.



ಅರುಣ್‌ಕುಮಾರ್‌ಗೌಡ

ಗ್ರಾಮದ ಸರ್ವೆ ನಂ.319ರಲ್ಲಿ ಆಶ್ರಯ ಯೋಜನೆಯಡಿ 2004ರಲ್ಲಿ ಕಾನೂನು ಬದ್ಧವಾಗಿ 357 ನಿವೇಶನಗಳನ್ನು ಮಾತ್ರ ಸರ್ಕಾರ ಮಂಜೂರು ಮಾಡಿ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಿದ್ದಾರೆ. ನಂತರ ಕೆಲ ಪಟ್ಟಭದ್ರ ಹಿತಾಸಕ್ತಿಗಳು ನೂರಕ್ಕೂ ಹೆಚ್ಚು ನಿವೇಶನಗಳ ನಕಲಿ ಹಕ್ಕು ಪತ್ರ ಸೃಷ್ಟಿಸಿ, ಕಾನೂನುಬಾಹಿರವಾಗಿ ನಿವೇಶನಗಳನ್ನು ಎ, ಬಿ ಎಂದು ನಮೂದಿಸಿ, ಸಾರ್ವಜನಿಕರಿಗೆ ಮಾರಾಟ ಮಾಡಿದ್ದಾರೆ. ಈ ಖಾತೆಗಳನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ಮೇಯರ್ ಚುನಾವಣೆ

ಕೋಮುವಾದಿ ಬಿಜೆಪಿ ಆಡಳಿತಕ್ಕೆ ಬರಲು ಕಾಂಗ್ರೆಸ್, ಜೆಡಿಎಸ್ ಕಾರಣ

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್‌ಮಜೀದ್ ಆರೋಪ

ಮೈಸೂರು, ಸೆ.7(ಆರ್‌ಕೆಬಿ)– ಮೈಸೂರು ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ತಾಳಿದ ಧೋರಣೆಯಿಂದಾಗಿ ಕೋಮುವಾದಿಗಳು ಮತ್ತೆ ಅಧಿಕಾರಕ್ಕೆ ಬರುವಂತಾಯಿತು ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕಿಡಿಕಾರಿದ್ದಾರೆ.




ಅಬ್ದುಲ್ ಮಜೀದ್

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಹಾನಗರಪಾಲಿಕೆಯಲ್ಲಿ ಕೋಮುವಾದಿ ಪಕ್ಷ ಅಧಿಕಾರಕ್ಕೆ ಬರಲು ಅವಕಾಶ ಮಾಡಿಕೊಡುವ ಮೂಲಕ ಜೆಡಿಎಸ್, ಕಾಂಗ್ರೆಸ್ ಪಕ್ಷಗಳು ಜನರಿಗೆ ನೀಡಿದ್ದ ವಾಗ್ದಾನವನ್ನು ಉಲ್ಲಂಘಿಸಿವೆ. ಈ ಎರಡೂ ಪಕ್ಷಗಳ ಮುಖಂಡರು ತಮ್ಮ ದುರಹಂಕಾರ ಮರೆತು ಮೈತ್ರಿ ಮಾಡಿಕೊಂಡಿದ್ದಲ್ಲಿ ಪಾಲಿಕೆಯಲ್ಲಿ ಅಲ್ಪಸಂಖ್ಯಾತರಿಗೆ ಉತ್ತಮ ಸ್ಥಾನ ಸಿಗುತ್ತಿತ್ತು ಎಂದು ತಿಳಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಹೋದಲ್ಲೆಲ್ಲಾ ಕೋಮುವಾದಿಗಳೊಡನೆ ಮೈತ್ರಿ ಏರ್ಪಡಿಸಿಕೊಳ್ಳುವುದಿಲ್ಲ ಎಂದವರು ಇಲ್ಲಿ ಮಾತಿಗೆ ತಪ್ಪಿದ್ದಾರೆ. ಅವರದೇ ಪಕ್ಷದ ರೇಷ್ಮಾ ಬಾನು ಅವರು ಜಾತಿ ಪ್ರಮಾಣಪತ್ರ ಸಿದ್ಧವಾಗಿರಿಸಿಕೊಳ್ಳುವಂತೆ ಮೊದಲೇ ತಿಳಿಸಬೇಕಾಗಿತ್ತು. ಹೀಗಾಗಿ ಅಲ್ಪಸಂಖ್ಯಾತರಿಗೆ ಅಧಿಕಾರ ನೀಡುವುದಾಗಿ ಹೇಳಿ ವಂಚಿಸಿದ್ದಾರೆ ಎಂದು ದೂರಿದರು.

ಜೆಡಿಎಸ್ ಪಾಲಿಕೆ ಸದಸ್ಯರು ಅಲ್ಪಸಂಖ್ಯಾತರ ವಿರೋಧಿ ಧೋರಣೆಯ ಕೋಮುವಾದಿ ಬಿಜೆಪಿಗೆ ಮತ ಹಾಕುವ ಮೂಲಕ ಮತದಾರರಿಗೆ ದ್ರೋಹ ಎಸಗಿದ್ದಾರೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಜನರು ಇವರಿಗೆ ತಕ್ಕ ಪಾಠ ಕಲಿಸಬೇಕು. ಪ್ರಜಾಪ್ರಭುತ್ವಕ್ಕೆ ಮನ್ನಣೆ ನೀಡುವ ಎಸ್‌ಡಿಪಿಐಗೆ ಮತ ನೀಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ಮೈಸೂರು ಜಿಲ್ಲಾಧ್ಯಕ್ಷ ರಫತ್ ಉಲ್ಲಾ, ಪ್ರಧಾನ ಕಾರ್ಯದರ್ಶಿ ಮಹಮದ್..ಷಫೀಉಲ್ಲಾ, ಅಮ್ಜದ್‌ಖಾನ್, ಎಸ್.ಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಸಮಾನತೆ ಪ್ರಕಾಶನದಿಂದ ಕಾನೂನು ವಿವಿ ಕುಲಪತಿ ಪ್ರೊ.ಬಸವರಾಜುಗೆ ಅಭಿನಂದನೆ



ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡಿರುವ ಪ್ರೊ.ಸಿ.ಬಸವರಾಜು ಅವರನ್ನು ಸಮಾನತೆ ಪ್ರಕಾಶನದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಮಾನತೆ ಪ್ರಕಾಶಕರಾದ ಭರತ್ ರಾಮಸ್ವಾಮಿ, ಡಾ.ಕಲ್ಯಾಣಸಿರಿ ಭಂತೇಜಿ, ಮುಖಂಡರಾದ ವಿ.ರಾಮಸ್ವಾಮಿ, ಪಿ.ನಂದಕುಮಾರ್, ಪ್ರೊ.ನೀಲಗಿರಿ ತಳವಾರ್, ಡಾ.ಮುಳ್ಳೂರು ನಂಜುಂಡಸ್ವಾಮಿ, ಸಿ.ಜಿ.ಶಿವಕುಮಾರ್, ಶಿವಣ್ಣ ವಕೀಲ, ಲೋಹಿತ್ ರಾಮಸ್ವಾಮಿ, ಪುನೀತ್ ರಾಮಸ್ವಾಮಿ, ಡಿ.ವೆಂಕಟರಾಜು, ಪಿ.ಟಿ.ಕೃಷ್ಣ, ಜೆ.ರವಿ, ಸುರೇಶ್, ರಂಗಪ್ಪ, ಶಾಂತರಾಮ್ ಶೆಟ್ಟಿ, ಗಂಗೋತ್ರಿ ಮಹೇಶ್, ಶಿವಸ್ವಾಮಿ, ಗಿರೀಶ್, ಶ್ರೀಧರ್, ನಂದಕುಮಾರ್, ಸಂತೋಷ್, ಮೋಹನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಳೆಯಿಂದ ಅಪಾರ ಹಾನಿ; ಸೂಕ್ತ ಪರಿಹಾರಕ್ಕೆ ಮರೀಗೌಡರ ಆಗ್ರಹ

ಮೈಸೂರು, ಸೆ. 7– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಯಿಂದ ಭಾರೀ ಪ್ರಮಾಣದ ನಷ್ಟವಾಗಿದ್ದು, ಸರ್ಕಾರ ಕೂಡಲೇ ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಮೈಸೂರು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ. ಮರೀಗೌಡ ಆಗ್ರಹಿಸಿದ್ದಾರೆ.



ಕ್ಷೇತ್ರದಾದ್ಯಂತ ಸುಮಾರು 500ಕ್ಕೂ ಹೆಚ್ಚು ಮನೆಗಳು ಹಾನಿಗೀಡಾಗಿದ್ದು, ಸರ್ಕಾರ ಇದಕ್ಕೆ ಪರಿಹಾರ ನೀಡಬೇಕು. ಸಾವಿರಾರು ಎಕರೆ ಬೆಳೆ ನಷ್ಟವಾಗಿದೆ. ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತರಕಾರಿ, ಹಣ್ಣುಗಳು ದ್ವಿದಳ ಧಾನ್ಯಗಳು ಮತ್ತು ಬಾಳೆ, ಕಬ್ಬು, ಭತ್ತದ ಬೆಳೆ ನಷ್ಟವಾಗಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಂದ ಪರಿಶೀಲಿಸಿ ಅಂದಾಜು ತಯಾರು ಮಾಡಿ ಸೂಕ್ತ ಪರಿಹಾರವನ್ನು ಕಲ್ಪಿಸಬೇಕು. ಬಹುತೇಕ ರಸ್ತೆ ಮತ್ತು ಸೇತುವೆಗಳು ಸಾಕಷ್ಟು ಹಾನಿಗೀಡಾಗಿವೆ. ಜಟ್ಟಿಹುಂಡಿ ಕೆರೆ, ಕೆ.ಹೆಮ್ಮನಹಳ್ಳಿ, ರಾಮನಹುಂಡಿ ಮತ್ತು ಬಲ್ಲಹಳ್ಳಿ ಮಧ್ಯೆ ಎಣ್ಣೆಹೊಳೆ ಹಳ್ಳದಲ್ಲಿ ನೀರಿನ ಪ್ರಮಾಣ ಜಾಸ್ತಿ ಇದ್ದು, ರಸ್ತೆ ಮತ್ತು ಸೇತುವೆ ಪೂರ್ಣವಾಗಿ ನಾಶವಾಗಿದೆ. ಮೂಗನಹುಂಡಿ ಹಾಗೂ ತಿಬ್ಬಯ್ಯನಹುಂಡಿ ಮಧ್ಯದ ಸೇತುವೆಯೂ ಪೂರ್ಣ ಕುಸಿದಿದೆ. ಜಯಪುರ ಕೆರೆ ತುಂಬಿ ಕೋಡಿ ಬಿದ್ದು, ಇದರ ಭಾರೀ ನೀರಲ್ಲಿ ಒಬ್ಬ ವ್ಯಕ್ತಿ ಕೊಚ್ಚಿ ಹೋಗಿ ಮೃತಪಟ್ಟಿದ್ದಾನೆ. ಈ ವ್ಯಕ್ತಿಗೆ ಸರ್ಕಾರದಿಂದ 5 ಲಕ್ಷ ಪರಿಹಾರ ನೀಡಿದ್ದು, ಈತ 35 ವರ್ಷದವನಾಗಿದ್ದು ಇವನ ಸಂಸಾರಕ್ಕೆ ಇನ್ನೂ ಹೆಚ್ಚಿನ ಪ್ರಮಾಣದ ಪರಿಹಾರವನ್ನು ಸರ್ಕಾರ ನೀಡಬೇಕು. ಮೈಸೂರು ತಾಲೂಕು ಕಸಬಾ ಹೋಬಳಿ ನಾಗನಹಳ್ಳಿ, ಸಿದ್ದಲಿಂಗಪುರ, ಕಳಸ್ತವಾಡಿ, ಕೆಆರ್ ಮಿಲ್, ಹಳೆ ಕೆಸರೆ ಮತ್ತು ಕಾಮನಕೆರೆಹುಂಡಿ ಭಾಗದಲ್ಲಿ ನೀರಾವರಿ ಸೌಲಭ್ಯವಿದ್ದು ನಾಲೆಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಭತ್ತ, ಕಬ್ಬು ಹಾಗೂ ಬಾಳೆ, ತರಕಾರಿ ಬೆಳೆ ನಾಶವಾಗಿದೆ. ರಸ್ತೆಗಳು ಪೂರ್ಣ ಹದಗೆಟ್ಟಿದ್ದು, ಕೂಡಲೇ ಇವುಗಳ ದುರಸ್ತಿ ಆಗಬೇಕು. ಹಾನಿಗೀಡಾದವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಮರೀಗೌಡರು ಆಗ್ರಹಿಸಿದ್ದಾರೆ.



ನೂತನ ಮೇಯರ್ ಶಿವಕುಮಾರ್ ಅವರನ್ನು ಚಾಮುಂಡಿಬೆಟ್ಟದ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಮಹದೇವ್, ವೆಂಕಟೇಶ್, ಮಂಜುನಾಯಕ, ಚಂದು ಇದ್ದರು.

ಸೆ.10ರಂದು ಮೈಸೂರಲ್ಲಿ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಅಶೋಕ್ ಹಾರನಹಳ್ಳಿಗೆ ಸನ್ಮಾನ

ಮೈಸೂರು,ಸೆ.7(ಆರ್‌ಕೆಬಿ)–ಮಂದಗೆರೆ ಮಂಜುನಾಥ್ ಅಭಿಮಾನಿ ಬಳಗ, ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಹೊಯ್ಸಳ ಕರ್ನಾಟಕ ಸಂಘಗಳ ಸಂಯುಕ್ತಾಶ್ರಯದಲ್ಲಿ ಸೆ.10ರ ಬೆಳಗ್ಗೆ 10.30ಕ್ಕೆ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆ ಹೊಯ್ಸಳ ಕರ್ನಾಟಕ ಸಂಘದ ಆವರಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಶೋಕ್ ಹಾರನಹಳ್ಳಿ ಅವರು ಮಹಾಸಭಾ ಅಧ್ಯಕ್ಷರಾದ ಬಳಿಕ ವಿಪ್ರರಿಗಾಗಿ ಅನೇಕ ಜನಪರ ಕಾರ್ಯ ಮಾಡುತ್ತಿದ್ದು, ತಮ್ಮ ಪ್ರಭಾವ ಬಳಸಿಕೊಂಡು ಸರ್ಕಾರದ ಮೇಲೆ ಒತ್ತಡ ಹೇರಿ ಅನೇಕ ಸೌಲಭ್ಯಗಳು ದೊರೆಯುವಂತೆ ಮಾಡಿದ್ದಾರೆ. ಹೀಗಾಗಿ ಸಮಾರಂಭದಲ್ಲಿ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ, ಸನ್ಮಾನಿಸಲಾಗುವುದು ಎಂದರು. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಮಾರಂಭ ಉದ್ಘಾಟಿಸುವರು. ಭಾಷ್ಯಂ ಸ್ವಾಮೀಜಿ, ಭಾನುಪ್ರಕಾಶ್ ಶರ್ಮ, ಅರಳೀಕಟ್ಟೆ ಷಣ್ಮುಖಸ್ವಾಮಿ ಇನ್ನಿತರರು ಭಾಗವಹಿಸುವರು ಎಂದರು. ಮುಖಂಡರಾದ ರಘುರಾಂ ಕೆ.ವಾಜಪೇಯಿ, ರಂಗನಾಥ್, ಮಂಜುನಾಥ್, ನಾಗರಾಜು, ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ನೆನೆಗುದಿಗೆ ಬಿದ್ದಿರುವ ಮನೆಗಳ ನಿರ್ಮಾಣ ಪೂರ್ಣಗೊಳಿಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಹೈವೇ ವೃತ್ತದ ಸಮೀಪದಲ್ಲಿರುವ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಎದುರು ಜಮಾವಣೆಗೊಂಡ ಬನ್ನೂರಿನ ಸುಭಾಷ್‌ನಗರದ ನಿವಾಸಿಗಳು, ಮಧ್ಯವರ್ತಿಗಳ ಹಾವಳಿಯಿಂದ ಸ್ಥಗಿತಗೊಂಡಿರುವ ಮನೆಗಳ ನಿರ್ಮಾಣವನ್ನು ಪುನಾರಂಭಿಸುವಂತೆ ಒತ್ತಾಯಿಸಿ ಮೌನ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದರು.

ಮೈಸೂರು, ಸೆ.7(ಎಂಕೆ)– ಬನ್ನೂರಿನ ಸುಭಾಷ್‌ನಗರದಲ್ಲಿ ಮಧ್ಯವರ್ತಿಗಳ ಹಾವಳಿಯಿಂದ ಸ್ಥಗಿತಗೊಂಡಿರುವ ಮನೆಗಳ ನಿರ್ಮಾಣವನ್ನು ಪುನಾರಂಭಿಸುವಂತೆ ಒತ್ತಾಯಿಸಿ ಮೌನ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಲಾಯಿತು.

ಮೈಸೂರಿನ ಹೈವೇ ವೃತ್ತದ ಸಮೀಪದಲ್ಲಿರುವ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಎದುರು ಜಮಾವಣೆಗೊಂಡ ಬನ್ನೂರಿನ ಸುಭಾಷ್‌ನಗರದ ನಿವಾಸಿಗಳು, ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ ಬಡ ಕುಟುಂಬಗಳಿಗಾಗಿ 300 ಮನೆಗಳನ್ನು ನಿರ್ಮಾಣ ಮಾಡಿಕೊಡಲಾಗುತ್ತಿತ್ತು. ಆದರೆ ಮಧ್ಯವರ್ತಿಗಳ ಕಾಟದಿಂದಾಗಿ ನಿರ್ಮಾಣ ಹಂತದಲ್ಲಿಯೇ ಸ್ಥಗಿತಗೊಂಡಿದೆ. ಇದರಿಂದ ಫಲಾನುಭವಿಗಳು ಬೀದಿಯಲ್ಲಿ ಶೆಡ್‌ಗಳನ್ನು ಕಟ್ಟಿಕೊಂಡು ವಾಸಮಾಡುವಂತಾಗಿದೆ. ಆದ್ದರಿಂದ ಕೂಡಲೇ ಸ್ಥಗಿತಗೊಂಡಿರುವ ಕಾಮಗಾರಿಯನ್ನು ಪುನಾರಂಭಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯವರು ಕಳೆದ ಸುಮಾರು 4 ವರ್ಷದಿಂದ ಮನೆಗಳ ನಿರ್ಮಾಣ ಕಾಮಗಾರಿ ನಡೆಸುತ್ತಿದ್ದಾರೆ. ಆದರೆ ಕೆಲ ಮಧ್ಯವರ್ತಿಗಳ ಹಾವಳಿಯಿಂದಾಗಿ ಕಾಮಗಾರಿ ಸ್ಥಗಿತಗೊಂಡಿದ್ದು, ರಸ್ತೆಯಲ್ಲೇ ಜೀವಿಸುವಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ ಕಾಮಗಾರಿ ಪುನಾರಂಭಿಸುವುದರ ಜೊತೆಗೆ ನೇರವಾಗಿ ಫಲಾನುಭವಿಗಳಿಗೆ ಮನೆಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ಸ್ಮಶಾನಕ್ಕೆ ರಸ್ತೆಯಿಲ್ಲ: ಸುಭಾಷ್‌ನಗರದಲ್ಲಿ ಯಾರಾದರೂ ನಿಧನರಾದರೆ ಅವರ ಅಂತ್ಯಕ್ರಿಯೆ ನಡೆಸುವುದೇ ದೊಡ್ಡ ಸಮಸ್ಯೆಯಾಗಿದೆ. ಸ್ಮಶಾನಕ್ಕೆ ರಸ್ತೆ ಇಲ್ಲದೆ ತುಂಬಾ ತೊಂದರೆ ಉಂಟಾಗುತ್ತಿದೆ. ಖಾಸಗಿ ವ್ಯಕ್ತಿಗಳ ಜಮೀನಿನ ಮೇಲೆ ಸಾಗಿ ಸ್ಮಶಾನ ತಲುಪಬೇಕಾಗಿದೆ. ಈ ಸಂಬಂಧ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇವೆ. ಸಿಎಂ ಕಚೇರಿಯಿಂದ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನಕ್ಕೆ ಸೂಚಿಸಿದ್ದರೂ ಯಾವುದೇ ಪ್ರಕ್ರಿಯೆ ನಡೆದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಬನ್ನೂರು ಪುರಸಭೆ ಸದಸ್ಯ ಶಿವಣ್ಣ, ಡಾ.ಬಾಬು ಜಗಜೀವನ್‌ರಾಮ್ ಸಂಘದ ತಾಲೂಕು ಅಧ್ಯಕ್ಷ ಮಲಿಯೂರು ಶಂಕರ, ಕಟ್ಟಡ ಕಾರ್ಮಿಕರ ಸಂಘದ ಜಯರಾಮು, ಶಂಕರ್, ನಾಗಯ್ಯ, ಮಹದೇವಣ್ಣ, ಮಹೇಶ್ ಹಾಗೂ ಸುಭಾಷ್‌ನಗರದ ಕೆಲ ಫಲಾನುಭವಿಗಳು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಆತ : ನಮ್ಮೂರ ಗುರುಗಳಿಗಿಂತ ನಮ್ಮೂರ ಡಾಕ್ಟರು ತುಂಬಾ ಫೇಮಸ್ಸು...!

ಈತ : ಅದು ಹೇಗೆ?

ಆತ : ನಮ್ಮೂರ ಜನಗಳಿಗೆ ಗುರುಗಳು ಮುಕ್ತಿ ತೋರಿಸಿದ್ದಕ್ಕಿಂತ ಹೆಚ್ಚು, ಡಾಕ್ಟರೇ ಮುಕ್ತಿ ತೋರಿಸಿದ್ದಾರೆ

ಮೈಸೂರು ಮಿತ್ರ

ಗುರುವಾರ, 8 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಚಿನ್ನದ ಪ್ರತಿ ಎಳೆಯೂ ಯಾವ ರೀತಿ ಅಮೂಲ್ಯವೋ ಹಾಗೆಯೇ ಕಾಲದ ಪ್ರತಿಯೊಂದು ನಿಮಿಷವೂ ಅಮೂಲ್ಯ – ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ದಿಕ್ಕಿಲ್ಲದವರಿಗೆ ದೇವರೇ ಗತಿ

ನಿಮ್ಮ ಪತ್ರಗಳು

ಮಳೆ ನೀರನ್ನು ದೂಷಿಸುವುದರಿಂದೇನು ಫಲ!?

ಮಾನ್ಯರೆ,

ಇತ್ತೀಚಿನ ವರ್ಷಗಳಲ್ಲಿ ಮನುಷ್ಯನ ಅತಿಯಾಸೆಯಿಂದ ಪ್ರಕೃತಿನಾಶ ನಿರಂತರವಾಗಿ ನಾಶ ಮಾಡುತ್ತಾ ಬರುತ್ತಿದ್ದು, ಆಯಾ ಋತುಗಳಲ್ಲಿ ಮನುಷ್ಯ ಇದರ ಪರಿಣಾಮವನ್ನು ಎದುರಿಸಬೇಕಾಗಿದೆ. ಈ ಹಿಂದೆಯೂ ಸಾಕಷ್ಟು ಮಳೆಯಾಗಿದೆ. ಆದರೆ ಇಷ್ಟೊಂದು ತೀವ್ರತರ ರೀತಿಯಲ್ಲಿ ಮಾನವನಿಗೆ ಹಾನಿಯಾಗಿದ್ದಿಲ್ಲ. ಈ ಹಿಂದೆ ಪ್ರಕೃತಿ ಸಹಜವಾಗಿ ಹರಿಯುತ್ತಿದ್ದ ನದಿಗಳು, ಹೊಳೆಗಳು, ಹಳ್ಳ–ಕೊಳ್ಳಗಳು, ಬೆಟ್ಟ–ಗುಡ್ಡಗಳು, ಜಲಪಾತ, ಅರಣ್ಯಗಳು ಇದ್ದುದರಿಂದ ಎಷ್ಟೇ ಮಳೆ ಸುರಿದರೂ ಅದರ ಪರಿಣಾಮ ಮನುಷ್ಯರಿಗೆ ತಟ್ಟುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ಬೃಹದಾಕಾರದಲ್ಲಿ ನಡೆಯುತ್ತಿರುವ ನಗರೀಕರಣ, ಜಲಮೂಲಗಳ ಒತ್ತುವರಿ ಮತ್ತು ಅರಣ್ಯ ನಾಶ, ಮಾಲಿನ್ಯ ಹೆಚ್ಚಳ, ಕೈಗಾರೀಕರಣ ಸೇರಿದಂತೆ ಹಲವಾರು ಕಾರಣದಿಂದ ಹವಾಮಾನ ವೈಪರೀತ್ಯವನ್ನು ಎದುರಿಸಬೇಕಾಗಿದೆ. ನದಿ ಹರಿಯುವ ಜಾಗವನ್ನು ಒತ್ತುವರಿ ಮಾಡಿ ಮಾನವ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದು, ನೇರವಾಗಿ ಮಳೆ ನೀರು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗುತ್ತಿವೆ.

ಕೆರೆಗಳೆಲ್ಲ ಈ ರೀತಿ ಬಡಾವಣೆಗಳಾದರೆ ಮಳೆಯ ನೀರು ಹರಿಯುವುದಾದರೂ ಎಲ್ಲಿಗೆ? ರಾಜಕಾಲುವೆಗಳೆಲ್ಲ ಒತ್ತುವರಿಯಾದರೆ ಮಳೆಯ ನೀರು, ಹರಿದು ಸೇರುವುದಾದರೂ ಎಲ್ಲಿಗೆ? ಮನುಷ್ಯ ಮಾಡಿದ ತಪ್ಪಿಗೆ ಮಳೆಯ ನೀರನ್ನು ದೂಷಿಸುವುದರಿಂದೇನು ಫಲ? ಅಕ್ರಮ ಅನಾಚಾರದಡಿ ಮಾನವ ಮಾಡುವ ದುರಾಕ್ರಮಗಳಿಗೆ ಬೀಳಲಿ ಬೀಗ. ಇಳೆಯ ನೀರು ಧರೆಗೆ ಬಿದ್ದು ಹರಿಯಲಿ ಸರಾಗ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಅಗತ್ಯ ಕ್ರಮಗಳಿಲ್ಲದೇ ಕೆರೆಗಳ ನಾಶ

ಮಾನ್ಯರೆ,



ಪಿರಿಯಾಪಟ್ಟಣ ತಾಲೂಕಿನ ಅರೇನಹಳ್ಳಿ ಗ್ರಾಮದಲ್ಲಿ ಎರಡು ಕೆರೆಗಳಿವೆ. ಒಂದು ಹೊಸಕಟ್ಟೆ, ಇನ್ನೊಂದು ಮುಳ್ಳಕೆರೆ. ಇಲ್ಲಿ ಇತ್ತೀಚೆಗೆ ಹೊಸಕಟ್ಟೆಗೆ ಒಂದಷ್ಟು ಕಾಯಕಲ್ಪ ಒದಗಿಸಲಾಗಿದೆ. ಆದರೂ ನೀರಿನ ಸೋರಿಕೆಯನ್ನು ತಡೆಯಲಾಗಿಲ್ಲ. ಹಾಗೆಯೇ ಈ ಕೆರೆಗಳಿಗೆ ಸರಿಯಾದ ತಡೆಗೋಡೆ ಆಗಲಿ, ನೀರನ್ನು ಕೃಷಿ ಚಟುವಟಿಕೆಗಳಿಗೆ ಒದಗಿಸಲು ಸದಾಕಾಲ ನೀರು ಸಂಗ್ರಹಣೆ ಮಾಡುವ ಇತರೇ ಗೇಟ್‌ಗಳಾಗಲಿ ಇಲ್ಲ. ಮಳೆಗಾಲದಲ್ಲಿ ಕಾಲುವೆಯಿಂದ ಬಂದ ನೀರು ಸದಾ ಹರಿದುಹೋಗುವುದರಿಂದ ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ. ಇದು ಚಿಕ್ಕ ಗೇಟ್ (ಕೂನಿ ಬಾಯಿ)ಗಳ ಸರಿಯಾದ ನಿರ್ವಹಣೆ ಇಲ್ಲದೆ ನೀರು ಸದಾ ಸೋರಿ ಹೋಗುತ್ತಿದೆ. ಹೀಗೆಲ್ಲಾ ಘಟಿಸಿ ಅಗತ್ಯ ಸಂದರ್ಭಗಳಲ್ಲಿ ಅಂದರೆ ಭತ್ತ ರಾಗಿ ಇತರೇ ಕೃಷಿಗೆ ನೀರೇ ಇಲ್ಲದಂತಾಗಿ ಆಹಾರಕ್ಕೆ ಕೊರತೆ ಉಂಟಾಗುತ್ತಿದೆ. ಕೆರೆ ಹೂಳೆತ್ತುವ ಕಾರ್ಯಗಳು ಆಗಾಗ ನೆಪಕ್ಕೆ ನಡೆಯುತ್ತವೆ ಎಂಬುದು ಜಗಜ್ಜಾಹೀರಾಗಿದ್ದು, ಈಗ ಮತ್ತೆ ಹೂಳು ತುಂಬಿ ಕಡಿಮೆ ನೀರು ನಿಲ್ಲುವಂತಾಗಿದೆ. ಅದರಲ್ಲೂ ಸೋರಿಕೆ ಬೇರೆ. ಮತ್ತೆ ನೀರು ಅಗತ್ಯಕ್ಕೆ ತಕ್ಕಂತೆ ಹೇಗೆ ದೊರಕುತ್ತದೆ ತಿಳಿಸಿ? ಒಂದಷ್ಟು ಆಳವಾಗಿ ಹೂಳು ತೆಗೆಸಿ, ವ್ಯವಸ್ಥಿತ ಹಾಗೂ ಗುಣಮಟ್ಟದ, ಬಾಳಿಕೆ ಬರುವ ತಡೆಗೋಡೆಗಳನ್ನು ನಿರ್ಮಿಸಿದರೆ ರೈತರು ಮಳೆ ಆಶ್ರಯದಲ್ಲಿ ಬೆಳೆವ ಬೆಳೆಗಳು ಸರಿಯಾದ ಇಳುವರಿ ಕೊಡದಿದ್ದರೆ ಕೆರೆ ಆಶ್ರಿತ ಬೆಳೆಗಳಿಂದ ಈ ಕೊರತೆಯನ್ನು ನಿವಾರಿಸಿಕೊಳ್ಳಬಹುದಲ್ಲವೇ... ಅಲ್ಲದೇ ಕೆರೆಗಳನ್ನೇ ನಂಬಿ ಬದುಕುವ ಇತರೇ ಜೀವ ಸಂಕುಲಗಳ ನಾಶದಿಂದ ಪ್ರಾಕೃತಿಕ ಅಸಮತೋಲನ ಉಂಟಾಗುವುದಿಲ್ಲವೇ ಹೇಳಿ? ಹೀಗಾಗಿ ಇವೆಲ್ಲಾ ಅಗತ್ಯ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕೆರೆ ನಿರ್ಮಾಣ ಪ್ರಾಧಿಕಾರ, ಜಿಲ್ಲಾ ಹಾಗೂ ತಾಲೂಕು ನೀರಾವರಿ ಇಲಾಖೆ, ಜತೆಗೆ ಸ್ಥಳೀಯ ಆಡಳಿತ ಇದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ತುರ್ತಾಗಿ ಮುಂದಾಗಲು ಮನವಿ.

–ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ಸ್ಥಳ ತೋರಿಸದೇ ವರ್ಗಾವಣೆ ನಿಷೇಧ ಸ್ವಾಗತಾರ್ಹ

ಮಾನ್ಯರೆ,

ರಾಜ್ಯ ಸರ್ಕಾರದ ವರ್ಗಾವಣೆ ನೀತಿಯ ಬಗ್ಗೆ ಕಿಡಿ ಕಾರಿರುವ ರಾಜ್ಯ ಹೈಕೋರ್ಟ್ ಪರ್ಯಾಯವಾಗಿ ಸ್ಥಳ ನಿಯೋಜನೆ ತೋರಿಸದೇ ವರ್ಗಾವಣೆ ಮಾಡುವುದನ್ನು ನಿಷೇಧಿಸಿರುವುದು ಸ್ವಾಗತಾರ್ಹವಾಗಿದೆ. ರಾಜ್ಯ ಸರ್ಕಾರಕ್ಕೆ ಇದೊಂದು ಕಪಾಲ ಮೋಕ್ಷವಾಗಿದ್ದು, ತನ್ನ ಮನಸೋ ಇಚ್ಛೆಯಂತೆ ಬೇಕಾಬಿಟ್ಟಿ ವರ್ಗಾವಣೆ ನೀತಿಯನ್ನು ಮುಂದುವರೆಸಲು ಇನ್ನು ಮುಂದೆ ಸಾಧ್ಯವಿಲ್ಲದಂತಾಗಿದೆ. ಬಹುತೇಕ ಇಲಾಖೆಗಳಲ್ಲಿ ವರ್ಗಾವಣೆ ಒಂದು ದಂಧೆಯಾಗಿ ಪರಿಣಮಿಸಿದೆ. ಒಂದೊಂದು ಹುದ್ದೆಯ ವರ್ಗಾವಣೆಗೂ ಇಂತಿಷ್ಟು ಹಣ ಎಂದು ನಿಗದಿಪಡಿಸಲಾಗಿದೆ. ತಮಗೆ ಬೇಕಾದ ಸ್ಥಳಗಳಿಗೆ ವರ್ಗಾವಣೆ ಬಯಸುವ ಅಥವಾ ತಾವಿರುವ ಸ್ಥಳಗಳಿಂದ ಬೇರೆ ಸ್ಥಳಗಳಿಗೆ ಆಗುವ ವರ್ಗಾವಣೆಯನ್ನು ತಡೆಯಲು ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ನಾನಾ ರೀತಿಯ ಸರ್ಕಸ್ ಮಾಡುತ್ತಾರೆ. ಜನಪ್ರತಿನಿಧಿಗಳಿಂದ ಹಿಡಿದು ಮುಖ್ಯಮಂತ್ರಿಗಳವರೆಗೆ ಪ್ರಭಾವ ತರುತ್ತಾರೆ. ಲಕ್ಷಾಂತರ ರೂಪಾಯಿಗಳನ್ನು ಲಂಚದ ರೂಪದಲ್ಲಿ ಚೆಲ್ಲಲಾಗುತ್ತದೆ. ಅನೇಕ ಹಿರಿಯ ಅಧಿಕಾರಿಗಳನ್ನು ರಾತ್ರಿಯಿಂದ ಬೆಳಗಾಗುವುದರೊಳಗೆ ರಾಜಕೀಯ ಪ್ರಭಾವಕ್ಕೆ ಮಣಿದು ವರ್ಗಾವಣೆಗೊಳಿಸಲಾಗುತ್ತದೆ.

ಅಂತಹವರಿಗೆ ಯಾವುದೇ ಸ್ಥಳ ತೋರಿಸದೇ ತ್ರಿಶಂಕು ಪರಿಸ್ಥಿತಿ ನಿರ್ಮಾಣ ಮಾಡಲಾಗುತ್ತದೆ. ಇದರಿಂದ ರೋಸಿ ಹೋದ ಅದೆಷ್ಟೋ ಅಧಿಕಾರಿಗಳು ಕೆಎಟಿಗೆ ಮೊರೆಹೋಗಿ ಸರ್ಕಾರದ ವರ್ಗಾವಣೆಗೆ ತಡೆ ತರುತ್ತಿರುವ ಸಾಕಷ್ಟು ಉದಾಹರಣೆಗಳು ನಮ್ಮ ಮುಂದಿವೆ. ಆದ್ದರಿಂದ ರಾಜ್ಯ ಸರ್ಕಾರ ಇನ್ನು ಮುಂದಾದರೂ ಎಚ್ಚೆತ್ತುಕೊಂಡು, ತನ್ನ ವರ್ಗಾವಣೆ ನೀತಿಯನ್ನು ಪರಿಷ್ಕರಿಸಿ, ರಾಜ್ಯ ಹೈಕೋರ್ಟಿನ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಬೀದಿ ನಾಯಿಗಳ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ 3ನೇ ಘಟ್ಟದ ರಸ್ತೆಯ ಪಕ್ಕದ ಬದಿಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ರಾತ್ರಿ ವೇಳೆಯಂತೂ ಬೀದಿ ನಾಯಿಗಳು ಬೈಕ್ ಸವಾರರನ್ನು ಅಟ್ಟಿಸಿಕೊಂಡು ಬರುತ್ತವೆ. ಅಲ್ಲಿ ಓಡಾಡುವವರಿಗೆ ತೊಂದರೆಯಾಗುತ್ತಿದೆ. ವಿಜಯನಗರ 4ನೇ ಹಂತದಲ್ಲಿ ಹೆಚ್ಚಾಗಿರುವ ಬೀದಿನಾಯಿಗಳ ಹಾವಳಿ ನಿಯಂತ್ರಿಸಲು ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ –ದೀಪ.ಡಿ, ಮಹಾರಾಣಿ ಮಹಿಳಾ ಕಲಾ ಕಾಲೇಜು.

ಮೈಸೂರು ಅಭಿವೃದ್ಧಿ ಮುಖ್ಯ; ಎಲ್ಲರೂ ಸಹಕರಿಸಬೇಕು

–ನೂತನ ಮೇಯರ್ ಶಿವಕುಮಾರ್

ಸಂದರ್ಶನ: ಮೋಹನ್ ಕಾಯಕ



“ಮೈಸೂರು ಮಹಾನಗರ ಪಾಲಿಕೆಯ 24ನೇ ಮೇಯರ್ ಆಗಿ ಆಯ್ಕೆಯಾಗಿರುವ 47ನೇ ವಾರ್ಡಿನ ಬಿಜೆಪಿ ಸದಸ್ಯ ಶಿವಕುಮಾರ್, ಕಡೆಗೂ ತಮ್ಮ ತಂದೆಯ ಕನಸನ್ನು ನನಸು ಮಾಡಿದ್ದಾರೆ. ಅದರಲ್ಲೂ ಪರಿಶಿಷ್ಟ ಪಂಗಡಕ್ಕೆ ಸೇರಿದ ನಾಯಕ ಸಮುದಾಯದಿಂದ ಆಯ್ಕೆಯಾದ ಮೊದಲ ಮೈಸೂರು ಮೇಯರ್ ಎಂಬ ಖ್ಯಾತಿಗೂ ಶಿವಕುಮಾರ್ ಪಾತ್ರರಾಗಿದ್ದಾರೆ. ನಿರಂತರ ಮಳೆಯಿಂದ ಹದಗೆಟ್ಟಿರುವ ರಸ್ತೆ–ಚರಂಡಿಗಳು, ನಾಡಹಬ್ಬ ದಸರಾ ಸಿದ್ಧತೆ ಸೇರಿದಂತೆ ಹಲವಾರು ಸವಾಲುಗಳ ನಡುವೆ ಮೈಸೂರಿನ ಪ್ರಥಮ ಪ್ರಜೆಯಾಗಿರುವ ಶಿವಕುಮಾರ್ ‘ಮೈಸೂರು ಮಿತ್ರ’ನೊಂದಿಗೆ ತಮ್ಮ ಸಂತಸ ಹಾಗೂ ತಮಗೆ ಎದುರಾಗಿರುವ ಸವಾಲುಗಳ ಬಗ್ಗೆ ಮನ ಬಿಚ್ಚಿ ಮಾತನಾಡಿದ್ದಾರೆ.

ಮೈಸೂರು ಮಿತ್ರ: *ನೀವು ಮೇಯರ್ ಸ್ಥಾನದ ಆಕಾಂಕ್ಷಿಯಾಗಿದ್ದೀರಾ? ಅಥವಾ ಅನಿರೀಕ್ಷಿತವಾಗಿ ಒಲಿದಿದ್ದೋ?*

ಮೇಯರ್ ಶಿವಕುಮಾರ್: ನಾನು ಮೇಯರ್ ಸ್ಥಾನದ ಆಕಾಂಕ್ಷಿಯೂ ಅಲ್ಲ, ನಿರೀಕ್ಷೆಯನ್ನೂ ಹೊಂದಿರಲಿಲ್ಲ. ಅನಿರೀಕ್ಷಿತವಾಗಿ ಮೇಯರ್ ಸ್ಥಾನ ಲಭಿಸಿದೆ. ಸಾಂದರ್ಭಿಕವಾಗಿ ಜೆಡಿಎಸ್‌ನವರು ನಮ್ಮ ಮೇಲಿದ್ದ ವಿಶ್ವಾಸದಿಂದ ಮತ ನೀಡಿದ್ದಾರೆ. ಸಾಂಸ್ಕೃತಿಕ ನಗರಿ ಮೈಸೂರು ನಗರ ಪಾಲಿಕೆಯ ಮೇಯರ್ ಸ್ಥಾನಕ್ಕೆ ವಿಶೇಷ ಗೌರವವಿದ್ದು, ಎಂದಿಗೂ ಈ ಸ್ಥಾನಕ್ಕೆ ಚ್ಯುತಿ ಬರದಂತೆ ಸೇವೆ ಮಾಡುತ್ತೇನೆ.

ಮಿತ್ರ: ***ಮೈಸೂರು ನಗರ ಅಭಿವೃದ್ಧಿ, ಸ್ವಚ್ಛತೆ ಕುರಿತು ತಮ್ಮ ಯೋಜನೆಗಳೇನು?***

ಶಿವಕುಮಾರ್: ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಯವರು ಸ್ವಚ್ಛ ಭಾರತ ಪರಿಕಲ್ಪನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಪೂರಕವಾಗಿ ಕೆಲಸ ಮಾಡಲು ಪ್ರಯತ್ನಿಸುವೆ. ಈಗಾಗಲೇ ಮೈಸೂರು ನಗರ 2 ಬಾರಿ ದೇಶದಲ್ಲಿಯೇ ಸ್ವಚ್ಛ ನಗರವೆಂಬ ಖ್ಯಾತಿ ಪಡೆದಿದೆ. ಮತ್ತೊಮ್ಮೆ ಮೈಸೂರು ನಗರಕ್ಕೆ ನಂಬರ್–1 ಸ್ಥಾನ ಬರುವ ನಿಟ್ಟಿನಲ್ಲಿ ನಮ್ಮೆಲ್ಲಾ ಪೌರಕಾರ್ಮಿಕರು, ಅಧಿಕಾರಿ–ಸಿಬ್ಬಂದಿಗಳ ವಿಶ್ವಾಸಗಳಿಸಿ ಕೆಲಸ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ. ಭಾರೀ ಮಳೆಯಿಂದಾಗಿ ಗುಂಡಿ ಬಿದ್ದಿರುವ ರಸ್ತೆಗಳ ದುರಸ್ತಿ ಕಾರ್ಯಕ್ಕೆ ಕೂಡಲೇ ಚಾಲನೆ ನೀಡಲಾಗುವುದು.

ಮಿತ್ರ: ***ಪಾಲಿಕೆ ಸದಸ್ಯನಾಗಿ, ವಿರೋಧ ಪಕ್ಷ ಹಾಗೂ ಆಡಳಿತ ಪಕ್ಷದ ನಾಯಕರಾಗಿ ಕೆಲಸ ಮಾಡಿರುವ ಅನುಭವ ಈಗ ಸಹಕಾರಿಯಾಗಬಹುದೇ?***

ಶಿವಕುಮಾರ್: ಖಂಡಿತವಾಗಿಯೂ ಹಿಂದಿನ ಅನುಭವ ಸಹಕಾರಿಯಾಗಲಿದೆ. ಮೂರು ಬಾರಿ ನಗರ ಪಾಲಿಕೆ ಸದಸ್ಯನಾಗಿ, ತೆರಿಗೆ ಹಣಕಾಸು ಸ್ಥಾಯಿ ಸಮಿತಿ ಹಾಗೂ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷನಾಗಿ, ವಿರೋಧ ಹಾಗೂ ಆಡಳಿತ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಇದೆಲ್ಲದರ ಅನುಭವದ ಆಧಾರದ ಮೇಲೆ ಮೈಸೂರು ನಗರದ ಅಭಿವೃದ್ಧಿ ದೃಷ್ಟಿಯಿಂದ ಏನೆಲ್ಲಾ ಕಾರ್ಯಕ್ರಮಗಳನ್ನು ರೂಪಿಸಬಹುದು ಎಂಬುದರ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ.

ಮಿತ್ರ: ***ಮೈಸೂರು ನಗರದಲ್ಲಿನ ರೆವಿನ್ಯೂ ಬಡಾವಣೆಗಳ ಅಭಿವೃದ್ಧಿ ಸಂಬಂಧ ತಮ್ಮ ನಿಲುವು?***

ಶಿವಕುಮಾರ್: ಮೈಸೂರಿನಲ್ಲಿರುವ ರೆವಿನ್ಯೂ ಬಡಾವಣೆಗಳಿಗೆ ಸಂಬಂಧಿಸಿದಂತೆ ಬಿ–ಖಾತೆ ಮಾಡಿಕೊಡಬೇಕೆಂದು ಕೌನ್ಸಿಲ್ ಸಭೆಯಲ್ಲಿ ನಿರ್ಧರಿಸಿ, ಸರ್ಕಾರಕ್ಕೂ ಪ್ರಸ್ತಾವನೆ ಕಳುಹಿಸಿ ಕೊಡಲಾಗಿದೆ. ಬಿ–ಖಾತೆ ಮಾಡಿಕೊಡುವುದರ ಜೊತೆಗೆ ರೆವಿನ್ಯೂ ಬಡಾವಣೆಗಳಿಂದ ಬರುವ ಆದಾಯವನ್ನು ಅದೇ ಬಡಾವಣೆಗಳ ಅಭಿವೃದ್ಧಿಗೆ ವಿನಿಯೋಗಿಸಲಾಗುವುದು. ಈ ಮೂಲಕ ರೆವಿನ್ಯೂ ಬಡಾವಣೆಗಳನ್ನು ಸುಸಜ್ಜಿತ ಬಡಾವಣೆಗಳನ್ನಾಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಮಿತ್ರ: ***ವಾರ್ಡ್ ಬದಲಾವಣೆ ಮಾಡಿದ ಬಳಿಕವೂ ಪಾಲಿಕೆ ಚುನಾವಣೆಯಲ್ಲಿ ಜಯಗಳಿಸಿದ್ದೀರಿ. ಮೇಲಾಗಿ ಈಗ ಮೇಯರ್ ಆಗಿದ್ದೀರಿ. ಇದೇನು ಅದೃಷ್ಟವೇ?***

ಶಿವಕುಮಾರ್: ನಾನು ಹುಟ್ಟಿ, ಬೆಳೆದ ಸುಣ್ಣದ ಕೇರಿಯಲ್ಲಿ 2 ಬಾರಿ ಪಾಲಿಕೆ ಸದಸ್ಯನಾಗಿ ಆಯ್ಕೆಯಾಗಿದ್ದೇನೆ. ಅಲ್ಲಿ ನನ್ನದೇ ಜನರಿದ್ದಾರೆ. ಅಲ್ಲಿನ ಜನರ ಪ್ರೀತಿ–ವಿಶ್ವಾಸ ಗಳಿಸಿದ್ದೇನೆ. ಹೊಸ ವಾರ್ಡ್‌ಗೆ ಬಂದ ಮೇಲೆ ನನ್ನ ಸ್ನೇಹಿತರ ಬಳಗ, ಹಿತೈಷಿಗಳು ಸ್ವಯಂ ಪ್ರೇರಿತವಾಗಿ ಜನರಿಗೆ ಮತ ನೀಡುವಂತೆ ಕೋರಿದ್ದಾರೆ. ಒಳ್ಳೆಯ ಕೆಲಸಗಾರ ಬಂದಿದ್ದಾನೆ. ಅವನಿಗೆ ಮತ ನೀಡಬೇಕು ಎಂದು ಜನರೇ ಪ್ರಚಾರ ಮಾಡಿ ಮತ ನೀಡಿ ಗೆಲ್ಲಿಸಿದ್ದಾರೆ. ಮತಗಟ್ಟೆಯಲ್ಲಿ ನಿಂತಿದ್ದ ಸಂದರ್ಭದಲ್ಲಿ ಎಷ್ಟೋ ಜನ ನೀವೇನಾ? ಶಿವಕುಮಾರ್, ನಿಮ್ಮ ಬಗ್ಗೆ ಸಾಕಷ್ಟು ಜನರು ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ನಿಮಗೆ ಮತ ನೀಡಿದ್ದೇವೆ ಎಂದಿದ್ದರು.

ಮಿತ್ರ: ***ನಿಮ್ಮ ತಂದೆಯವರ ಕನಸ್ಸನ್ನು ನನಸು ಮಾಡಿದ್ದೀರಿ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು?***

ಶಿವಕುಮಾರ್: ನಮ್ಮ ತಂದೆ ಪಾಲಿಕೆಯಲ್ಲಿ 4ನೇ ದರ್ಜೆಯ ನೌಕರರಾಗಿದ್ದರು. ಅವರಿಗೆ ಒಬ್ಬ ಪಾಲಿಕೆ ಸದಸ್ಯರೆಂದರೆ ಭಾರೀ ಗೌರವ. ಅಂತಹ ಸಂದರ್ಭದಲ್ಲಿ ನನ್ನ ಮಗನು ಇಲ್ಲಿ ಸದಸ್ಯನಾಗಬೇಕು, ಮೇಯರ್ ಆಗಬೇಕು ಎಂಬ ಭಾವನೆ ಅವರಲ್ಲಿತ್ತು. ಇಂದು ಅವರ ಕನಸು ನನಸಾಗಿದೆ. ಇದಕ್ಕೆ ತಂದೆ–ತಾಯಿ ಆಶೀರ್ವಾದ, ಭಗವಂತನ ಕೃಪೆ ಹಾಗೂ ಹಿತೈಷಿಗಳ ಸಹಕಾರ ಮುಖ್ಯ ಕಾರಣವಾಗಿದೆ.

ಮಿತ್ರ: **ನಾಯಕ ಸಮುದಾಯದಲ್ಲಿಯೇ ಮೈಸೂರು ಮೇಯರ್ ಸ್ಥಾನ ಪಡೆದ ಮೊದಲಿಗರಾಗಿ ಏನು ಹೇಳಲು ಬಯಸುತ್ತೀರಾ?**

ಶಿವಕುಮಾರ್: ಮೊದಲನೆಯದಾಗಿ ಮೇಯರ್ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಇದರ ನಡುವೆಯೂ ಎಸ್ಟಿ ಸಮುದಾಯದ ಒಬ್ಬ ಸದಸ್ಯನಿಗೆ ಮೇಯರ್ ಸ್ಥಾನ ನೀಡಿದ್ದು ಭಾರತೀಯ ಜನತಾ ಪಾರ್ಟಿ. ಬೇರೆ ಯಾವುದೇ ಪಕ್ಷದಲ್ಲಿಯೂ ಈ ರೀತಿಯ ಅವಕಾಶ ದೊರೆಯುವುದಿಲ್ಲ. ಅದಕ್ಕೆ ನನ್ನ ಪಕ್ಷ, ನಾಯಕರಿಗೆ ಚಿರ ಋಣಿ. ಅವರ ನಂಬಿಕೆಯಂತೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತೇನೆ.

ಮಿತ್ರ: ***ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಸದಸ್ಯರಿಗೆ ತಾವು ಹೇಳುವುದೇನು?***

ಶಿವಕುಮಾರ್: ಮೈಸೂರು ನಗರದ ಅಭಿವೃದ್ಧಿಯ ದೃಷ್ಟಿಯಿಂದ ಕಾಂಗ್ರೆಸ್‌ನ ಸದಸ್ಯರು ಸೇರಿದಂತೆ ಎಲ್ಲರೂ ಕೈ–ಜೋಡಿಸಬೇಕು ಎಂದು ಮನವಿ ಮಾಡುತ್ತೇನೆ. ಪಕ್ಷ ಬೇರೆ ಬೇರೆಯಾದರೂ ಅಭಿವೃದ್ಧಿ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಎಲ್ಲರ ಸಹಕಾರ, ಪ್ರೋತ್ಸಾಹ ಅಗತ್ಯ.

ಕೊಂಡವರಷ್ಟೇ ಸುಖಿಗಳು... ಜೀವನ ಮಾರಾಟಕ್ಕಿದೆ...!







ಒಂದು ಕಾಲದಲ್ಲಿ ಮೈಸೂರು, ಕರುನಾಡಿನಲ್ಲಿ ಜೀವಂತ ಜಿಲ್ಲೆ. ಜೀವನವೆಂದರೆ ವಿರಕ್ತಿ ಹುಟ್ಟಿರುವವನು ಬಂದರೂ ಮೈಸೂರು ಅವನಿಗೆ ಉತ್ಸುಕತೆ ತುಂಬಿ ಬಿಡುತ್ತಿತ್ತು. ಅಂತಹ ವಾತಾವರಣ ಮೈಸೂರಿನ ಬೀದಿ ಬೀದಿಗಳಲ್ಲಿ ನಲಿಯುತ್ತಿತ್ತು. ಆದರೆ ಈಗ ಏನಾಗಿದೆ ನಮ್ಮ ಮೈಸೂರಿಗೆ. ಗಣೇಶ ಚತುರ್ಥಿ ಎಂದು ಎಂದಿನಂತೆ ಮೈಸೂರಿನ ಬೀದಿ ಬೀದಿಗಳಲ್ಲಿ ಸುತ್ತಲು ಹೋದರೆ ಏರಿಯಾಗೆ ಕೇವಲ ಒಂದೋ ಅಥವಾ ಎರಡೋ ಗಣೇಶನ ಪ್ರತಿಷ್ಠಾಪನೆಯಾಗಿದೆ. ಕಳೆದ 25 ವರ್ಷಗಳಿಂದ ಗಣೇಶನ ಅತೀ ಅದ್ದೂರಿಯಾಗಿ ಪ್ರತಿಷ್ಠಾಪನೆ ಮಾಡುತ್ತಿದ್ದವರು, ತುಂಬಾ ಹಳಬರು ಈ ಸಾರಿ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿಲ್ಲ. ಜನರೆಲ್ಲಾ ಖಾಲಿ ಖಾಲಿ, ಅಂಗಡಿ ಮುಂಗಟ್ಟುಗಳು, ಹೋಟೆಲ್‌ಗಳು ಮುಚ್ಚಿವೆ. ವಾಹನ ಸಂಚಾರವು ಅತೀ ವಿರಳವಾಗಿದೆ. ಹಬ್ಬದ ಕಳೆಯಂತೂ ಇಲ್ಲವೇ ಇಲ್ಲ. ಹಾಗಾದರೆ ಎಲ್ಲಿ ಹೋದರು ಜನ? ಎಲ್ಲರೂ ತಮ್ಮ ತಮ್ಮ ಮನೆಯಲ್ಲಿ ಬಾಗಿಲ ಹಾಕಿಕೊಂಡು ಮೊಬೈಲ್ ವಾಟ್ಸಪ್‌ಗಳಲ್ಲಿ, ಸೋಷಿಯಲ್ ಮೀಡಿಯಾಗಳಲ್ಲಿ, ಟಿವಿಯ ನ್ಯೂಸ್ ಚಾನಲ್‌ಗಳಲ್ಲಿ ಎಂದಿಗಿಂತ ಈ ವರ್ಷವೇ ಅದ್ದೂರಿಯ ಗಣೇಶ ಚತುರ್ಥಿ ಎನ್ನುವ ಅತಿರೇಕದ ವರ್ಣನೆಗಳಲ್ಲಿ, ಭೂಮಿಯಲ್ಲಿ ಬದುಕಿರುವುದು ನಾನು, ನನ್ನ ಹೆಂಡತಿ, ಮಕ್ಕಳು ಮತ್ತು ಮೊಬೈಲು ಎಂಬ ಭ್ರಮೆಯಲ್ಲಿ ಮನೆಯ ಬಾಗಿಲನ್ನು ಮತ್ತೆ ಮುಚ್ಚಿ ಅವರ ಜೊತೆ ಗಣೇಶ ಚತುರ್ಥಿ ಆಚರಿಸುತ್ತಿದ್ದಾರೆ. ಇದಲ್ಲವೇ ಮನುಷ್ಯ ಮಾನಸಿಕವಾಗಿ ಅವನತಿಗೆ ಸಾಗುತ್ತಿರುವ ಮುನ್ಸೂಚನೆಗಳು.

ಗಣೇಶ ಚತುರ್ಥಿ ಎಂದರೆ ಭಕ್ತಿಗೂ ಮಿಗಿಲಾಗಿ ಎಲ್ಲರೂ ಕೂಡಿ ಆಚರಿಸಲು, ಸಂತಸಪಡಲು, ಭಾವೈಕ್ಯತೆಯನ್ನು ಸಾರಲು ಮಹೋನ್ನತ ಕಾರಣ. ತೀರ ಕೊನೆಯ ದಶಕದವರೆಗೂ ಮೈಸೂರು ಈ ಹೀನಾಯ ಸ್ಥಿತಿಯನ್ನು ತಲುಪಿರಲಿಲ್ಲ. ಮೈಸೂರಲ್ಲಿ ಆಷಾಢ ಬಂತೆಂದರೆ ಸಾಕು ಮೈಸೂರು ಕಳೆಗಟ್ಟಿ ಬಿಡುತ್ತಿತ್ತು. ಎಂತಹ ಸಂಭ್ರಮ, ಬೆಳಗಿನ ಜಾವ 4ಕ್ಕೆ ಎದ್ದು ಚಾಮುಂಡೇಶ್ವರಿ ತಾಯಿಯನ್ನು ನೋಡಲು ಬೆಟ್ಟಕ್ಕೆ ಪಯಣ, ದರ್ಶನ ಮುಗಿಯುತ್ತಿದ್ದಂತೆ ಪ್ರಸಾದ ಕೊಡಲು ನಾ ಮುಂದು ತಾ ಮುಂದು ಎಂದು, ಹಂಚಲು ನಿಲ್ಲುತ್ತಿದ್ದ ನೂರಾರು ಭಕ್ತಾದಿಗಳು, ಹುಡುಗಿಯರನ್ನು ನೋಡಲು ನಿಲ್ಲುತ್ತಿದ್ದ ಪಡ್ಡೆ ಹುಡುಗರು, ಹೊಸದಾಗಿ ಮದುವೆಯಾದ ಜೋಡಿಗಳ ಸಂಭ್ರಮ, ಸಣ್ಣ ಸಣ್ಣ ಕೀಟಲೆಗಳು ಈ ಹಬ್ಬ ಭರ್ತಿ ಒಂದು ತಿಂಗಳು ನಡೆಯುತ್ತಿತ್ತು. ಇದು ಮುಗಿಯುತ್ತಿದ್ದಂತೆ ಮಳೆಯ ಜೊತೆ ಜೊತೆಯಲಿ **ಶ್ರಾವಣ**.

ನಂತರ **ಗಣೇಶ ಚತುರ್ಥಿ** ಬೀದಿ ಬೀದಿಗೆ ಮೂರು ನಾಲ್ಕು ಗಣೇಶನ ಮೂರ್ತಿಗಳು. ಒಂದು ಗುಂಪಿಗಿಂತ ಮತ್ತೊಂದು ಗುಂಪು ಭಿನ್ನವಾಗಿ ಅದ್ದೂರಿಯಾಗಿ ಮಾಡುವ ತವಕ. ಅವರು ನಡೆಸುವ ಆರ್ಕೆಸ್ಟ್ರಾಗಳು, ನಾಟಕಗಳು, ಆಡಿಸುವ ಸಾಂಸ್ಕೃತಿಕ ಆಟಗಳು, ಪೂಜೆಗೆ ಹೆಣ್ಣು ಮಕ್ಕಳು ಬಂದಾಗ ಹಲ್ಲು ಕಿರಿದು ನಿಲ್ಲುವ ಗಂಡು ಮಕ್ಕಳು ಇದು ಕಡಿಮೆ ಎಂದರು 15 ದಿವಸದ ಹಬ್ಬ. ಆದರೆ ವರ್ಷವಿಡೀ ಮೆಲುಕು ಹಾಕುವ ಸಂಭ್ರಮ.



ಇದು ಮುಗಿಯುತ್ತಿದ್ದಂತೆ **ಮೈಸೂರು ದಸರಾ ಎಷ್ಟೊಂದು ಸುಂದರ** ಎಲ್ಲೆಲ್ಲೂ ನಗೆಯ ಪನ್ನೀರ್ ಮೈಸೂರಲ್ಲಿ ದಸರಾ ನಡೆಯುವಾಗ ಸ್ವರ್ಗವು ನಾಚುತ್ತಿತ್ತು. ಎಲ್ಲೆಲ್ಲೂ ತೋರಣ ಸಿಂಗಾರ, ಮೈಸೂರಿನ ಮೂಲೆ–ಮೂಲೆಗಳಲ್ಲೂ ಕಾರ್ಯಕ್ರಮಗಳು, ಅರಮನೆಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಯುವ ದಸರಾ, ಆಹಾರಮೇಳ, ಸಿನಿ ದಸರಾ ಪ್ರಪಂಚದ ಎಲ್ಲಾ ಭಾಷೆಯ ಮಹೋನ್ನತ ಸಿನಿಮಾಗಳು ಮೈಸೂರಿನ ದಸರಾದಲ್ಲಿ. ಕಾರ್ಯಕ್ರಮಗಳ ಪಟ್ಟಿಯನ್ನೇ ಓದಿ ಮುಗಿಸಲು ದಸರಾದ 10 ದಿವಸಗಳು ಬೇಕಾಗುತ್ತಿತ್ತು. ಈ ರೀತಿ ಸ್ವರ್ಗಕ್ಕೆ ಕಿಚ್ಚು ಹಚ್ಚಿದ ಮರುಗಳಿಗೆಯಲ್ಲಿ **ದೀಪಾವಳಿ ದೀಪಾವಳಿ ಗೋವಿಂದ ಲೀಲಾವಳಿ** ಅಳಿಯ ಮಗನಾದನು ಮಾವ ಮಗುವಾದನು ಹಹಹ... (ಈ ಸಾಲು ಕನ್ನಡ ಚಿತ್ರಗೀತೆ) ದೀಪಗಳ ಹಬ್ಬ ಮುಗಿಯುತ್ತಿದ್ದಂತೆ **ಕನ್ನಡ ರಾಜ್ಯೋತ್ಸವ** ಮೈಸೂರಿನ ಗಲ್ಲಿ ಗಲ್ಲಿಯಲ್ಲಿ ಆಟೋ ಸ್ಟ್ಯಾಂಡಿನವರು ನಡೆಸುತ್ತಿದ್ದ ಕನ್ನಡದ ಆರ್ಕೆಸ್ಟ್ರಾಗಳು, ಪೂಜೆ ಮಾಡಿ ಹಂಚುತ್ತಿದ್ದ ಪ್ರಸಾದ ಈ ಹಬ್ಬದ ವಾತಾವರಣಕ್ಕೆ ಕೊನೆಯೇ ಇಲ್ಲ.

ನಂತರ **ಕ್ರಿಸ್ಮಸ್** ಕೇಕ್ ತಯಾರಿಯಲ್ಲಿ ಹೊಸ ವರ್ಷದ ಗುಂಗಿನಲ್ಲಿ ಮೈಸೂರಿನ ಆರು ತಿಂಗಳ ನಿರಂತರ ಹಬ್ಬಕ್ಕೆ ತೆರೆ ಬೀಳುತ್ತದೆ ಇದಲ್ಲವೇ ನಿಜವಾದ ಮೈಸೂರು, ಸಹಬಾಳ್ವೆ, ಇದನ್ನು ಬಿಟ್ಟು ಮೊಬೈಲ್‌ನ ಗುಲಾಮಗಿರಿಯಲ್ಲಿ, ಧಾವಂತದ ಬದುಕಿನಲ್ಲಿ ನಶಿಸಿದರೆ ಹೇಗೆ? ಇಂದು ಹಣವಿದ್ದರೆ ಎಲ್ಲವೂ ಸಿಗುತ್ತದೆ. ಜೀವನ ಮಾರಾಟಕ್ಕಿದೆ... ಕೊಂಡವರು ಸುಖಪಡಲಾರರು...

–ಸಂದೀಪ್‌ಕುಮಾರ್ ಹೆಚ್.ಆರ್(ರೆಬಲ್ ಸ್ಯಾಂಡಿ)

ಒಂದನೇ ಪುಟದಿಂದ

ಶಿಫಾರಸು ಮಾಡಿ

ಜೀವನೋಪಾಯಕ್ಕೆ ತೊಂದರೆಯಾಗಿದೆ. ಆದ್ದರಿಂದ ಮಾನವೀಯ ದೃಷ್ಟಿಯಿಂದ ಅವರಿಗೆ ನೆರವು ನೀಡಲು ಪರಿಶೀಲಿಸುವಂತೆ ಕೋರಿದರು. ರಾಜ್ಯವು 330 ಕಿ.ಮೀ. ಕರಾವಳಿ ಪ್ರದೇಶವನ್ನು ಹೊಂದಿದ್ದು, ಸಮುದ್ರ ಕೊರೆತ ತಡೆಗಟ್ಟಲು ಹಲವು ಸೂಕ್ಷ್ಮ ಪ್ರದೇಶಗಳಲ್ಲಿ 350 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಆದರೆ ಹೊಸ ಜಾಗಗಳಲ್ಲಿ ಕಡಲ ಕೊರೆತ ಉಂಟಾಗಿದ್ದು, ರಾಜ್ಯದ ಸಂಪೂರ್ಣ ಕರಾವಳಿ ಪ್ರದೇಶದ ರಕ್ಷಣೆಗೆ ಕೇಂದ್ರದ ನೆರವಿನ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಉತ್ತರಕರ್ನಾಟಕ ಭಾಗದಲ್ಲಿಯೂ ಹಿಂದೆ ಪ್ರವಾಹ ಕಾಣಿಸಿಕೊಳ್ಳದ ಕಲಬುರಗಿ, ಗದಗ, ಬೀದರ್, ಕೊಪ್ಪಳ ಮೊದಲಾದ ಜಿಲ್ಲೆಗಳಲ್ಲಿ ಈ ಬಾರಿ ಪ್ರವಾಹ ಉಂಟಾಗಿದೆ. ಕಳೆದ ನವೆಂಬರ್ ತಿಂಗಳಿನಿಂದ ಬಿಟ್ಟು ಬಿಟ್ಟು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಮಳೆಯ ಮಾದರಿಯನ್ನು ಅಧ್ಯಯನ ನಡೆಸುವ ಅಗತ್ಯವಿದೆ. ಸತತ ಮಳೆಯಿಂದಾಗಿ ರಾಜ್ಯದ ಬಹುತೇಕ ಕೆರೆ ಕಟ್ಟೆಗಳು ತುಂಬಿ ಹರಿಯುತ್ತಿವೆ. ಇದರಿಂದಾಗಿ ಕೆರೆ ತುಂಬಿ, ಕೆರೆ ಏರಿ ಒಡೆದು ಪ್ರವಾಹ ಉಂಟಾಗುತ್ತಿದೆ. ನದಿ ಪ್ರವಾಹಕ್ಕಿಂತ ಭಿನ್ನ ಪರಿಸ್ಥಿತಿ ಇದಾಗಿದೆ ಎಂದು ಮುಖ್ಯಮಂತ್ರಿಗಳು ಅಭಿಪ್ರಾಯಪಟ್ಟರು. ರಾಜ್ಯದಲ್ಲಿ ಕಳೆದ ನವೆಂಬರ್‌ನಿಂದೀಚೆಗೆ ಮೂಲಸೌಕರ್ಯಗಳ ದುರಸ್ತಿಗೆ ಎರಡು ಬಾರಿ 500 ಕೋಟಿ ರೂ.ಗಳಂತೆ ಹಾಗೂ ಎರಡು ದಿನಗಳ ಹಿಂದೆ 600 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಬೆಳೆ ಹಾನಿಗೆ ರಾಜ್ಯ ಸರ್ಕಾರ ಹೆಚ್ಚುವರಿ ಪರಿಹಾರ ನೀಡುತ್ತಿದ್ದು, 18.58 ಲಕ್ಷ ರೈತರಿಗೆ ಒಟ್ಟು 2452 ಕೋಟಿ ರೂ. ಪರಿಹಾರ ವಿತರಿಸಲಾಗಿದೆ. ಇದರಲ್ಲಿ 1160 ಕೋಟಿ ರೂ. ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರದ ಬೊಕ್ಕಸದಿಂದ ಭರಿಸಲಾಗಿದೆ. ಮನೆ ಹಾನಿಗೂ ನಷ್ಟದ ಪ್ರಮಾಣವನ್ನು ಆಧರಿಸಿ, ಪರಿಹಾರ ವಿತರಿಸಲಾಗುತ್ತಿದೆ. ಈ ಎಲ್ಲ ಪರಿಹಾರಗಳನ್ನೂ ಅತ್ಯಂತ ತ್ವರಿತವಾಗಿ, ಪಾರದರ್ಶಕ ವಾಗಿ ನೇರವಾಗಿ ಸಂತ್ರಸ್ತರ ಖಾತೆಗೆ ಜಮಾ ಮಾಡಲಾಗುತ್ತಿದೆ ಎಂದು ವಿವರಿಸಿದರು. ಕಳೆದ ಒಂದು ವಾರದಿಂದೀಚೆಗೆ ಪುನಃ ಭಾರಿ ಮಳೆಯಾಗುತ್ತಿದ್ದು, ಬೆಂಗಳೂರು, ರಾಮನಗರ, ಮಂಡ್ಯ ಮತ್ತಿತರ ಜಿಲ್ಲೆಗಳಲ್ಲಿ ಬಹಳಷ್ಟು ಹಾನಿಯಾಗಿದೆ. ಈ ಅವಧಿಯಲ್ಲಿ ಸಂಭವಿಸಿದ ನಷ್ಟದ ಕುರಿತು ಪೂರಕ ಪ್ರಸ್ತಾವನೆಯನ್ನು ಸಹ ಕೂಡಲೇ ಸಲ್ಲಿಸಲಾಗುವುದು ಎಂದರು.

‘ಭಾರತ್ ಜೋಡೋ’ ಯಾತ್ರೆ ಆರಂಭ

ಇದ್ದಂತೆ ಎಂದು ಈ ಹಿಂದೆ ಹೇಳಿದ್ದರು. 2024ರ ಸಾರ್ವತ್ರಿಕ ಚುನಾವಣೆಗೆ ಮುಂಚಿತವಾಗಿ ಬೃಹತ್ ಸಾಮೂಹಿಕ ಸಂಪರ್ಕ ಕಾರ್ಯಕ್ರಮವಾಗಿ ಕಾಂಗ್ರೆಸ್ ಪಾದಯಾತ್ರೆಯನ್ನು ಯೋಜಿಸಿದೆ. ಆದಾಗ್ಯೂ, ಕಾಂಗ್ರೆಸ್ ನಾಯಕರು ಯಾವುದೇ ರಾಜಕೀಯ ದೃಷ್ಟಿಕೋನವನ್ನು ನಿರಾಕರಿಸಿದರು. ಮತ್ತು ಯಾತ್ರೆಯು ದೇಶವನ್ನು ಒಂದುಗೂಡಿಸುವ ಉದ್ದೇಶವನ್ನು ಹೊಂದಿದೆ ಎಂದು ಹೇಳಿದ್ದಾರೆ. ಸಂಜೆ ಕನ್ಯಾಕುಮಾರಿಯ ಮಹಾತ್ಮಗಾಂಧಿ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರಾಹುಲ್ ಗಾಂಧಿಗೆ, ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರು ಯಾತ್ರೆಯ ಉದ್ಘಾಟನೆಯಲ್ಲಿ ರಾಷ್ಟ್ರಧ್ವಜವನ್ನು ಹಸ್ತಾಂತರಿಸಿದರು. 3,500 ಕಿಲೋಮೀಟರ್ ಉದ್ದದ ಯಾತ್ರೆಯನ್ನು ಕಾಂಗ್ರೆಸ್ ಕಳೆದ ಶತಮಾನದಲ್ಲಿ ಆಯೋಜಿಸಿದ ಅತಿ ಉದ್ದದ ಪಾದಯಾತ್ರೆ ಎಂದು ಹೆಸರಿಸಿದೆ. ಗುರುವಾರ ಬೆಳಗ್ಗೆ ಪಾದಯಾತ್ರೆಯೊಂದಿಗೆ ಭಾರತ್ ಜೋಡೋ ಯಾತ್ರೆ ಆರಂಭವಾಗಲಿದೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ಪ್ರತಿದಿನ ಬೆಳಿಗ್ಗೆ 7 ರಿಂದ ಸಂಜೆ 6.30ರವರೆಗೆ 2 ಬ್ಯಾಚ್‌ಗಳಲ್ಲಿ ಪಾದಯಾತ್ರೆ ಮಾಡಲಿದ್ದಾರೆ. ಮುಂದಿನ 150 ದಿನಗಳಲ್ಲಿ 12 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಭಾರತ್ ಜೋಡೋ ಯಾತ್ರೆ ಸಾಗಲಿದೆ. ರಾಹುಲ್ ಗಾಂಧಿಯವರು ಕನ್ಯಾಕುಮಾರಿಯಿಂದ ಯಾತ್ರೆ ಕೊನೆಯಾಗುವ ಕಾಶ್ಮೀರದವರೆಗೆ ನಡೆಯಲಿದ್ದಾರೆ. ಹಾಸಿಗೆ, ಶೌಚಾಲಯ ಮತ್ತು ಏರ್ ಕಂಡಿಷನರ್ ಇರುವ ಕಂಟೇನರ್‌ನಲ್ಲಿ ರಾಹುಲ್ ತಂಗುವರು. ಇತರ ಭಾರತ್ ಯಾತ್ರಿಗಳಿಗೂ ಕಂಟೈನರ್‌ಗಳನ್ನು ಸ್ಥಾಪಿಸಲಾಗಿದ್ದು, ರಾಹುಲ್ ಗಾಂಧಿಯವರೊಂದಿಗೆ ಸಂಪೂರ್ಣ ಮಾರ್ಗದಲ್ಲಿ ನಡೆಯಲಿದ್ದಾರೆ. ‘ಭಾರತ್ ಜೋಡೋ ಯಾತ್ರೆ’ ಉದ್ಘಾಟನೆಗೆ ಕನ್ಯಾಕುಮಾರಿಯಲ್ಲಿರುವ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ರಾಹುಲ್ ಗಾಂಧಿ ಮತ್ತೆ ಪಕ್ಷದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳುವುದರ ಪರವಾಗಿದ್ದಾರೆ. ಇದರಿಂದ ಪಕ್ಷ ಸದೃಢವಾಗುತ್ತದೆ ಎಂದರು. ಹಣದುಬ್ಬರ, ಬೆಲೆ ಏರಿಕೆ ಮತ್ತು ನಿರುದ್ಯೋಗ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಾಮಾನ್ಯ ಜನರೊಂದಿಗೆ ಸಂಪರ್ಕ ಸಾಧಿಸಲು ಈ ಯಾತ್ರೆಯು ಪಕ್ಷದ ಅತಿದೊಡ್ಡ ‘ಜನ ಸಂಪರ್ಕ ಕಾರ್ಯಕ್ರಮ’ ಎಂದು ಕಾಂಗ್ರೆಸ್ ಹೇಳುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR RENT / LEASE
2 Bedroom House with attached Bathroom in Nimishamba Extension, 12th Cross, Near Devi Medicals, Kuvempunagar. Contact:
9481832675

FOR SALE
Running Floor mill Equipments in Good Condition
* Plate Mills - 2 Nos
* Emary Mills (16"+18") 1+1=2 Nos
* Destone Mill Unit - 1 Nos
* Ragi Polisher - 1 Nos
* Chilly Cutter - 1 Nos
* 5 HP Motors - 2 Nos
* 7.5 HP Motor - 1 No

9901212321 / 8880883339

ಕಲ್ಯಾಣ ಮಂಟಪ ಲಭ್ಯವಿದೆ
ಶಿವಮ್ಮ ಪಿ.ವಿ.ಮಹದೇವಪ್ಪ ಕಲ್ಯಾಣ ಮಂಟಪ KRS ರಸ್ತೆ, ವಿನಾಯಕನಗರ, ಮೈಸೂರು. ನಮ್ಮ ಮೇಲ್ಕಂಡ ಕಲ್ಯಾಣ ಮಂಟಪದಲ್ಲಿ ಮದುವೆ ಹಾಗೂ ಶುಭ ಕಾರ್ಯಗಳು ಈಗಾಗಲೇ ನಡೆಯುತ್ತಿವೆ. ಇದರ ಜೊತೆಗೆ **ಜೀಗರ ಊಟಕ್ಕ** ರಿಯಾಯಿತಿ ದರದಲ್ಲಿ ಕೊಡಲು ಪ್ರಾರಂಭಿಸಿದ್ದೇವೆ. ಸದುಪಯೋಗ ಪಡೆದುಕೊಳ್ಳಿ.
9342110670

ಬೇಕಾಗಿದ್ದಾರೆ
ನಮಗೆ 24/7 ಅಡುಗೆಯವರು ಮನೆಕೆಲಸದವರು ಹೋಮ್ ನರ್ಸಿಂಗ್ ಕೆಲಸ ಮಾಡಲು ಪುರುಷ ಅಥವಾ ಮಹಿಳಾ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ.
6361470947

ಬೇಕಾಗಿದ್ದಾರೆ
ನುರಿತ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಮೈಸೂರಿನ ಪ್ರತಿಷ್ಠಿತ ಕಂಪನಿ, ಆಫೀಸ್, ಮಾಲ್‌ಗಳಲ್ಲಿ ಕರ್ತವ್ಯ ನಿರ್ವಹಿಸಲು ಬೇಕಾಗಿದ್ದಾರೆ. ವೇತನ:– 11,000 ದಿಂದ 15,000, 8 ಗಂಟೆ ಕೆಲಸ + ವಾರದ ರಜೆ, ವಯೋಮಿತಿ 25 – 45 SSLC Pass ಸಂದರ್ಶನಕ್ಕೆ ಮೂಲ ದಾಖಲಾತಿಗಳನ್ನು ತರತಕ್ಕದ್ದು. ಸಂಪರ್ಕಿಸಿ: ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ, ನಂ.513 ಲಕ್ಷ್ಮಿ ಚಿತ್ರಮಂದಿರ ಎದುರು ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು-24. ಬೆಳಿಗ್ಗೆ 10.30 ರಿಂದ ಸಂಜೆ 5.30 ರವರೆಗೆ ಕರೆಮಾಡತಕ್ಕದ್ದು.
0821-4247385 / 9480420666

ಕೆಲಸಕ್ಕೆ ಬೇಕಾಗಿದ್ದಾರೆ
ಆಫೀಸ್, ಕಂಪನಿ, ಫ್ಯಾಕ್ಟರಿ, ಕಾಲ್‌ಸೆಂಟರ್, ಟೆಲಿಕಾಲರ್, ಕೆಲಸಗಳಿಗೆ, ಯುವಕ, ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ITI (Sadring, Welding) & Any Degree, Pass & Fail. ಸಂಪರ್ಕಿಸಿ:
9036461347 / 9611208553

FOR RENT
3 BHK independent house for Rent, Car Garage, Mosaic Floor, D.No. 1322, 12th Cross, 12th Main, Vijayanagar 1st Stage, Mysore.
7411842003
9448281179

ಬೇಕಾಗಿದ್ದಾರೆ
ಎಲ್ಲಾ ಜಿಲ್ಲೆಗಳಲ್ಲಿರುವ MNC / NON MNC ಕಂಪನಿಗಳಿಗೆ ಯುವಕ – ಯುವತಿಯರು ಬೇಕಾಗಿದ್ದಾರೆ. Company Work / Office Work / Security / House keeping / Helpers / Packing, 7th, 10th, PUC, ITI, Diploma, Degree Pass / Fail, ಸಂಬಳ:– 13,000 - 20,000/- Contact:
9844602275

ತಕ್ಷಣ ಬೇಕಾಗಿದ್ದಾರೆ
JKD ಕಂಪನಿಯಲ್ಲಿ ಕೆಲಸ ಮಾಡಲು ಮಹಿಳಾ ಹಾಗೂ ಪುರುಷ ಅಭ್ಯರ್ಥಿಗಳು Work from Home ಹಾಗೂ Part Time - Full Time ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಯಾವುದೇ ರೀತಿಯ ಪ್ರವೇಶ ಶುಲ್ಕ ಇರುವುದಿಲ್ಲ.
9663134472 / 9663135430

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.
2) ಶಿಕ್ಷರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

SITE FOR SALE
40x60, N/F @ Kaveri Grameena Layout, (Near SBM Layout, Bogadi), Mysore.
Mob: 98802 73834

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP Any Degree	4 HOURS Age Limit	8000/- 18 to 35

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಶ್ರೀ ಗೌರಿಶಂಕರ ಟ್ರಾವೆಲ್ಸ್
26/9/22 (7 ದಿನ) : ISHA ಫೌಂಡೇಷನ್, ಪಳನಿ, ಮಧುರೈ, ಕನ್ಯಾಕುಮಾರಿ, ರಾಮೇಶ್ವರ, ಶ್ರೀರಂಗಂ, 9 ನವಗ್ರಹ ಇತ್ಯಾದಿ. 8/10/22 (14/18 ದಿನ) ದೆಹಲಿ, ಹರಿದ್ವಾರ್, ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್, ಇತ್ಯಾದಿ. 30/10/22 (8/12 ದಿನ) ದೆಹಲಿ, ಆಗ್ರಾ, ಮಥುರ, ಅಲಹಾಬಾದ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ. 12/11/22 (4 ದಿನ) ಶಿರಡಿ, ಬಾಂಬೆ, ಎಲ್ಲೋರ, 3 ಜ್ಯೋತಿರ್ಲಿಂಗ ಇತ್ಯಾದಿ. (ವಿಮಾನ ಟ್ರೈನ್ ಮತ್ತು ಬಸ್ಸು)
9620002114

ಬೇಕಾಗಿದ್ದಾರೆ
ನಮ್ಮಲ್ಲಿ 8/12 ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು, ಡ್ರೈವರ್, ಗನ್ ಮ್ಯಾನ್‌ಗಳು ಬೇಕಾಗಿದ್ದಾರೆ.
7892573043

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್
Corel Draw & Photoshop ಕಲಿತಿರಬೇಕು
ಅನುಭವ ಇರುವವರಿಗೆ ಆದ್ಯತೆ
ಸಂಬಳ: 12000–15000
ಅಶೋಕ ರೋಡ್, ಮೈಸೂರು
Call: 9741825653

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಗೋಲ್ಡ್ ಕಂಪನಿಯಲ್ಲಿ ಟೆಲಿಕಾಲಿಂಗ್ ಮಾಡಿ ಅನುಭವವುಳ್ಳ ಹುಡುಗಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. 1-2 year Experience, Salary : Basic 8k + Incentive, Age: below 35 yars (Fresher can also attend)
8904131762

S M GOLD COMPANY
ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5400
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

Attractive Interest Rate on FD 11.55% PA
Shares are opened. For more details contact: Sai Multistate Credit Co-operative Society, 3rd Main, 5th Cross, Jayanagar, Mysore.
WANTED: Pigmy Agents Incentive 4%.
Mob: 99027 29729

Immediately Required
Field Executives for Automobile Industry. Salary: 20,000 + Incentives.
Qlfn: 10th & above.
Call: 9986609277

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ಲರ ದೈವ ಚೌಡಮ್ಮ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ...ಮೈಸೂರು...
[illegible]

ವಿನಾಯಕ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6360011649
8197694066

ಮನೆ ಮಾರಾಟಕ್ಕಿದೆ
ಮೈಸೂರು ನಗರ, ಶ್ರೀರಾಂಪುರ 2ನೇ ಹಂತ, ಕಂದಾಯನಗರ, ರಿಂಗ್ ರಸ್ತೆಯ ಪಕ್ಕದಲ್ಲಿ, ಉತ್ತರ ದಿಕ್ಕು, ಪೂರ್ವ ಬಾಗಿಲಿನ 3 ಅಂತಸ್ತಿನ 30x40 (G/F, F/F, S/F, T/F) ಮನೆ ಸುಮಾರು 42,000 ತಿಂಗಳಿಗೆ ಬಾಡಿಗೆ ಬರುವಂತಹ ಎಲ್ಲಾ ಸುಸಜ್ಜಿತ ಸೌಲಭ್ಯಗಳುಳ್ಳ ಮನೆ ಮಾರಾಟಕ್ಕಿದೆ. ಬೆಲೆ 1.75 Cr. (Slightly Negotiable). ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಕರೆ ಮಾಡಿ.
7996504996

ಓಂ ಶ್ರೀ ಮಲೆ ಮಾದೇಶ್ವರ ಸ್ವಾಮಿ ಜ್ಯೋತಿಷ್ಯ ಕೇಂದ್ರ ಕೊಳ್ಳೇಗಾಲದ ಮೋಡಿ ಮನೆತನದವರು ಗುರೂಜಿ ಶ್ರೀ ಟಿ.ಎಸ್.ರಾವ್
ನಿಮ್ಮ ಸಮಸ್ಯೆಗಳಾದ ದಾಂಪತ್ಯ, ಆರೋಗ್ಯ, ಲೈಂಗಿಕ, ಸಂತಾನ, ಅತ್ತೆ ಸೊಸೆ ನಾದಿನಿ ಕಲಹ, ಇವರು ಕೊಟ್ಟ ಪರಿಹಾರ ಇವರಿಗಿಂತ ಮೊದಲು ಬೇರೆ ಯಾರೇ ಮಾಡಿಕೊಟ್ಟಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ವಿಳಾಸ ಬಸವನಗುಡಿ ಸರ್ಕಲ್ ಮೈಸೂರು. ದೂರದ ಊರಿನವರಿಗೆ ಫೋನಿನ ಮುಖಾಂತರ ಪರಿಹಾರ.
9880415389

ಬೋಳು ತಲೆಯ ಸಮಸ್ಯೆಯೇ?


ಕಿರಿದಾಗಿ ಚರ್ಮಕ್ಕೆ ಒಪ್ಪುವಂತಹ ರೋಗಗಳಿಗೆ ಪ್ರಥಮ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

2 New House for sale in Gonikoppal
Modern duplex house 4 BHK fully furnished house for sale at Gonikoppal. Genuine buyers contact:
Mob: 9663395122

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಳೀರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಬಾಧೆ, ಪ್ರೇತಾ ಬಾಧೆ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಲೆಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೂಡಲೇ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ / ಇಲ್ಲದ **ಸೇಲ್ಸ್ ಗರ್ಲ್ಸ್** ಬೇಕಾಗಿದ್ದಾರೆ. ಸಂಪರ್ಕಿಸಿ.:
ಶ್ರೀ ಭಗವನ್ ಸಿಲ್ಕ್ಸ್
ಕೆ.ಆರ್.ಸರ್ಕಲ್, ಮೈಸೂರು.

ಮುಡಾ ಸೈಟ್ ಮಾರಾಟಕ್ಕಿದ
20x30 ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ. ಮಾಣಿಕ್ಯಪುರ ರೋಡ್, ಗಣಗರಹುಂಡಿ ಹತ್ತಿರ, ಅಪೂರ್ವ ಲೇ ಔಟ್, ಸೌತ್ ಫೇಸ್ ಸೈಟ್ ನಂ.35. ಸಂಪರ್ಕಿಸಿ:
9945352252

ಕಳೆದಿದೆ
ಚಂದ್ರಲತಾ, ನಂ. 475, 5ನೇ ಕ್ರಾಸ್, 3ನೇ ಮೇನ್, ಕೆ.ಎಸ್. ಅಶ್ವಥ್ ರಸ್ತೆ, ಕಲ್ಯಾಣಗಿರಿ, ಮೈಸೂರು–570 019, ಇವರಿಗೆ ಸೇರಿದ ಮೈಸೂರಿನ ಶಾಂತವೇರಿ ಗೋಪಾಲಗೌಡ ನಗರದ ನಿವೇಶನ ಸಂಖ್ಯೆ 1397 ಗುತ್ತಿಗೆ ಮತ್ತು ಕ್ರಯಪತ್ರ ರಾಘವೇಂದ್ರ ನಗರದಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 8310808183

ಕಳೆದಿದೆ
ಕೆ. ದೈವನಾಯಕಿ, ರಮಾಬಾಯಿನಗರ, ಮೈಸೂರು ತಾಲ್ಲೂಕು, ಮೈಸೂರು, ನನಗೆ ಸೇರಿದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮನೆ ನಂ. 53ರ ಕಟ್ಟಡ ಪೂರ್ಣಗೊಂಡಿರುವ ದಾಖಲೆ ಪತ್ರ ದಿನಾಂಕ 5–9–2022 ರಂದು ಮನೆ ಸ್ವಚ್ಛಗೊಳಿಸುತ್ತಿರುವಾಗ ಆಕಸ್ಮಿಕವಾಗಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9008821862

ಕಳೆದಿದೆ
ಶಿವಶಂಕರ, ಕೈಕಂಬ ಹೌಸ್, ಬಿ. ಮೂಡ ಗ್ರಾಮ, ಬಂಟವಾಳ ತಾಲ್ಲೂಕು, ದಕ್ಷಿಣ ಕನ್ನಡ, ಇವರಿಗೆ ಸೇರಿದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಸಂಖ್ಯೆ 671ರ ಖಾತಾ ಹಾಗೂ ಕಂದಾಯ ಪತ್ರದ ಮೂಲ ದಾಖಲಾತಿಗಳು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9448118929

LOST
Arshida Khanam, No. 357, 3rd Cross, K.R. Hospital Road, Mandi Mohalla, Mysore-570 019, I have lost original property documents at Rajivnagar, Property No. 55, 30x40, Ramanagar Shidlakallu 7/7/55. Finders please contact:
Mob: 9880473517

ಬೇಕಾಗಿದ್ದಾರೆ
ಅನುಭವವುಳ್ಳ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ – 10 ಜನ ಪುರುಷರು. ಸ್ಟೀಲ್ ಮತ್ತು ಸಿಮೆಂಟ್ ಬಿಲ್ಡಿಂಗ್ ಮೆಟೀರಿಯಲ್ಸ್, ಮೈಸೂರು, ಇಲ್ಲಿಗೆ ವೇತನ: 15,000/– ರಿಂದ 20,000/–.
9686767064, 7026461668

ಕೆಲಸಕ್ಕೆ ಬೇಕಾಗಿದ್ದಾರೆ
ಮೇಟಗಳ್ಳಿ CIPET ಕಾಲೇಜು ಹತ್ತಿರದಲ್ಲಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 50 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 14,000/– ಕೂಡಲೇ ಸಂಪರ್ಕಿಸಿ. ಚಾಮುಂಡೇಶ್ವರಿ ಎಂಟರ್ ಪ್ರೈಸಸ್. ಲೋಕೇಶ್
8722844236

ವಧು ಬೇಕಾಗಿದೆ
ಆರ್ಯವೈಶ್ಯ ಜನಾಂಗದ 48 ವರ್ಷ ವಯಸ್ಸಿನ ವರನಿಗೆ 2ನೇ ಮದುವೆಗೆ ವಧು ಬೇಕಾಗಿದೆ. 1st Marriage or Widow ವರನಿಗೆ ಸ್ವಂತ 2 ಮನೆ, ಕಾರ್ ಮತ್ತು ಬಾಡಿಗೆ ಕೂಡಾ ಬರುತ್ತದೆ.
9844498365



SUNZONE SOLAR SYSTEM
Vishwamanava Double Road, Kuvempunagar, Mysuru
9845175443

HOUSE FOR RENT
Single King Size bedroom 2nd Floor with Balcony, Gokulam, Mysore. Contact:
Mob: 9900237315

ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನ ಹೊಂದಿರುವ ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ನೀಲಕುಂಜ ಇಂಡಸ್ಟ್ರೀಸ್, ಜಟ್ಟಿಹುಂಡಿ, ಮೈಸೂರು.
Mob: 9986768057

ಬೇಕಾಗಿದ್ದಾರೆ
ನಮ್ಮ SMJ ಗೋಲ್ಡ್ ಕಂಪನಿಗೆ ಕೆಲಸ ಮಾಡಲು **Tele Callers** ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 8000 – 12000 ಸಂಪರ್ಕಿಸಿ:
8792140484

House for Rent / Lease
3 BHK duplex house for lease in Srirampura.
* 3 BHK duplex independent house, Vijayanagar 4th Stage, lease or rent. * 2 BHK house for lease in Ramakrishnanagar.
* 30x50 2 BHK house for rent in Vijayanagar 1st Stage.
Mob: 79966 79933

TWO SHOPS FOR RENT
19x13 Double Door
10x13 Single Door
Vijayanagara Second Stage (near KD Circle West Facing) Contact:
8310895835

4 YEARS OLD BUILDING FOR SALE
for Sale at Alanahalli Layout with, 6 units of 2BHK Flats and cellar & mezzanine Commerical Only Serious Buyers call
6366596616

COMMERCIAL SPACE FOR RENT
Above Axis Bank No. 825, Vinaya Marga, Siddartha Nagar, Mysore.
* 1,800 sq.ft., * 10 KW Power
* 2nd Floor. Contact:
Mob: 9448739555

FOR SALE
A) 40x60 and 50x80 Commercial in Ring Road Facing. (B) 30x40 30x50 sites new RT NAGAR. (C) 40x45 house Ramakrishna Nagar. (D) 30x40 12 Lakhs 30x50 15 L sites available attch Brahmins E blk layout.
PRAKRUTHI PROPERTIES
90359 90359, 95386 90359

ತಕ್ಷಣ ಬೇಕಾಗಿದ್ದಾರೆ
FIELD EXECUTIVES
ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ
ಕೂಡಲೇ ಸಂಪರ್ಕಿಸಿ :–
8050518881

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ವಧು ಬೇಕಾಗಿದೆ
ಬ್ರಾಹ್ಮಣ ವರನಿಗೆ ಬ್ರಾಹ್ಮಣ ಅಥವಾ ಸಸ್ಯಹಾರಿ ವಧು ಬೇಕಾಗಿದೆ. ವಿಧವೆ ಅಥವಾ ಎರಡನೇ ಮದುವೆಯವರಿಗೂ ಅವಕಾಶವಿದೆ. ಮಕ್ಕಳಿದ್ದರೂ ಪರವಾಗಿಲ್ಲ. ನೇರವಾಗಿ ಸಂಪರ್ಕಿಸಿ:
9341208567

ಶ್ರೀ ರಾಮ್ ಟೂರ್
ನೇಪಾಳ, ಪಶುಪತಿನಾಥ, ಮುಕ್ತಿನಾಥ ಮತ್ತು ಕಾಶಿ ದಸರಾ ವಿಶೇಷ ವಿಮಾನದಲ್ಲಿ ಎಲ್ಲಾ ಸೇರಿ 41,500/– ಸಂಪರ್ಕಿಸಿ:
9108933383
9606600383

JOBNET
ಮನೆಯಲ್ಲೇ ಕುಳಿತು ಕೈ ಬರವಣಿಗೆಯ ಮೂಲಕ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ವಿವಾಹ ಯೋಗ
ಮೊಬೈಲ್ ಆಪ್ (APP) ಮೂಲಕ ನಿಮ್ಮ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಿ. ಎಲ್ಲಾ ಜಾತಿಯ ವಧು–ವರರು ಸಂಪರ್ಕಿಸಬಹುದು.
FREE REGISTRATION
77955 60970

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/ಎ, ಸರಸ್ವತಿಪುರಂ, ಮೈಸೂರು
11B, 9&11A ಖಾತಾಗಳಿಗೂ ಮುಡಾ & ಕಾರ್ಪೊರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟು ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ ಹಾಗೂ ಕೆಲಸಕ್ಕೆ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
8088647887

PART TIME WORK
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ
ಕೆಲಸ / JOB
ವಾರದ ಸಂಬಳ : 3000/– ರಿಂದ 5000/– ಮೇಲ್ಪಟ್ಟು (ಕೊರಿಯರ್ ಸೌಲಭ್ಯವಿದೆ.) ಸಂಪರ್ಕಿಸಿ:
9108418233
9743217566

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

SALE OF HOUSE
2 BHK in Ground Floor and 2 BHK in 1st Floor Built in 30x40 Site. West facing in J P Nagar, Mysuru. Please Contact:
9845066951

ಬೇಕಾಗಿದ್ದಾರೆ
ಟೈಲರಿಂಗ್ ಟೀಚರ್ಸ್ (F) (ಫ್ಯಾಶನ್ ಡಿಸೈನರ್)
ಕಂಪ್ಯೂಟರ್ ಟೀಚರ್ಸ್ (M or F) (ಬೇಸಿಕ್)
ಮೈಸೂರು
ಸಂಬಳ: 10,000 + Incentives
9008604416 / 9880604416

ಬಾಡಿಗೆಗೆ / ಭೋಗ್ಯಕ್ಕೆ ಇದೆ
ಶ್ರೀ ಸಾಯಿಬಾಬ ಮತ್ತು ಇನ್ನಿತರ ದೇವಸ್ಥಾನ / ಆಶ್ರಮ – ಫಾರಂ ಹೌಸ್, ವಿಶ್ರಾಂತಿಗೃಹ, ಆಯುರ್‌ವೇದಿಕ್ ಕೇಂದ್ರ, ಸಣ್ಣ ಕೈಗಾರಿಕೆ – ಇತ್ಯಾದಿಗಳಿಗೆ ಸುವ್ಯವಸ್ಥಿತ / ಸುಸಜ್ಜಿತ ಆಧುನಿಕ ಶೈಲಿ 25 ಚದುರದ ಕಟ್ಟಡ ಸುಂದರ ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿದೆ. ಮೈಸೂರಿನಿಂದ 50 ಕಿ.ಮೀ ನುಗು ಡ್ಯಾಂ ಸಮೀಪ
9449886322

ಮನೆ ಮಾರಾಟಕ್ಕಿದೆ
30x40, 11 ಚದುರ
#1811, 3ನೇ ಕ್ರಾಸ್, ಮಹದೇವಪುರ, 11ಬಿ ರಿಜಿಸ್ಟ್ರೇಷನ್, ಜೆ.ಪಿ.ನಗರ ಪಕ್ಕ, ಮೈಸೂರು. ಬೆಲೆ 48 ಲಕ್ಷ, ಎಂ.ಎಸ್.ಕಿರಣ್
9731517698
7892966821
ಜಮೀನು ಬಾಡಿಗೆಗೆ ದೊರೆಯುತ್ತದೆ. 14 ಗುಂಟೆ

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಹೋಟೆಲ್ ಒಂದಕ್ಕೆ ಅಡುಗೆ ಸಹಾಯಕರು ದೋಸೆ ಮಾಸ್ಟರ್, ಪಾರ್ಸೆಲ್ ಕಟ್ಟುವ ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುತ್ತದೆ. ಸಂಪರ್ಕಿಸಿ:
7975973014

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ. ಸಂಪರ್ಕಿಸಿ
9449380528
7026498386

ಮೈಸೂರು ಮ್ಯಾರೇಜ್ ಬ್ಯೂರೋ
ಲಿಂಗಾಯತ, ಬ್ರಾಹ್ಮಣ, ಒಕ್ಕಲಿಗ, ಕುರುಬ, ಆದಿಕರ್ನಾಟಕ, ನಾಯಕ, ಮರಾಠ, ಅಂತರ್ಜಾತಿ ಮತ್ತು ಇನ್ನೂ ಎಲ್ಲಾ ಜಾತಿಯ ವಧು ವರರಿಗೆ ನೇರ ಸಂಪರ್ಕಿಸಿ:
ಡಾ.ಗುರೂಜಿ, ಮೈಸೂರು
6361740552
Lady Receptionist ಬೇಕಾಗಿದ್ದಾರೆ

ಜೀವನ ಸಂಗಾತಿ ಬೇಕಾಗಿದ್ದಾರೆ
74 ವರ್ಷದ ಸರ್ಕಾರ ವಿಶ್ರಾಂತಿ ವೇತನ ಪಡೆಯುತ್ತಿರುವ ಆರೋಗ್ಯವಂತ ಬ್ರಾಹ್ಮಣ ಮಹಿಳೆಗೆ ಯಾವುದೇ ಬ್ರಾಹ್ಮಣ ಪಂಗಡದ ಆರೋಗ್ಯವಂತರಾಗಿರುವ 65 ವರ್ಷ ಮೇಲ್ಪಟ್ಟವರು ಬಾಳ ಸಂಗಾತಿಯಾಗಿರಲು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
9880420525

ಬೇಕಾಗಿದ್ದಾರೆ
ಪಿ.ಜಿ ಯಲ್ಲಿ ಉಳಿದು ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
9845367333

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಬೇಕಾಗಿದ್ದಾರೆ
ಮಹಿಳೆಯರು, ಪುರುಷರು ಹಾಗೂ ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ವಸತಿ ಉಚಿತ ದೊಂದಿಗೆ ಆಕರ್ಷಕ ಸಂಬಳ ನೀಡಲಾಗುತ್ತದೆ. (ಮೊದಲು ಬಂದವರಿಗೆ ಆದ್ಯತೆ). ಕುವೆಂಪುನಗರ. ಸಂಪರ್ಕಿಸಿ:
Mob: 9035324777, 9035081222, 7259306665

Vasantha Builders
Alteration work / Water-proof & A to Z Service for your home solution. New construction started 1899 / Sft.
8151035074, 9035012579

ಬೇಕಾಗಿದ್ದಾರೆ
ಕುಶಾಲನಗರದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಸ್ಯಹಾರಿ ಹೋಟೆಲ್‌ಗೆ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ. ಸೌತ್ ಇಂಡಿಯನ್ ಭಟ್ಟರು –2, ಮ್ಯಾನೇಜರ್ –2, ಅಡುಗೆ ಸಹಾಯಕರು –2, ದೋಸೆ ಭಟ್ಟರು–2, ಕಾಫಿ ಟೀ ಮೇಕರ್ಸ್–4 ಕೂಡಲೇ ಸಂಪರ್ಕಿಸಿ:
9986039421

ಸೈಟ್ಸ್ ಫಾರ್ ಸೇಲ್
30x40
ಮೈಸೂರು, ಜೆ.ಪಿನಗರದ ರಿಂಗ್ ರೋಡ್‌ನಿಂದ ಕೇವಲ 5 ಕಿ.ಮೀ ದೂರದ ಜ್ಞಾನಭಾರತಿ ಲೇಔಟ್, ದಡದಹಳ್ಳಿ, 2ನೇ ಸ್ಟೇಜ್, MUDA ಖಾತೆ ಆಗಿದೆ. ಈಸ್ಟ್ ಫೇಸಿಂಗ್ ಮತ್ತು ಸೌತ್ ಈಸ್ಟ್ ಕಾರ್ನರ್.
9342123373

RCC ಮನೆ ಬಾಡಿಗೆಗೆ ಇದೆ
(South Face) ದಕ್ಷಿಣ ದಿಕ್ಕು #547, ದಿವಾನ್ಸ್ ರಸ್ತೆ, ಚಾಮರಾಜ ಮೊಹಲ್ಲಾ ಹಿಂಭಾಗದ ಗಲ್ಲಿ ಮೈಸೂರು – 04. ಜೈನ್ ಭವನ ಛತ್ರದ ಹತ್ತಿರ, (ಗಂಡ ಹೆಂಡತಿ ಹಾಗೂ ಎರಡು ಮಕ್ಕಳು) ಇರಬಹುದು.
9845393364

HE & SHE ಕ್ರೈಸ್ತರ ವಧು ವರರ ವೇದಿಕೆ
One Day Get to gether ಊಟದ ವ್ಯವಸ್ಥೆಯೊಂದಿಗೆ ಒಂದೇ ವೇದಿಕೆಯಲ್ಲಿ ವಧು ವರರ ಮುಖಾಮುಖಿ ಪರಿಚಯ ಮಾಡಲಾಗುತ್ತದೆ. for Registration Book today at Mysore Nelson.
9880099929
9844446469

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯಭಾಗದಲ್ಲಿರುವ ಲಾಡ್ಜ್‌ಗೆ ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸಿನ ವಯೋಮಿತಿ 18 ರಿಂದ 30ರ ಒಳಗೆ
9663991888
9663427888

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 9 ರಲ್ಲಿ

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ಸೆ.17, ಜಿಲ್ಲೆಯಲ್ಲಿ ಯೋಗಾಥಾನ್: ಎಡಿಸಿ



ಮಂಡ್ಯ, ಸೆ.7– ನಗರದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಸೆ.17ರಂದು ಬೆಳಗ್ಗೆ 7ರಿಂದ 7:45 ರ ವರೆಗೆ ಯೋಗಾಥಾನ್ ಕಾರ್ಯಕ್ರಮ ನಡೆಯಲಿದ್ದು, ಉತ್ತಮ ರೀತಿ ನಡೆಯಲು ಸಹಕರಿಸಿ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಯೋಗಥಾನ್ ಕಾರ್ಯಕ್ರಮ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯೋಗದ ಬಗ್ಗೆ ಅರಿವು ಮೂಡಿಸಲು ಯೋಗಥಾನ್ ಆಯೋಜಿಸಲಾಗಿದ್ದು, ಉತ್ತಮವಾಗಿ ನಡೆಸಲು ಇಲಾಖಾಧಿಕಾರಿಗಳಿಗೆ ಜವಾಬ್ದಾರಿ ವಹಿಸಬೇಕು. ಸ್ವಚ್ಛತೆ, ಶೌಚಾಲಯ, ಕುಡಿಯುವ ನೀರು ಮತ್ತು ಆರೋಗ್ಯ ಸೇರಿದಂತೆ ಇನ್ನಿತರ ಮೂಲ ಸೌಕರ್ಯಗಳಿಗೆ ಯಾವುದೇ ಕೊರತೆಯಾಗದ ರೀತಿ ಅಗತ್ಯ ವ್ಯವಸ್ಥೆ ಕೈಗೊಳ್ಳಬೇಕು ಎಂದರು.

ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಓಂ ಪ್ರಕಾಶ್ ಮಾತನಾಡಿ, ಯೋಗಥಾನ್ ಕಾರ್ಯಕ್ರಮದಲ್ಲಿ 15 ಸಾವಿರ ಜನರು ಭಾಗವಹಿಸಬೇಕೆಂದು ಸರ್ಕಾರದಿಂದ ನಿರ್ದೇಶನ ನೀಡಿದೆ. ಈಗಾಗಲೇ ಯೋಗಥಾನ್ 2022 ಆ್ಯಪ್ ಮೂಲಕ ನೋಂದಾಯಿಸಿಕೊಳ್ಳಲು ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಸಂಘ ಸಂಸ್ಥೆಗಳು ಹಾಗೂ ಸ್ವ ಇಚ್ಛೆಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಸೇರಿದಂತೆ ಪ್ರಸ್ತುತದಲ್ಲಿ 17,450 ಜನರು ನೋಂದಾಯಿಸಿಕೊಂಡಿದ್ದಾರೆ ಎಂದು ಹೇಳಿದರು. ಸೆ. 17ರಂದು ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆ ಆಗುತ್ತದೆ. ಕಾರ್ಯಕ್ರಮಕ್ಕೆ ನೋಂದಣಿಯಾದ ನಂತರ ಕ್ಯೂ ಆರ್ ಕೋಡ್ ನೀಡಲಾಗಿರುತ್ತದೆ. ಯೋಗಥಾನ್ ದಿನದಂದು ಸರ್ ಎಂ.ವಿ. ಕ್ರೀಡಾಂಗಣದ 3 ಕಡೆ ಪ್ರವೇಶ ದ್ವಾರದಲ್ಲಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿದ ನಂತರ ಪ್ರವೇಶ ನೀಡಲಾಗುವುದು ಎಂದರು.

ಅಂತರ ರಾಷ್ಟ್ರೀಯ ಯೋಗ ದಿನದಂದು ಮಾಡುವಂತ ಯೋಗಾಸನಗಳ ಅಭ್ಯಾಸ ಯೋಗಥಾನ್‌ನಲ್ಲಿಯೂ ನಡೆಯುತ್ತದೆ. ಯೋಗಥಾನ್‌ನಲ್ಲಿ ಭಾಗವಹಿಸಿದ ನಂತರ ಯೋಗಥಾನ್ 2022 ಆ್ಯಪ್‌ನಲ್ಲಿ ಪ್ರಮಾಣ ಪತ್ರ ಸಹ ಲಭ್ಯವಿದೆ ಎಂದು ಹೇಳಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಆರ್.ಐಶ್ವರ್ಯ, ಜಿಪಂ ಉಪ ಕಾರ್ಯದರ್ಶಿ ಸರಸ್ವತಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಟಿ.ಎನ್.ಧನಂಜಯ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಿ.ರಂಗೇಗೌಡ ಇತರರಿದ್ದರು.

ಜೀವ ವಿಮಾ ಪ್ರತಿನಿಧಿಗಳ ಮುಷ್ಕರ ಅಂತ್ಯ



ಶ್ರೀರಂಗಪಟ್ಟಣ, ಸೆ.7– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪಟ್ಟಣದ ಜೀವವಿಮಾ ನಿಗಮ ಕಚೇರಿ ಮುಂಭಾಗ ಕಳೆದ 6 ದಿನಗಳಿಂದ ಅಖಿಲ ಭಾರತೀಯ ಜೀವ ವಿಮಾ ನಿಗಮ ಒಕ್ಕೂಟದಿಂದ ನಡೆಸುತ್ತಿದ್ದ ಅನಿರ್ದಿಷ್ಟಾವಧಿಯ ಮುಷ್ಕರ ಬುಧವಾರ ಅಂತ್ಯಗೊಂಡಿತು.

ಭಾರತೀಯ ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟದ ಗೌರವಾಧ್ಯಕ್ಷ ಸಿ.ಸ್ವಾಮಿಗೌಡ ಮಾತನಾಡಿ, ಜೀವ ವಿಮಾ ಕಂಪನಿಯನ್ನು ಖಾಸಗೀಕರಣ ಮಾಡುತ್ತಿರುವ ಕೇಂದ್ರ ಸರ್ಕಾರದ ಧೋರಣೆ ಸರಿಯಲ್ಲ ಎಂದು ದೂರಿದರು.

ಪಾಲಿಸಿ ಮೇಲಿನ ಲಾಭಾಂಶ ಹೆಚ್ಚಿಸಿ ಸಾಲದ ಬಡ್ಡಿಯನ್ನು ಕಡಿತಗೊಳಿಸುವುದು, 5ವರ್ಷ ಮೇಲ್ಪಟ್ಟ ರದ್ದಾದ ಪಾಲಿಸಿಗಳ ಪುನಶ್ಚೇತನಗೊಳಿಸುವುದು, ವಿಮಾ ಪ್ರತಿನಿಧಿಗಳಿಗೆ ನೀಡುವ ಗೃಹ ಸಾಲ ಹೆಚ್ಚಿಸುವುದು, ಗುಂಪು ವೈದ್ಯಕೀಯ ಮೊತ್ತ ಹೆಚ್ಚಿಸುವ ಜೊತೆಗೆ ಪ್ರತಿನಿಧಿಗಳ ಕಲ್ಯಾಣ ನಿಧಿ ಸ್ಥಾಪನೆ ಸೇರಿ 26 ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಮುಷ್ಕರ ಅಂತ್ಯ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಒಕ್ಕೂಟದ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದು, ಈ ನಿಟ್ಟಿನಲ್ಲಿ ಮಾತುಕತೆಗೆ ಕರೆದಿರುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಮುಷ್ಕರವನ್ನು ಕೈ ಬಿಡಲಾಗಿದೆ. ಒಂದು ವೇಳೆ ಬೇಡಿಕೆ ಈಡೇರದಿದ್ದರೆ ಮುಂದಿನ ದಿನಗಳಲ್ಲಿ ಮುಷ್ಕರವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಮುಷ್ಕರದಲ್ಲಿ ಅಧ್ಯಕ್ಷ ಬಳ್ಳಾರಿಗೌಡ, ಪ್ರಧಾನ ಕಾರ್ಯದರ್ಶಿ ಎಂ.ಪ್ರಭುಸ್ವಾಮಿ, ಖಜಾಂಚಿ ನಂದೀಶ್, ಮಂಜುಳಾ ಸೇರಿದಂತೆ ಇತರರಿದ್ದರು.

ನಿರಂತರ ಮಳೆ: ಶ್ರೀರಂಗಪಟ್ಟಣ ಕೋಟೆ ಗೋಡೆ ಕುಸಿತ

ಶ್ರೀರಂಗಪಟ್ಟಣ, ಸೆ.7– ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಪಟ್ಟಣದ ಮೂರು ಸುತ್ತಿನ ಕೋಟೆ ಗೋಡೆಗಳು ಕುಸಿತಕ್ಕೊಳಗಾಗುತ್ತಿದ್ದು, ಕೋಟೆ ಕಾಮಗಾರಿಗಳ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



400 ವರ್ಷಗಳ ಇತಿಹಾಸವಿರುವ ಶ್ರೀರಂಗಪಟ್ಟಣದ ಮೂರು ಸುತ್ತಿನ ಕೋಟೆಯ ಗೋಡೆಗಳ ದುರಸ್ತಿ ಕಾಮಗಾರಿ ಕಳೆದ 2ವರ್ಷಗಳ ಹಿಂದೆ ನಡೆದಿದೆ. ಭಾರತೀಯ ಸರ್ವೇಕ್ಷಣ ಮತ್ತು ಪುರಾತತ್ವ ಇಲಾಖೆ ಮುಂದಿನ ಪೀಳಿಗೆವರೆಗೂ ಇತಿಹಾಸಗಳು ಅಳಿಸದಂತೆ ನೋಡಿಕೊಳ್ಳಲು ಸ್ಮಾರಕ ಹಾಗೂ ಕೋಟೆ ಗೋಡೆಗಳ ಸಂರಕ್ಷಣೆಗಾಗಿ ನಡೆಸುತ್ತಿರುವ ಕಾಮಗಾರಿ ಕಳಪೆಯಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಪಟ್ಟಣ ಉತ್ತರ ಭಾಗದ ಕೋಟೆ ಗೋಡೆ ಮಂಗಳವಾರ ರಾತ್ರಿ ಸುರಿದ ಮಳೆಗೆ ಕುಸಿದು ಬಿದ್ದಿದೆ. ಇದೇ ರೀತಿ ಹಲವಾರು ಕಡೆಗಳಲ್ಲಿ ಕುಸಿಯಲಾರಂಭಿಸಿದ್ದು, ಇದೇ ರೀತಿಯಾಗಿ ಮುಂದುವರೆದರೆ ಕೋಟೆ ಸಂಪೂರ್ಣವಾಗಿ ನಾಶವಾಗುತ್ತದೆಯೋ ಎಂಬ ಆತಂಕ ಶುರುವಾಗಿದೆ. ಕೂಡಲೇ ಗುಣಮಟ್ಟದ ಕಾಮಗಾರಿ ನಡೆಸಿ ಶ್ರೀರಂಗಪಟ್ಟಣ ಇತಿಹಾಸ ತಿಳಿಸುವ ಸ್ಮಾರಕಗಳ ರಕ್ಷಣೆಗೆ ಭಾರತೀಯ ಪುರಾತತ್ವ ಇಲಾಖೆ ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

ಶಿಕ್ಷಕರಿಂದ ಉತ್ತಮ ಪ್ರಜೆಗಳ ನಿರ್ಮಾಣ: ಸಿಎಸ್‌ಪಿ



ಪಾಂಡವಪುರ, ಸೆ.7– ಶಿಕ್ಷಕರ ದಿನವನ್ನು ಹಬ್ಬದಂತೆ ಆಚರಿಸಿ ಶಿಕ್ಷಕರನ್ನು ಗೌರವಿಸುವ ಕೆಲಸವನ್ನು ಕನ್ನಡ ಸಾಹಿತ್ಯ ಪರಿಷತ್ ಬಳಗದ ಮಾಡುತ್ತಿದೆ ಎಂದು ಶಾಸಕ ಸಿ.ಎಸ್. ಪುಟ್ಟರಾಜು ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಕಸಾಪ ಭವನದಲ್ಲಿ ಬುಧವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ನಡೆದ ಶಿಕ್ಷಕರ ದಿನಾಚರಣೆ ಹಾಗೂ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಭವ್ಯ ಭಾರತದ ಉತ್ತಮ ಪ್ರಜೆಗಳನ್ನಾಗಿ ನಮ್ಮ ಮಕ್ಕಳನ್ನು ರೂಪಿಸುವ ಕೆಲಸವನ್ನು ಶಿಕ್ಷಕ ವೃಂದ ಮಾಡುತ್ತಿದ್ದು, ಎಲ್ಲಾ ಶಿಕ್ಷಕರನ್ನು ಪ್ರತಿಯೊಬ್ಬರು ಪೂಜ್ಯನೀಯ ಸ್ಥಾನದಲ್ಲಿ ಗೌರವಿಸಬೇಕು ಎಂದು ತಿಳಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಸಿ.ಕೆ.ರವಿಕುಮಾರ್ ಚಾಮಲಾಪುರ ಮಾತನಾಡಿ, ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತಿದ್ದು, ರಾಧಾಕೃಷ್ಣನ್ ಅವರು ಶ್ರೇಷ್ಠ ಶಿಕ್ಷಕರು. ಪ್ರತಿಯೊಬ್ಬ ಶಿಕ್ಷಕರು ರಾಧಾಕೃಷ್ಣನ್ ಅವರ ತತ್ವ ಆದರ್ಶಗಳನ್ನು ಪಾಲನೆ ಮಾಡಬೇಕಾಗಿದೆ ಎಂದು ಸಲಹೆ ನೀಡಿದರು.

ಇದೇ ವೇಳೆ ಪ್ರಾಂಶುಪಾಲ ಕೃಷ್ಣಮೂರ್ತಿ, ಉಪನ್ಯಾಸಕ ಸಿ.ಕೃಷ್ಣೇಗೌಡ, ಮುಖ್ಯಶಿಕ್ಷಕ ಸಿ.ಶಿವಯ್ಯ, ಪಾರ್ಥೇಗೌಡ, ಸಹಶಿಕ್ಷಕರಾದ ಬಿ.ಚಂಪ, ಆರ್. ನಾಗೇಶ್ ಕುಮಾರ್, ಎಲ್.ಸಿ.ಮಧುಸೂದನ್, ಬಿ.ಪಿ.ರೇಣುಕಾ, ಕೆ.ಸಿ.ಆರತಿ, ರತ್ನಾವಳಿ, ಸಿ.ಎಸ್.ಯುವರಾಜು, ಕೆ.ಬಿ.ಕುಮಾರ್, ಕೆ.ಎಂ.ಬಸವಲಿಂಗಪ್ಪ, ಎ.ಸಿ.ಉಷಾ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎ.ಲೋಕೇಶ್, ಬಿಆರ್‌ಸಿ ಕೆ.ಎನ್. ಪ್ರಕಾಶ್, ಯೋಜನಾಧಿಕಾರಿ ಸಿ.ಎನ್. ಗೋಪಾಲೇಗೌಡ, ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್, ಕಾರ್ಯದರ್ಶಿ ನಂಜುಂಡಸ್ವಾಮಿ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಲ್.ಎಸ್. ಕೇಶವ ಮೂರ್ತಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪಿ.ಮಂಜುನಾಥ್, ಉಪನ್ಯಾಸಕರ ಸಂಘದ ಅಧ್ಯಕ್ಷ ಹೆಚ್.ಎನ್. ರಾಮಕೃಷ್ಣ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಎ.ಮಂಜುನಾಥ್ ಹಾಜರಿದ್ದರು.

ಜೆಡಿಎಸ್‌ನ ರಾಷ್ಟ್ರೀಯ ಚುನಾವಣಾಧಿಕಾರಿಯಾಗಿ ಕೆಟಿಎಸ್ ನೇಮಕ

ಮಂಡ್ಯ, ಸೆ.7– ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅವರನ್ನು ಜೆಡಿಎಸ್‌ನ ರಾಷ್ಟ್ರೀಯ ಘಟಕದ ಚುನಾವಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಈ ಸಂಬಂಧ ಆದೇಶ ಹೊರಡಿಸಿರುವ ಜೆಡಿಎಸ್‌ನ ರಾಷ್ಟ್ರೀಯ ಘಟಕದ ಅಧ್ಯಕ್ಷ ಹೆಚ್.ಡಿ. ದೇವೇಗೌಡ, ತಕ್ಷಣದಿಂದ ಜಾರಿಗೆ ಬರುವಂತೆ ಶ್ರೀಕಂಠೇಗೌಡರನ್ನು ಜೆಡಿಎಸ್‌ನ ರಾಷ್ಟ್ರೀಯ ಘಟಕದ ಚುನಾವಣಾಧಿಕಾರಿಯನ್ನಾಗಿ ನೇಮಿಸಿದ್ದು, ಪಕ್ಷದ ಟಿಕೆಟ್ ಹಂಚಿಕೆ ಹಾಗೂ ಚುನಾವಣೆ ರೂಪು-ರೇಷೆ ಬಗ್ಗೆ ನಿರ್ಧಾರ ಕೈಗೊಳ್ಳುವ ಸಮಿತಿಯಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಲಿದ್ದಾರೆ.



ಶ್ರೀಕಾಳಮ್ಮ, ಮಂಚಮ್ಮ ದೇವಸ್ಥಾನದ ಕಾಮಗಾರಿ ಪರಿಶೀಲನೆ



ಭಾರತೀನಗರ, ಸೆ.7– ಸಮೀಪದ ಅಣ್ಣೂರು ಗ್ರಾಮದ ಶ್ರೀಕಾಳಮ್ಮ ಮತ್ತು ಮಂಚಮ್ಮ ದೇವಸ್ಥಾನದಲ್ಲಿ ನಡೆಯುತ್ತಿರುವ ಕಾಮಗಾರಿ ಸ್ಥಳಕ್ಕೆ ಶಾಸಕ ಡಿ.ಸಿ.ತಮ್ಮಣ್ಣ ಭೇಟಿ ನೀಡಿ ಪರಿಶೀಲಿಸಿದರು.

ಬಳಿಕ ಮಾತನಾಡಿದ ಅವರು, ದೇವಸ್ಥಾನಗಳ ಅಭಿವೃದ್ಧಿಗೆ ಶಾಸಕರ ಅನುದಾನದಿಂದ ಹಣ ಬಿಡುಗಡೆ ಮಾಡಲಾಗಿದ್ದು, ಶೀಘ್ರವೇ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ತಿಳಿಸಿದರು. ನಂತರ ಗ್ರಾಮದಲ್ಲಿ ಯುವಕರು ಗಣೇಶ ಪ್ರತಿಷ್ಠಾಪಿಸಿರುವ ಸ್ಥಳಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಇದೇ ವೇಳೆ ಹುಟ್ಟು ಅಂಗವಿಕಲನಾಗಿದ್ದ ಸಿದ್ದರಾಮು ಅವರ ಮನೆಗೆ ಭೇಟಿ ನೀಡಿ ಮಗನಿಗೆ ಧೈರ್ಯ ತುಂಬಿ ಧನಸಹಾಯ ಮಾಡಿದರು.

ಇದಕ್ಕೂ ಮೊದಲು ಗ್ರಾಮದಲ್ಲಿ ಇತ್ತೀಚೆಗೆ ಮೃತಪಟ್ಟಿದ್ದ ಗ್ರಾಪಂ ಮಾಜಿ ಅಧ್ಯಕ್ಷೆ ಸುನಂದಮ್ಮ ರಾಮಣ್ಣ ಹಾಗೂ ಮೊಜ್ಜೆಸಿದ್ದೇಗೌಡರ ಅವರ ಮನೆಗೆ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವಾನ ಹೇಳಿದರು.

ಈ ಸಂದರ್ಭದಲ್ಲಿ ಹರ್ಷ, ಮಮತಾ, ಸಹನಾ ಹಾಗೂ ಕುಟುಂಬದ ಸದಸ್ಯರು ಸೇರಿದಂತೆ ಮುಖಂಡರಾದ ಕೆ.ಟಿ.ಸುರೇಶ್, ಹೊಂಡಾ ಸಿದ್ದೇಗೌಡ, ಯೋಗೇಂದ್ರ, ವಿನುಕುಮಾರ್, ಶಿವರಾಮು, ಚನ್ನಶೆಟ್ಟಿ, ಚಿಕ್ಕಸಿದ್ದಯ್ಯ, ಅಭಿ ಇದ್ದರು.

ಅ.13, ತ್ರಿವೇಣಿ ಸಂಗಮದಲ್ಲಿ ಕುಂಭಮೇಳ; ಸಕಲ ಸಿದ್ಧತೆಗೆ ಜಿಲ್ಲಾಧಿಕಾರಿ ಸೂಚನೆ

ಮಂಡ್ಯ, ಸೆ.7– ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಅಂಬಿಗರಹಳ್ಳಿ ಹತ್ತಿರ ತ್ರಿವೇಣಿ ಸಂಗಮದಲ್ಲಿ ಅ. 13ರಿಂದ 16ರವರೆಗೆ ಕುಂಭಮೇಳ ನಡೆಯಲಿದ್ದು, ಅಧಿಕಾರಿಗಳು ಸಕಲ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದರು.




ನಗರದ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೂರು ನದಿಗಳ ತ್ರಿವೇಣಿ ಸಂಗಮದಲ್ಲಿ ಕಾವೇರಿ ನದಿ ಪೂಜೆ ಹಾಗೂ ಬಾಗಿನ ಸಮರ್ಪಣೆ ಮಾಡಲಾಗುತ್ತದೆ. ಸಾಧು-ಸಂತರು ಹಾಗೂ ಗಣ್ಯರು ಕಾರ್ಯಕ್ರಮದ ಉದ್ಘಾಟಿಸಲಿದ್ದಾರೆ ಎಂದರು.

ಮೂಲ ಸೌಕರ್ಯಗಳಾದ ರಸ್ತೆ, ಶೌಚಾಲಯ, ವಾಹನ ನಿಲ್ದಾಣ, ಕುಡಿಯುವ ನೀರು, ಉಪಹಾರ, ನೈರ್ಮಲ್ಯ, ತಂಗುದಾಣಗಳು, ವೈದ್ಯಕೀಯ ಸೇವೆಗಳು ಮತ್ತು ತುರ್ತು ಚಿಕಿತ್ಸೆ, ಅಗ್ನಿ ಶಾಮಕದಳ, ರಕ್ಷಣಾ ಕಾರ್ಯ, ವಿದ್ಯುತ್ ದೀಪಾಲಂಕಾರ, ಮಾಹಿತಿ ಕೇಂದ್ರಗಳ ವ್ಯವಸ್ಥೆ ಕಲ್ಪಿಸಲು ಸಿದ್ಧತೆ ಕೈಗೊಳ್ಳಬೇಕು ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಮಾತನಾಡಿ, ಅ.6ರಂದು ಶ್ರೀಮಲೆ ಮಹದೇಶ್ವರ ಬೆಟ್ಟದಲ್ಲಿ ವಿಶೇಷವಾಗಿ ಜ್ಯೋತಿ ರಥಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಲಾಗುತ್ತದೆ. ಮಹದೇಶ್ವರ ಜ್ಯೋತಿ ಯಾತ್ರೆ ಮೈಸೂರು, ಚಾಮರಾಜನಗರ ಮಂಡ್ಯ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಂಚರಿಸಿ ಕೆ.ಆರ್. ಪೇಟೆಯ ತ್ರಿವೇಣಿ ಸಂಗಮಕ್ಕೆ ಬರಲಿದೆ ಎಂದರು.

ಜ್ಯೋತಿ ಯಾತ್ರೆ ಸಂಚರಿಸುವ ಮೂರು ಮಾರ್ಗಗಳಿಗೆ ಸಂಬಂಧಿಸಿದಂತೆ ಮಾರ್ಗ ಅಧಿಕಾರಿಗಳನ್ನು ನೇಮಿಸಲಾಗಿದೆ. ರಥ ಸಂಚರಿಸುವ ಮಾರ್ಗದಲ್ಲಿ ಭಕ್ತರು ನೀಡುವ ದವಸ ಧಾನ್ಯಗಳನ್ನು ಸ್ವೀಕರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಸ್ಥಳೀಯ ಹಾಗೂ ರಾಜ್ಯಮಟ್ಟದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ, ವಿಶೇಷ ಗಂಗಾರತಿ, ಸಾಧು-ಸಂತರ ಧಾರ್ಮಿಕ ಸಭೆ ಮಾಡಲಾಗುವುದು ಎಂದರು. ಸಭೆಯಲ್ಲಿ ಎಸ್‌ಪಿ ಎನ್.ಯತೀಶ್, ಉಪವಿಭಾಗಾಧಿಕಾರಿಗಳಾದ ಶಿವಾನಂದಮೂರ್ತಿ, ಆರ್.ಐಶ್ವರ್ಯ, ಜಿಪಂ ಉಪಕಾರ್ಯದರ್ಶಿ ಸರಸ್ವತಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.



ನಾಗಮಂಗಲ ಪಟ್ಟಣದ ಶ್ರೀರಾಮಸೇನೆ ಮತ್ತು ಇತರೆ ಜನಾಂಗದಿಂದ ಗಣೇಶ ಚೌತಿಯಂದು ಪ್ರತಿಷ್ಠಾಪಿಸಿದ್ದ ಬಿಲ್ಲು ಬಾಣ ಹಿಡಿದ ಶ್ರೀರಾಮ ಗಣಪತಿಯನ್ನು ಬುಧವಾರ ರಾತ್ರಿ ಇತಿಹಾಸ ಪ್ರಸಿದ್ಧ ಹಂಪೆ ಅರಸನ ಕೊಳದಲ್ಲಿ ವಿಸರ್ಜಿಸಲಾಯಿತು.

ಸಚಿವ ಉಮೇಶ್ ಕತ್ತಿಗೆ ಜಿಲ್ಲಾ ಬಿಜೆಪಿಯಿಂದ ಶ್ರದ್ಧಾಂಜಲಿ



ಮಂಡ್ಯ, ಸೆ.7– ಆಹಾರ ಹಾಗೂ ಅರಣ್ಯ ಇಲಾಖೆ ಸಚಿವ ಉಮೇಶ್ ಕತ್ತಿ ಅವರ ನಿಧನಕ್ಕೆ ಜಿಲ್ಲಾ ಬಿಜೆಪಿ ಶ್ರದ್ಧಾಂಜಲಿ ಸಲ್ಲಿಸಿದೆ.

ನಗರದ ವಿಕಾಸ ಭವನದಲ್ಲಿ ಬುಧವಾರ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್ ಮಾತನಾಡಿ, ಉಮೇಶ್ ಕತ್ತಿ ಅವರ ಅಕಾಲಿಕ ಮರಣಕ್ಕೆ ಇಡೀ ರಾಜಕೀಯ ವಲಯವೇ ಶೋಕ ಸಾಗರದಲ್ಲಿ ಮುಳುಗಿದೆ. ಉತ್ತರ ಕರ್ನಾಟಕ ಭಾಗದ ಅತ್ಯಂತ ಪ್ರಭಾವಿ ರಾಜಕಾರಣದಲ್ಲಿ ಕತ್ತಿ ಅವರು ಒಬ್ಬರಾಗಿದ್ದಾರೆ ಎಂದು ತಿಳಿಸಿದರು.

ಉಮೇಶ್ ಕತ್ತಿ ಅವರ ತಂದೆ ವಿಶ್ವನಾಥ್ ಕತ್ತಿ ಅವರು ವಿಧಾನಸಭಾ ಅಧಿವೇಶನದಲ್ಲೇ ಹೃದಯಾಘಾತದಿಂದ ಮೃತಪಟ್ಟಿದ್ದರು. ಅವರ ನಂತರದ ಸ್ಥಾನವನ್ನು ಅಲಂಕರಿಸಿದ್ದ ಉಮೇಶ್ ಕತ್ತಿ ಅವರು ಉಪ ಚುನಾವಣೆಯಲ್ಲಿ ಅತಿ ಹೆಚ್ಚಿನ ಮತಗಳಿಂದ ಆಯ್ಕೆಯಾಗುವ ಮೂಲಕ ರಾಜಕೀಯ ಪ್ರವೇಶ ಮಾಡಿದರು ಎಂದು ಹೇಳಿದರು.

ಬೆಳಗಾವಿಯ ಹುಕ್ಕೇರಿ ಕ್ಷೇತ್ರದಿಂದ ಸತತ 9 ಬಾರಿ ವಿವಿಧ ಪಕ್ಷಗಳಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕತ್ತಿ ಅವರು ಯಾವುದೇ ಪಕ್ಷದಲ್ಲಿದ್ದರೂ ಜನ ಅವರನ್ನು ಆಯ್ಕೆ ಮಾಡುತ್ತಿದ್ದರು ಎಂದರೆ ಅಲ್ಲಿನ ಜನರ ಮನವನ್ನು ಹೇಗೆ ಗೆದ್ದಿರಬಹುದು ಎಂಬುದು ತಿಳಿಯುತ್ತದೆ ಎಂದು ಉದಾಹರಣೆ ಸಮೇತ ವಿವರಿಸಿದರು.

ಇಂತಹ ಜನಾನುರಾಗಿ ಉಮೇಶ್‌ಕತ್ತಿ ಅವರ ನಿಧನದಿಂದಾಗಿ ರಾಜ್ಯ ಅನಾಥವಾದಂತಾಗಿದೆ. ಪಕ್ಷಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಕಂಬನಿ ಮಿಡಿದಿದ್ದಾರೆ.

ಬಿಜೆಪಿ ಮುಖಂಡ ಹೆಚ್.ಆರ್.ಅರವಿಂದ್ ಮಾತನಾಡಿ, ಬೆಲ್ಲದ ಬಾಗೇವಾಡಿಯಂತಹ ಕುಗ್ರಾಮದಲ್ಲಿ ಅತ್ಯಂತ ಶ್ರೀಮಂತ ಮನೆತನದ ಉಮೇಶ್ ಕತ್ತಿ ಅವರು ಸಾಮಾಜಿಕ ಕಳಕಳಿ ಹೊಂದಿದ್ದರು. ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಅಭಿವೃದ್ಧಿ ಮಾಡಬೇಕು ಎಂಬ ತವಕ ಹೊಂದಿದ್ದರು. ಏನೂ ಮಾಡಲಾಗದ ಸ್ಥಿತಿಯಿಂದಾಗಿ ಅಸಹಾಯಕರಾದ ಅವರು ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದ್ದರು. ಇದು ಅವರ ಗಂಡೆದೆಯನ್ನು ತೋರುತ್ತದೆ ಎಂದು ತಿಳಿಸಿದರು.

ಇಂತಹ ನಾಯಕನ್ನು ಕಳೆದುಕೊಂಡಿರುವ ಹುಕ್ಕೇರಿ ಕ್ಷೇತ್ರ, ಬೆಳಗಾವಿ ಜಿಲ್ಲೆಯ ಜನತೆ ಇಂದು ಅನಾಥರಾದಂತಾಗಿದೆ ಎಂದು ವಿಷಾದಿಸಿದರು. ಈ ವೇಳೆ ನಗರಸಭಾ ಸದಸ್ಯರಾದ ಚಂದ್ರು, ಶಿವು, ಮುಖಂಡರಾದ ವಸಂತ್, ಕೆಂಪಯ್ಯ, ಪ್ರಸನ್ನ, ಶಿವಲಿಂಗಯ್ಯ, ನಾಗಣ್ಣ, ಮಲ್ಲಪ್ಪ, ಹರ್ಷ ಇತರರಿದ್ದರು.

ನಾಳೆ ಶ್ರೀನುಲಿಯ ಚಂದಯ್ಯ ಜಯಂತ್ಯುತ್ಸವ



ನಾಗಮಂಗಲ, ಸೆ.7– 12ನೇ ಶತಮಾನದ ವೈಚಾರಿಕ ಕಲ್ಯಾಣ ಕ್ರಾಂತಿಯ ಹರಿಕಾರ ಶ್ರೀನುಲಿಯ ಚಂದಯ್ಯ ರವರ 915ನೇ ಜಯಂತ್ಯುತ್ಸವವನ್ನು ಸೆ.9ರಂದು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಕುಳುವ ಜನಾಂಗದ ತಾಲೂಕು ಅಧ್ಯಕ್ಷ ಸುರೇಶ್ ತಿಳಿಸಿದರು.

ಪಟ್ಟಣದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನುಲಿಯ ಚಂದಯ್ಯನವರು ಬಸವಾದಿ ಪ್ರಥಮರ ಸಮಕಾಲೀನರಾಗಿದ್ದು, ಕಲ್ಯಾಣದಲ್ಲಿ ಜ್ಞಾನ ಸದ್ಭಾವಿ ಎಂಬ ಹೆಗ್ಗಳಿಕೆಗೆ ಭಾಜನರಾದ ಶಿವಶರಣ ಕಾಯಕ ಸದ್ಭಾವಿ, ಗುರು, ಲಿಂಗ, ಜಂಗಮ ದಾಸೋಹಕ್ಕೆ ಮಾದರಿಯಾಗಿದ್ದರು ಎಂದು ತಿಳಿಸಿದರು.

ಶ್ರೀನುಲಿಯ ಚಂದಯ್ಯ ಅವರು ಜಯಂತಿಯನ್ನು ಈ ಮೊದಲು ರಾಜ್ಯ ಮಟ್ಟದಲ್ಲಿ ಮಾತ್ರ ಆಚರಿಸಲಾಗುತ್ತಿತ್ತು. ಈ ಬಾರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಆಚರಿಸಬೇಕು ಎಂದು ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಸೆ. 9ರಂದು ನಡೆಸಲಾಗುತ್ತದೆ ಎಂದು ತಿಳಿಸಿದರು.

ಶಾಸಕ ಸುರೇಶ್‌ಗೌಡರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ. ಪಟ್ಟಣದ ಟಿ.ಬಿ.ಬಡಾವಣೆಯಿಂದ ಆಡಳಿತ ಸೌಧದವರೆಗೆ ಜನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಲಾಗುವುದು. ನಂತರ ಮಿನಿ ವಿಧಾನಸೌಧದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕುಮಾರ್, ಶಿವರಾಮ್, ರವಿ, ಗಂಗಣ್ಣ, ಪ್ರಕಾಶ್, ಪರಮೇಶ್, ಅನಂತ್ ಕುಮಾರ್, ವೆಂಕಟೇಶ್, ಗಿರೀಶ್ ಸೇರಿದಂತೆ ಕುಳುವ ಮಹಾ ಸಂಘದ ನಿರ್ದೇಶಕರು ಉಪಸ್ಥಿತರಿದ್ದರು.

ಕೆಎಸ್‌ಎಲ್‌ಯು ಕುಲಪತಿಗೆ ಅಭಿನಂದನೆ

ಮಂಡ್ಯ, ಸೆ.7– ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ನೇಮಕವಾಗಿರುವ ಪ್ರೊ.ಡಾ.ಸಿ.ಬಸವರಾಜು ಅವರಿಗೆ ಮೈಸೂರು ವಿವಿಯ ಕಾನೂನು ಸಂಶೋಧನಾ ವಿದ್ಯಾರ್ಥಿ ಹಾಗೂ ಮಂಡ್ಯ ಪಿಇಎಸ್ ಕಾನೂನು ಕಾಲೇಜಿನ ಪ್ರಾಧ್ಯಾಪಕ ಪ್ರೊ. ಕೆ.ಎಸ್.ಜಯಕುಮಾರ್ ಅಭಿನಂದನೆ ಸಲ್ಲಿಸಿದ್ದಾರೆ.



ಪ್ರೊ.ಡಾ.ಸಿ.ಬಸವರಾಜು ಅವರು ಈ ಹಿಂದೆ ಮೈಸೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದ ಹಿರಿಯ ಪ್ರಾಧ್ಯಾಪಕರಾಗಿ, ಡೀನ್, ಕುಲಸಚಿವ ಮತ್ತು ಹಂಗಾಮಿ ಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. ಪ್ರಸ್ತುತ ಅವರು ಹುಬ್ಬಳಿಯಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕವಾಗಿರುವುದಕ್ಕೆ ಜಯಕುಮಾರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಸಹಕಾರಿ ಕ್ಷೇತ್ರ ರೈತರಿಗೆ ಹೆಚ್ಚು ಸಹಾಯಕಾರಿ: ಮೋಹನ್



ಕೆ.ಆರ್.ಪೇಟೆ, ಸೆ.7– ಸಹಕಾರಿ ಕ್ಷೇತ್ರ ರೈತರಿಗೆ ಅತಿ ಹೆಚ್ಚು ಸಹಾಯ ಮಾಡುವ ಕ್ಷೇತ್ರವಾಗಿದ್ದು, ಜಿಲ್ಲಾ ಹಾಲು ಒಕ್ಕೂಟ ಹಾಗೂ ಜಿಲ್ಲಾ ಸಹಕಾರ ಸಂಘಗಳು ಸಹಕಾರಿ ಕ್ಷೇತ್ರದ ಎರಡು ಕಣ್ಣುಗಳಿದ್ದಂತೆ ಎಂದು ಕರ್ನಾಟಕ ಸಹಕಾರ ಮಹಾ ಮಂಡಳದ ರಾಜ್ಯ ನಿರ್ದೇಶಕ ಶೀಳನೆರೆ ಎಸ್.ಎಲ್.ಮೋಹನ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ಬುಧವಾರ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ರೈತರು ಕೃಷಿಯ ಜೊತೆಗೆ ಹೈನುಗಾರಿಕೆಯಲ್ಲಿ ಹೆಚ್ಚು ತೊಡಗಿಕೊಂಡಿದ್ದಾರೆ. ಸಹಕಾರ ಬ್ಯಾಂಕ್‌ಗಳಲ್ಲಿ ರಾಸುಗಳನ್ನು ಕೊಳ್ಳಲು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ವ್ಯವಸ್ಥೆಯನ್ನು ಹೊಂದಿದೆ. ಶೂನ್ಯ ಬಡ್ಡಿ ದರದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ 5 ಲಕ್ಷ ರೂ.ಗಳವರೆಗೆ ಸಾಲ ನೀಡಲಾಗುತ್ತಿದೆ. ಹೀಗೆ ಹಲವು ರೀತಿಯಲ್ಲಿ ಸಹಕಾರ ಸಂಘಗಳು ರೈತರಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಾಲೂಕು ಜೆಡಿಎಸ್ ಘಟಕದ ಅಧ್ಯಕ್ಷ ಎ.ಎನ್.ಜಾನಕೀರಾಮ್ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಜೆಡಿಎಸ್ ಪಕ್ಷದ ಹಿರಿಯ ಮುಖಂಡರಾದ ಎಸ್.ಎಲ್.ಮೋಹನ್ ಅವರಿಗೆ ಸಹಕಾರ ಕ್ಷೇತ್ರದ ರಾಜ್ಯ ಮಟ್ಟದಲ್ಲಿ ಅಧಿಕಾರ ಸಿಗುವಂತೆ ಮಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣ, ಸಿ.ಎಸ್.ಪುಟ್ಟರಾಜು, ಜಿ.ಟಿ.ದೇವೇಗೌಡ ಅವರಿಗೆ ಅಭಿನಂದನೆ ಸಲ್ಲಿಸಿದರು.

ಇದೇ ವೇಳೆ ಕರ್ನಾಟಕ ಸಹಕಾರ ಮಹಾ ಮಂಡಳದ ರಾಜ್ಯ ನಿರ್ದೇಶಕರಾಗಿ ಆಯ್ಕೆಯಾದ ಶೀಳನೆರೆ ಎಸ್.ಎಲ್.ಮೋಹನ್ ಅವರನ್ನು ತಾಲೂಕು ಜೆಡಿಎಸ್ ಘಟಕದ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಬಣ್ಣೇನಹಳ್ಳಿ ಧನಂಜಯ, ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ. ಅಶೋಕ್, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಎಸ್‌ಆರ್ ದಿನೇಶ್, ಟಿಎಪಿಸಿಎಂಎಸ್ ನಿರ್ದೇಶಕರಾದ ಬಲದೇವ್, ಮೋಹನ್, ಶಿವಣ್ಣ, ನಾಗರಾಜು, ಅಶೋಕ್, ದಿನೇಶ್, ಎಸ್.ಆರ್.ನವೀನಕುಮಾರ್, ಮಂಜುನಾಥ್, ಲಕ್ಷ್ಮಣಗೌಡ, ರಾಮಕೃಷ್ಣೇಗೌಡ, ನಂಜಪ್ಪ, ಬಿ.ವಿ.ನಾಗೇಶ್, ಗಂಗೇಗೌಡ, ಬೈರಾಪುರ ಹರೀಶ್, ಬೇಲದಕೆರೆ ಮರೀಗೌಡ, ಮಾಜಿ ಅಧ್ಯಕ್ಷ ಬಿ.ನಂಜಪ್ಪ, ಪುರಸಭಾ ಸದಸ್ಯ ಬಸ್ ಸಂತೋಷ್‌ಕುಮಾರ್, ಮಾಜಿ ಸದಸ್ಯ ಕೆ.ಎನ್.ಕಿರಣ್, ಗ್ರಾಪಂ ಸದಸ್ಯ ಎಸ್.ಪಿ.ಸಿದ್ದೇಶ್, ಮಾಜಿ ಸದಸ್ಯ ಶಂಕರಗೌಡ ಸೇರಿದಂತೆ ಮತ್ತಿತರಿದ್ದರು.

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು

ಮಗನ ಅಂಗಾಂಗ ದಾನ ಮಾಡಿ ಸಾರ್ಥಕತೆ ಮೆರೆದ ಕುಟುಂಬಸ್ಥರು

ಶ್ರೀರಂಗಪಟ್ಟಣ, ಸೆ.7– ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಸವಾರ ಸಾವನ್ನಪ್ಪಿರುವ ಘಟನೆ ತಾಲೂಕಿನ ಮೊಗರಹಳ್ಳಿ ಮಂಟಿ ಗ್ರಾಮದ ಬಳಿ ಬುಧವಾರ ನಡೆದಿದೆ.




ತಾಲೂಕಿನ ಬಾಬುರಾಯನಕೊಪ್ಪಲು ಗ್ರಾಮದ ನಿವಾಸಿ ಚೆಲುವರಾಜು ಅವರ ಪುತ್ರ ರಿತೀಶ್ ಕುಮಾರ್ (30) ಮೃತಪಟ್ಟ ಸವಾರ. ಈತ ಮೈಸೂರಿನ ಖಾಸಗಿ ಕಂಪನಿಯ ನೌಕರನಾಗಿದ್ದು, ಎಂದಿನಂತೆ ಕೆಲಸಕ್ಕೆ ತನ್ನ ಬೈಕ್‌ನಲ್ಲಿ ಕೆಆರ್‌ಎಸ್ ಕಡೆಯಿಂದ ರಿತೀಶ್‌ಕುಮಾರ್ ತೆರಳುತ್ತಿದ್ದಾಗ ಮೊಗರಹಳ್ಳಿ ಮಂಟಿ ಗ್ರಾಮದ ಬಳಿ ಎದುರಿನಿಂದ ಬಂದ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡ ರಿತೀಶ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ. ಘಟನೆ ನಡೆದ ಕೂಡಲೇ ಲಾರಿ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ.

ಸ್ಥಳಕ್ಕೆ ಕೆಆರ್‌ಎಸ್ ಪೊಲೀಸರು ಭೇಟಿ ನೀಡಿ, ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಣ್ಣು- ಕಿಡ್ನಿ ದಾನ: ಅಪಘಾತದಲ್ಲಿ ಮೃತಪಟ್ಟ ರಿತೀಶ್ ಕುಮಾರನ ಆಸೆಯಂತೆ ಈತನ ತಂದೆ ತಾಯಿ ಪುತ್ರನ ಕಣ್ಣು ಮತ್ತು ಕಿಡ್ನಿ ಸೇರಿದಂತೆ ಇತರ ಅಂಗಾಂಗಳನ್ನು ದಾನ ಮಾಡಿ ಸಾರ್ಥಕತೆ ಮೆರೆದಿದ್ದಾರೆ. ಸ್ವ-ಗ್ರಾಮದಲ್ಲಿ ಬಾಬುರಾಯನಕೊಪ್ಪಲಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ಮೈಸೂರು ಮಿತ್ರ ಕೊಡಗು ಕಚೇರಿ: ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com



ಮಳೆ ಹಾನಿ ಪ್ರದೇಶಗಳಿಗೆ ಕೇಂದ್ರ ಅಧ್ಯಯನ ತಂಡ ಭೇಟಿ; ಪರಿಶೀಲನೆ

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಅವರಿಂದ ಮಾಹಿತಿ ಸಂಗ್ರಹಿಸಿದ ತಂಡ

ಮಡಿಕೇರಿ, ಸೆ.7– ಮುಂಗಾರು ಮಳೆಯಿಂದ ಕೊಡಗು ಜಿಲ್ಲೆಯಲ್ಲಿ ಆಗಿರುವ ಹಾನಿ ಬಗ್ಗೆ ಕೇಂದ್ರ ಅಧ್ಯಯನ ತಂಡದ ಅಧಿಕಾರಿಗಳು ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಮಡಿಕೇರಿ ತಾಲೂಕಿನ ಸೀಮೆಹುಲ್ಲು ಕಜೆ ಬಳಿ ಉಂಟಾಗಿರುವ ಭೂ ಕುಸಿತ, ಕಾಫಿ ಬೆಳೆ ಹಾನಿ, ಮದೆನಾಡು ಬಳಿಯ ಕರ್ತೋಜಿ ಹೆದ್ದಾರಿ, ಕೊಯನಾಡು ಶಾಲೆ ಬಳಿ ಭೂ ಕುಸಿತ ಹಾಗೂ ಕಿಂಡಿ ಅಣೆಕಟ್ಟು ಪ್ರದೇಶವನ್ನು ವೀಕ್ಷಿಸಿದರು.

ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಜಂಟಿ ಕಾರ್ಯದರ್ಶಿ ಆಶೀಸ್ ಕುಮಾರ್ ನೇತೃತ್ವದ ತಂಡದಲ್ಲಿ ಕೇಂದ್ರ ಹಣಕಾಸು ಮಂತ್ರಾಲಯದ ಉಪ ನಿರ್ದೇಶಕರಾದ ಮಹೇಶ್ ಕುಮಾರ್, ಕೇಂದ್ರ ಇಂಧನ ಮಂತ್ರಾಲಯದ ಸಹಾಯಕ ನಿರ್ದೇಶಕರಾದ ಭವ್ಯ ಪಾಂಡೆ ತಂಡವು ಜಿಲ್ಲೆಯ ಭೂಕುಸಿತ, ಬೆಳೆ ಹಾನಿ ಹಾಗೂ ಪ್ರವಾಹ ಪೀಡಿತ ಪ್ರದೇಶವನ್ನು ವಿಕ್ಷೀಸಿ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರಿಂದ ಮಾಹಿತಿ ಪಡೆದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಅವರು ಸೀಮೆಹುಲ್ಲು ಕಜೆ ಬಳಿ ಬರೆ ಕುಸಿತ, ಕಾಫಿ ಬೆಳೆಹಾನಿ, ಕೊಯಿನಾಡು ಶಾಲೆ ಬಳಿಯ ಭೂ ಕುಸಿತ, ಕಿಂಡಿ ಅಣೆಕಟ್ಟು ಪ್ರದೇಶದಲ್ಲಿ ಪ್ರವಾಹ ಮತ್ತಿತರ ಬಗ್ಗೆ ಅಧ್ಯಯನ ಕೇಂದ್ರ ತಂಡಕ್ಕೆ ಸವಿವರವಾಗಿ ಮಾಹಿತಿ ನೀಡಿದರು.

ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತರಾದ ಮನೋಜ್ ರಾಜನ್ ಅವರು ಸುದ್ದಿಗಾರರ ಜೊತೆ ಮಾತನಾಡಿ, ರಾಜ್ಯದಲ್ಲಿ ಮಳೆಯಿಂದ ಹಲವು ಜಿಲ್ಲೆಗಳಲ್ಲಿ ಭೂಕುಸಿತ, ಬೆಳೆಹಾನಿ ಹಾಗೂ ಪ್ರವಾಹದಿಂದಾಗಿ ಸಾಕಷ್ಟು ನಷ್ಟ ಉಂಟಾಗಿದೆ. ಆ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು, ಅದರಂತೆ ಮಳೆಹಾನಿ ಅಧ್ಯಯನ ಕೇಂದ್ರ ತಂಡವು ಕೊಡಗು ಜಿಲ್ಲೆಯ ಮಳೆಹಾನಿ ಪ್ರದೇಶಗಳಿಗೆ ವೀಕ್ಷಣೆ ಕೈಗೊಂಡಿದೆ ಎಂದರು.

ಕೇಂದ್ರದಿಂದ ಮೂರು ತಂಡ ಆಗಮಿಸಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಅಧ್ಯಯನ ಕೇಂದ್ರ ತಂಡವು ಮಳೆ ಹಾನಿ ಸಂಬಂಧ ಚರ್ಚಿಸಿದ್ದಾರೆ ಎಂದು ಮನೋಜ್ ರಾಜನ್ ಅವರು ತಿಳಿಸಿದರು.

ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ತಹಸೀಲ್ದಾರ್ ಮಹೇಶ್, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣತರಾದ ಅನನ್ಯ ವಾಸುದೇವ್, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಮೊಗರಗಲ್ಲಿಯ ಮಳೆ ನೀರಿನ ಚರಂಡಿ ಸೋಲಾರ್ ದೀಪ ಕಾಮಗಾರಿಗೆ ಚಾಲನೆ



ವಿರಾಜಪೇಟೆ, ಸೆ.7– ವಿರಾಜಪೇಟೆ ನಗರದ ಮೊಗರಗಲ್ಲಿಯ ಕೊಳಚೆ ಪ್ರದೇಶದ ಮಳೆ ನೀರಿನ ಚರಂಡಿ ಕಾಮಗಾರಿ ಹಾಗೂ ಸುಂಕದ ಕಟ್ಟೆ ಮತ್ತು ಹರಿಕೇರಿ ವಾರ್ಡ್‌ಗಳಿಗೆ 45 ಸೋಲಾರ್ ಬೀದಿದೀಪ ಅಳವಡಿಸಲಾಗುವುದು ಎಂದು ಶಾಸಕ ಕೆಜಿ.ಬೋಪಯ್ಯ ತಿಳಿಸಿದ್ದಾರೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಪುರಸಭೆಯ ಮೊಗರಗಲ್ಲಿಯ ಮಳೆ ನೀರಿನ ಚರಂಡಿ ಹಾಗೂ ಸೋಲಾರ್ ದೀಪ ಅಳವಡಿಕೆಗೆ 75 ಲಕ್ಷರೂ. ಅನುದಾನದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಬಳಿಕ ಮಾತನಾಡಿ, ಸಾರ್ವಜನಿಕರು ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಸರ್ಕಾರದ ಯಾವುದೇ ಕಾಮಗಾರಿ ನಡೆಯುವ ಸಂದರ್ಭ ಸ್ಥಳೀಯರು ಕಾಮಗಾರಿ ಕಳಪೆಯಾಗದಂತೆ ನೋಡಿಕೊಳ್ಳುವುದು ಉತ್ತಮ ಎಂದರು.

ಭೂಮಿ ಪೂಜೆ ಸಂದರ್ಭ ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕರಾದ ಮೈಸೂರಿನ ಎಸ್.ತೇಜಶ್ರೀ, ಇಂಜಿನಿಯರ್ ಜವಹರ್ ಜೋಗಿ, ಗುತ್ತಿಗೆದಾರ ಮೊಹಮ್ಮದ್ ಇರ್ಫಾನ್, ಪುರಸಭೆ ಅಧ್ಯಕ್ಷೆ ಸುಸ್ಮಿತಾ, ಮುಖ್ಯಾಧಿಕಾರಿ ಚಂದ್ರಕುಮಾರ್, ಅಭಿಯಂತರ ಹೇಮ್ ಕುಮಾರ್, ಸದಸ್ಯರಾದ ಎಂ.ಕೆ.ದೇಚಮ್ಮ, ಎಸ್.ಹೆಚ್. ಮತೀನ್, ಡಿ.ಪಿ.ರಾಜೇಶ್, ರಜನಿಕಾಂತ್, ಸುನೀತಾ ಜೂನಾ, ತಸ್ನಿಂ ಅಕ್ತರ್, ಅನಿತಾ ಮತ್ತಿತರರು ಉಪಸ್ಥಿತರಿದ್ದರು.

ಅ.2, ಕುಶಾಲನಗರದಲ್ಲಿ ಕಾಂಗ್ರೆಸ್ ಸಮಾವೇಶ

ಬ್ಲಾಕ್, ನಗರ ಕಾಂಗ್ರೆಸ್ ಘಟಕದ ಅಧ್ಯಕ್ಷರ ಪದಗ್ರಹಣ



ಕುಶಾಲನಗರ, ಸೆ7– ಅಕ್ಟೋಬರ್ 2 ರಂದು ಗಾಂಧಿ ಜಯಂತಿಯಂದು ನಡೆಯುವ ಕಾಂಗ್ರೆಸ್ ಸಮಾವೇಶದಲ್ಲಿ ಕುಶಾಲನಗರ ಬ್ಲಾಕ್ ಹಾಗೂ ನಗರ ಕಾಂಗ್ರೆಸ್ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಪದಗ್ರಹಣ ಮಾಡಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ನೂತನ ಅಧ್ಯಕ್ಷ ವಿ.ಪಿ.ಶಶಿಧರ್ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಾಂಧಿ ಜಯಂತಿಯಂದು ಕಾಂಗ್ರೆಸ್ ಸಮಾವೇಶ ಏರ್ಪಡಿಸಿ ಅದೇ ವೇದಿಕೆಯಲ್ಲಿ ನೂತನ ನಗರ, ಬ್ಲಾಕ್ ಅಧ್ಯಕ್ಷರು ಅಧಿಕಾರ ಸ್ವೀಕರಿಸಲಿದ್ದಾರೆ.ಈ ಸಮಾವೇಶಕ್ಕೆ ರಾಜ್ಯ ಕಾಂಗ್ರೆಸ್ ನಾಯಕರು ಪಾಲ್ಗೊಳ್ಳುವರು ಎಂದು ಹೇಳಿದರು.

ಕುಶಾಲನಗರ ಪಟ್ಟಣದ ಬೆಳವಣಿಗೆಗೆ ಕಾಂಗ್ರೆಸ್ ಬಹುದೊಡ್ಡ ಕೊಡುಗೆ ನೀಡಿದೆ. ಪಟ್ಟಣದ ಐದು ಕಿ.ಮೀ ವ್ಯಾಪ್ತಿಯಲ್ಲಿ 40 ರಿಂದ 50 ಸಾವಿರ ಜನಸಂಖ್ಯೆ ಹೊಂದಿದೆ. ತಾಲೂಕು ವ್ಯಾಪ್ತಿಯಲ್ಲಿ 80 ಸಾವಿರ ಜನಸಂಖ್ಯೆಯನ್ನು ಹೊಂದಿದೆ.ಮುಂದಿನ ಚುನಾವಣೆಯಲ್ಲಿ ಕುಶಾಲನಗರ ತಾಲೂಕಿನ ಮತಗಳು ನಿರ್ಣಾಯಕವಾಗಲಿವೆ. ಚುನಾವಣೆ ದೃಷ್ಟಿಯಿಂದ ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಬಲಿಷ್ಠಗಳಿಸಬೇಕಾಗಿದೆ. ಕಾರ್ಯಕರ್ತರು ಮತ್ತು ನಾಯಕರ ನಡುವೆ ಉತ್ತಮ ಬಾಂಧವ್ಯ ಬೆಸೆಯಲು ಒತ್ತು ನೀಡಲಾಗುವುದು ಎಂದು ಅವರು ಹೇಳಿದರು.

ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ಮೂಡಿಸುತ್ತ, ಸಾಮೂಹಿಕ ನಾಯಕತ್ವ ಹಾಗೂ ನಿರ್ಣಯಗಳನ್ನು ತೆಗೆದುಕೊಳ್ಳುವ ಸಂಘಟನಾತ್ಮಕವಾಗಿ ಪಕ್ಷದ ಏಳಿಗೆಗೆ ಶ್ರಮಿಸಲಾಗುತ್ತದೆ ಎಂದು ಹೇಳಿದರು. ಎಲ್ಲಾ ಗ್ರಾಪಂ ಮಟ್ಟದಲ್ಲಿ ಸಮಿತಿಗಳನ್ನು ರಚನೆ ಮಾಡುವ ಮೂಲಕ ಎಲ್ಲರಿಗೂ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಗುತ್ತದೆ ಎಂದರು.

ಅವೈಜ್ಞಾನಿಕ ವಿಧಾನದಿಂದ ಸ್ಥಗಿತಗೊಂಡಿರುವ ಪುರಸಭೆ ರಚನೆ. ನೆನೆಗುದಿಗೆ ಬಿದ್ದಿರುವ ಒಳಚರಂಡಿ, ಪಪಂ ಕಚೇರಿ ಹಾಗೂ ತಾಲೂಕು ರಚನೆಯಾದರೂ ಪೂರ್ಣ ಪ್ರಮಾಣದಲ್ಲಿ ಕಚೇರಿಗಳು ಆರಂಭಗೊಳ್ಳದೆ ಇರುವುದು ಸೇರಿದಂತೆ ಭ್ರಷ್ಟಾಚಾರ, ರಿಯಲ್ ಎಸ್ಟೇಟ್ ದಂಧೆಗಳ ವಿರುದ್ಧ ಕಾಂಗ್ರೆಸ್ ಪಕ್ಷದ ವತಿಯಿಂದ ಸಮಾಜಮುಖಿ ಹೋರಾಟ ನಡೆಸಲಾಗುತ್ತದೆ. ಶಾಸಕರು ಕೂಡ ಉತ್ತರ ನೀಡಬೇಕಾಗುತ್ತದೆ ಎಂದರು.

ನಗರ ಘಟಕದ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಮಾಜಿ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಕೆಪಿಸಿಸಿ ಸಂಯೋಜಕ ಮಂಜುನಾಥ್ ಗುಂಡೂರಾವ್, ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಕಿರಣ್ ಕುಮಾರ್, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಬ್ದುಲ್ ರಜಾಕ್ ಇದ್ದರು.

ಹಾಡಹಗಲೇ ಹೋಟೆಲ್‌ನ ಕ್ಯಾಶ್‌ಬಾಕ್ಸ್‌ನಿಂದ ಕೈಹಾಕಿ ಹಣ ದೋಚಿದ ಖದೀಮ

ಸಿಸಿ ಟಿವಿಯಲ್ಲಿ ಕೈ ಚಳಕ ಸೆರೆ

ಮಡಿಕೇರಿ, ಸೆ7– ಹಾಡಹಗಲೇ ಖದೀಮನೋರ್ವ ನಗರದ ಪ್ರತಿಷ್ಠಿತ ಹೋಟೆಲ್‌ನ ಕ್ಯಾಶ್‌ಬಾಕ್ಸ್‌ಗೆ ಕೈಹಾಕಿ ಹಣ ದೋಚಿರುವ ಘಟನೆ ಬುಧವಾರ ಮುಂಜಾನೆ ನಡೆದಿದೆ.

ನಗರದ ಕೊಹಿನೂರ್ ರಸ್ತೆಯಲ್ಲಿರುವ ಹೋಟೆಲ್ ಒಂದರಲ್ಲಿ ಈ ಘಟನೆ ನಡೆದಿದ್ದು, ಖದೀಮನ ಕೈ ಚಳಕ ಸಿ.ಸಿ. ಟಿವಿಯಲ್ಲಿ ಸೆರೆಯಾಗಿದೆ. ಹೋಟೆಲ್ ಪ್ರವೇಶಿಸಿದ ಖತರ್ನಾಕ್ ಕಳ್ಳ ನೇರವಾಗಿ ಕ್ಯಾಶ್ ಬಾಕ್ಸ್‌ಗೆ ಕೈ ಹಾಕಿ ಹಣವಿಟ್ಟಿದ್ದ ಚೀಲವನ್ನು ಎಗರಿಸಿದ್ದಾನೆ. ಸುಮಾರು 50 ಸಾವಿರ ರೂ.ಗೂ ಅಧಿಕ ಹಣ ಇಟ್ಟಿರುವುದಾಗಿ ಹಾಗೂ ಹಣವಿದ್ದ ಚೀಲದಲ್ಲಿ ಇತರೆ ಮೂರು ವಾಹನಗಳ ದಾಖಲಾತಿಗಳ ಸಹಿತ ಪ್ರಮುಖ ದಾಖಲೆಗಳಿರುವುದಾಗಿ ಹೋಟೆಲ್ ಮಾಲೀಕರು ತಿಳಿಸಿದ್ದಾರೆ.

ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಸ್ಮರಣೆ

ಶ್ರೀಮಂಗಲ, ಸೆ.7– 1965 ರ ಭಾರತ –ಪಾಕಿಸ್ತಾನ ಯುದ್ಧದಲ್ಲಿ ದೇಶ ರಕ್ಷಣೆಗಾಗಿ ವೀರೋಚಿತ ಮರಣವನ್ನಪ್ಪಿದ ಪಟ್ಟ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ ಸ್ಮಾರಕಕ್ಕೆ ಪೊನ್ನಂಪೇಟೆ ಮಾಜಿ ಸೈನಿಕರು ಹೂವಿನ ಹಾರ ಹಾಕಿ ಗೌರವ ಸಲ್ಲಿಸಿದರು.



ಪೊನ್ನಂಪೇಟೆಯ ಕಾನೂರು–ಹುದಿಕೇರಿ ಜಂಕ್ಷನ್‌ನಲ್ಲಿರುವ ಸ್ಕ್ವಾ. ಲೀ. ದೇವಯ್ಯ ಅವರ ಸ್ಮಾರಕಕ್ಕೆ ಹೂವಿನ ಹಾರ ಹಾಕಿ ಗೌರವ ಸಲ್ಲಿಸಿದ ಸಂದರ್ಭ ಪೊನ್ನಂಪೇಟೆ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಐನಂಡ ಸುಬ್ರಮಣಿ ಮಂದಣ್ಣ, ನಿವೃತ್ತ ಸೇನಾಧಿಕಾರಿಗಳಾದ ಚೋಡುಮಾಡ ರಾಜಾ ಮಂದಪ್ಪ, ಚೆಟ್ರುಮಾಡ ಕಾಶಿ ತಮ್ಮಯ್ಯ ಮತ್ತು ಇತರರು ಪಾಲ್ಗೊಂಡಿದ್ದರು

ಮಾಲ್ದಾರೆ ಬಳಿ ಕಾಫಿ ತೋಟದಲ್ಲಿ ಕೆನ್ನಾಯಿಗಳ ದಾಳಿಗೆ ಜಿಂಕೆ ಬಲಿ

ಸಿದ್ದಾಪುರ, ಸೆ.7– ಕಾಡಾನೆ, ಹುಲಿ, ಚಿರತೆ, ಕಾಡೆಮ್ಮೆ ಸೇರಿದಂತೆ ಇತರ ಪ್ರಾಣಿಗಳ ಹಾವಳಿಯಿಂದ ಭಯಭೀತರಾಗಿದ್ದ ಕಾರ್ಮಿಕರು, ಬೆಳೆಗಾರರು, ಶಾಲಾ ವಿದ್ಯಾರ್ಥಿಗಳಿಗೆ ಇದೀಗ ಕೆನ್ನಾಯಿಗಳ ಕಾಟದಿಂದ ಮನೆಯಿಂದ ಹೊರ ಬರಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇಲಾಪುರ ಘಟ್ಟದಳ ಬಳಿಯ ಕಾಫಿ ತೋಟವೊಂದರಲ್ಲಿ ಹತ್ತಕ್ಕೂ ಹೆಚ್ಚು ಕೆನ್ನಾಯಿಗಳ ದಾಳಿಗೆ ಜಿಂಕೆಯೊಂದು ಬಲಿಯಾಗಿರುವ ಘಟನೆ ನಡೆದಿದೆ.

ಕಾಫಿ ತೋಟದಲ್ಲಿ ಕಾಣಿಸಿಕೊಂಡ ಕೆನ್ನಾಯಿಗಳನ್ನು ಕಂಡು ಕಾರ್ಮಿಕರು ಭಯದಿಂದ ಓಡಿ ಮನೆ ಸೇರಿದ್ದಾರೆ. ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಚೆನ್ನಂಗಿ ಉಪ ವಲಯ ಅರಣ್ಯಾಧಿಕಾರಿ ಶ್ರೀನಿವಾಸ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮರಣೋತ್ತರ ಪರೀಕ್ಷೆ ಬಳಿಕ ಸ್ಥಳದಲ್ಲೇ ಜಿಂಕೆಯ ಸಂಸ್ಕಾರ ಮಾಡಲಾಯಿತು.



ಮಾಲ್ದಾರೆ ಗ್ರಾಪಂ ಅಧ್ಯಕ್ಷ ಸಮೀರ್ ಸ್ಥಳಕ್ಕೆ ಭೇಟಿ ನೀಡಿ ಅರಣ್ಯಾಧಿಕಾರಿಗಳೊಂದಿಗೆ ಮಾತನಾಡಿ, ಕಾಡು ಪ್ರಾಣಿಗಳ ಹಾವಳಿಯಿಂದ ಜನರು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಿರಂತರವಾಗಿ ಕಾಣಿಸಿಕೊಳ್ಳುತ್ತಿರುವ ಕಾಡಾನೆ ಹಾವಳಿಯಿಂದ ಅಪಾರ ಪ್ರಮಾಣದ ಕೃಷಿ ಫಸಲು ನಾಶವಾಗಿದೆ. ಇತ್ತೀಚೆಗಷ್ಟೇ ಹುಲಿಯೊಂದು ಮಾಲ್ದಾರೆ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಣಿಸಿಕೊಂಡು ಹಲವಾರು ಜಾನುವಾರುಗಳನ್ನು ಬಲಿ ತೆಗೆದುಕೊಂಡಿದೆ.

ಇದೀಗ ಕೆನ್ನಾಯಿಗಳ ಹಾವಳಿಯೂ ಮಿತಿ ಮೀರಿದ್ದು ಕಾರ್ಮಿಕರು, ಬೆಳೆಗಾರರು ತೋಟದ ಕೆಲಸಕ್ಕೆ ತೆರಳಲು ಸಾಧ್ಯವಾಗದೆ ವಿದ್ಯಾರ್ಥಿಗಳು ಶಾಲೆಗೆ ತೆರಳಲು ಭಯ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಶಾಶ್ವತವಾಗಿ ಕಾಡುಪ್ರಾಣಿಗಳ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಸಂದರ್ಭ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಸ್ಥಳೀಯ ಕಾರ್ಮಿಕರು ಹಾಜರಿದ್ದರು.

ಸೆ.9ರಿಂದ ದಕ್ಷಿಣ ಭಾರತ ಅಥ್ಲೆಟಿಕ್ಸ್ ಸ್ಪರ್ಧೆ

ಕೂಡಿಗೆ ಕ್ರೀಡಾ ಶಾಲೆಯಿಂದ 9 ವಿದ್ಯಾರ್ಥಿಗಳ ಆಯ್ಕೆ

ಸೋಮವಾರಪೇಟೆ, ಸೆ.7– ಸೆ.9ರಿಂದ 11ರ ವರೆಗೆ ಆಂಧ್ರಪ್ರದೇಶದ ಗುಂಟೂರಿನಲ್ಲಿ ನಡೆಯಲಿರುವ 16 ವರ್ಷದವರ ದಕ್ಷಿಣ ಭಾರತ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಕೂಡಿಗೆ ಕ್ರೀಡಾ ಶಾಲೆಯಿಂದ 9 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಆಯ್ಕೆಯಲ್ಲಿ ಟ್ರಿಪಲ್ ಜಂಪ್‌ನಲ್ಲಿ ಕೆ.ಎನ್. ಭೂಮಿಕ (ಪ್ರ),ಎಸ್. ಪುನಿತ್(ತೃ), 400 ಮೀಟರ್ ಹರ್ಡಲ್ಸ್ ಜಿ.ಎಸ್. ಸಹನ (ದ್ವಿ), ಬಿ.ಬಿ.ಸಚಿನ್(ದ್ವಿ), 400 ಓಟ ಎನ್.ಸಿ. ಮಾನಸ (ಪ್ರ), 800 ಮೀಟರ್ಸ್ ಓಟದಲ್ಲಿ ರಮೇಶ್(ದ್ವಿ), 1500 ಮೀಟರ್ಸ್ ಎಚ್.ವಿ. ಚಿಂತನ್(ದ್ವಿ), 2000 ಮೀಟರ್ ಓಟದಲ್ಲಿ ಬಿ.ವಿ. ದೀಕ್ಷ (ಪ್ರ), ಎಂ.ಎಂ. ಸ್ನೇಹ(ದ್ವಿ), 2000 ಸ್ಟಿಪಲ್ ಚೇಸ್ ಭೀಮಶಂಕರ್ ಪ್ರಥಮ ಸ್ಥಾನ ಗಳಿಸಿ ಆಯ್ಕೆಯಾದರು. ಪ್ರಸ್ತುತ ಇವರು ಕೂಡಿಗೆ ಕ್ರೀಡಾಶಾಲೆಯಲ್ಲಿ ಅಥ್ಲೆಟಿಕ್ಸ್ ತರಬೇತುದಾರರಾದ ಮಂಜುನಾಥ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.



ಜಿಮ್ನಾಸ್ಟಿಕ್ ತರಬೇತುದಾರ ಸುರೇಶ್, ಶಾಲಾ ಮುಖ್ಯ ಶಿಕ್ಷಕ ಬಿ.ಟಿ. ದೇವ್ ಕುಮಾರ್, ಹಾಕಿ ತರಬೇತುದಾರ ಬಿ.ಎಸ್. ವೆಂಕಟೇಶ್, ದೀನಮಣಿ, ಆಡಳಿತಾಧಿಕಾರಿ ಎನ್.ಡಿ. ಜಯರಾಮ್ ಇದ್ದಾರೆ.

ವಿರಾಜಪೇಟೆ ಗಣೇಶಮೂರ್ತಿ ವಿಸರ್ಜನೆ ವೇಳೆ ಧ್ವನಿವರ್ಧಕ ಬಳಕೆಗೆ ಅವಕಾಶ ಕೋರಿಕೆ

ಶಾಸಕ ಬೋಪಯ್ಯ, ಸರ್ಕಾರಕ್ಕೆ ಪತ್ರ

ಮಡಿಕೇರಿ,ಸೆ.7– ವಿರಾಜಪೇಟೆ ಗಣೇಶ ಮೂರ್ತಿಗಳ ವಿಸರ್ಜನೆ ಮತ್ತು ಕೊಡಗಿನ ದಸರಾ ಮೆರವಣಿಗೆ ಸಂದರ್ಭ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡುವಂತೆ ರಾಜ್ಯ ಸರಕಾರಕ್ಕೆ ವಿರಾಜಪೇಟೆ ಕ್ಷೇತ್ರ ಶಾಸಕರೂ ಹಾಗೂ ಸರಕಾರಿ ಭೂಮಿ ಸಂರಕ್ಷಣಾ ಸಮಿತಿ ಅಧ್ಯಕ್ಷ ಬೋಪಯ್ಯ ಪತ್ರ ಬರೆದಿದ್ದಾರೆ.



ರಾಜ್ಯ ಗೃಹ ಸಚಿವರು, ಕಾನೂನು ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ನಾಗೇಶ್ ಅವರಿಗೆ ಪತ್ರ ಬರೆದಿರುವ ಕೆ.ಜಿ. ಬೋಪಯ್ಯ ರಾತ್ರಿ ವೇಳೆ ನಡೆಯುವ ವಿರಾಜಪೇಟೆ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆ, ಮಡಿಕೇರಿ ಹಾಗೂ ಗೋಣಿಕೊಪ್ಪ ದಸರಾ ಉತ್ಸವದ ಸಂದರ್ಭ ರಾತ್ರಿ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ.

ಸುಪ್ರೀಂ ಕೋರ್ಟ್‌ನ ತೀರ್ಪಿನಲ್ಲಿ ಉಲ್ಲೇಖ ಆಗಿರುವ ವಿನಾಯಿತಿ ಕುರಿತು ಪತ್ರದಲ್ಲಿ ಸ್ಪಷ್ಟಪಡಿಸಿರುವ ಬೋಪಯ್ಯ, ವಿಶೇಷ ಸಂದರ್ಭದಲ್ಲಿ ಹಬ್ಬಗಳಿಗೆ ಧ್ವನಿವರ್ಧಕ ಬಳಕೆ ಮಾಡಬಹುದು ಎಂಬ ಕೋರ್ಟ್ ವಿನಾಯಿತಿ ನೀಡಿಕೆಯನ್ನೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಶುಕ್ರವಾರ ರಾತ್ರಿ ವಿರಾಜಪೇಟೆಯಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆ ಶೋಭಾಯಾತ್ರೆ ನಡೆಯಲಿದ್ದು, ಸರಕಾರ ಅನುಮತಿ ನೀಡುವ ನಿರೀಕ್ಷೆ ಹೊಂದಲಾಗಿದೆ ಎಂದು ಬೋಪಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ಸ್ಮರಣೆ

ದೇಶಕ್ಕೆ ಮಾದರಿಯಾದ ದೇವಯ್ಯನವರ ತ್ಯಾಗ

ಮಡಿಕೇರಿ,ಸೆ.7– 1965ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ವೀರ ಮರಣ ಹೊಂದಿದ ಮಹಾವೀರ ಚಕ್ರ(ಮರಣೋತ್ತರ) ಪುರಸ್ಕೃತ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸುವ ಮೂಲಕ 57ನೇ ಪುಣ್ಯಸ್ಮರಣೆ ಆಚರಿಸಲಾಯಿತು.

ಕೊಡವ ಮಕ್ಕಡ ಕೂಟ ಹಾಗೂ ಅಜ್ಜಮಾಡ ಕುಟುಂಬಸ್ಥರ ಸಹಯೋಗದಲ್ಲಿ ನಗರದ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ವೃತ್ತದಲ್ಲಿ ಗಣ್ಯರು, ನಿವೃತ್ತ ಯೋಧರು, ಸಾರ್ವಜನಿಕರು ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಏರ್ ಮಾರ್ಷಲ್(ನಿವೃತ್ತ) ಕೊಡಂದೇರ ನಂದಾ ಕಾರ್ಯಪ್ಪ ಸ್ವಾಲೀ ಅಜ್ಜಮಾಡ ಬಿ.ದೇವಯ್ಯ ಕೊಡವ ಎನ್ನುವುದಕ್ಕಿಂತ ಮೊದಲು ಅವರು ಭಾರತೀಯರಾಗಿದ್ದಾರೆ. ದೇಶ ಸೇವೆಗಾಗಿ ಸರ್ವೋತ್ತಮ ತ್ಯಾಗ ಮಾಡುವ ಮೂಲಕ ಮಾದರಿಯಾಗಿದ್ದಾರೆ ಎಂದು ಬಣ್ಣಿಸಿದರು. ಮುಂದಿನ ದಿನಗಳಲ್ಲಿ ನಿವೃತ್ತ ಯೋಧರಿಗೆ ಹಾಗೂ ಮೃತಪಟ್ಟ ಯೋಧರ ಪತ್ನಿಯರಿಗೆ ಸರ್ಕಾರದಿಂದ ಸಹಕಾರ ನೀಡುವಂತಾಗಬೇಕು ಎಂದು ಆಶಿಸಿದರು.

ಸ್ಕ್ವಾಲೀ. ಅಜ್ಜಮಾಡ ಬಿ.ದೇವಯ್ಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಕಟ್ಟಿ ಮಂದಯ್ಯ ಮಾತನಾಡಿ, ಸ್ವಾಲೀ ಅಜ್ಜಮಾಡ ಬಿ.ದೇವಯ್ಯ ಅವರ 57ನೇ ಪುಣ್ಯಸ್ಮರಣೆ ಆಚರಿಸುತ್ತಿರುವುದು ಹೆಮ್ಮೆಯ ವಿಚಾರ. ತಮ್ಮ 32ನೇ ವಯಸ್ಸಿನಲ್ಲೇ ಅಜ್ಜಮಾಡ ಬಿ.ದೇವಯ್ಯ ಅವರು ತಮ್ಮ



ಕುಟುಂಬದ ಬಗ್ಗೆ ಚಿಂತಿಸದೆ ದೇಶದ ರಕ್ಷಣೆಗಾಗಿ ತಮ್ಮ ಜೀವದ ಹಂಗು ತೊರೆದು ಹೋರಾಡಿದ್ದಾರೆ. ಅವರ ತ್ಯಾಗ ಬಲಿದಾನ ಅವಿಸ್ಮರಣೀಯ. 'ಮಹಾವೀರ ಚಕ್ರ' ಪುರಸ್ಕೃತರಾಗಿರುವ ದೇವಯ್ಯ ಅವರ ಹೆಸರು ಚಿರಕಾಲ ಉಳಿಯಬೇಕು ಎಂದು ಹೇಳಿದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಜನರಲ್ ತಿಮ್ಮಯ್ಯ ಫೋರಂನ ಅಧ್ಯಕ್ಷ ಕರ್ನಲ್ ಕಂಡ್ರತಂಡ ಸುಬ್ಬಯ್ಯ ಮಾತನಾಡಿ, ಯೋಧರ ಪೌರುಷ, ತ್ಯಾಗದ ಸ್ಮರಣೆ ಕೊಡಗಿಗೆ ಮಾತ್ರ ಸೀಮಿತವಾಗಬಾರದು. ಹುತಾತ್ಮರಾದ ಯೋಧರನ್ನು ಸ್ಮರಿಸುವುದು ಸರ್ಕಾರದ ಕರ್ತವ್ಯವಾಗಬೇಕು. ಆದರೆ ಆಡಳಿತ ವ್ಯವಸ್ಥೆ ತನ್ನ ಜವಾಬ್ದಾರಿಯನ್ನು ಮರೆತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹುತಾತ್ಮರ ದಿನವನ್ನಾಗಿ ಆಚರಿಸಿ ಗೌರವ ನಮನ ಸಲ್ಲಿಸಬೇಕು ಎಂದು ಹೇಳಿದರು.

ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಮಾತನಾಡಿ, ಕೊಡಗು ವೀರಶೂರರ ನಾಡು ಎಂದು ಕೀರ್ತಿ ಪಡೆದಿದೆ. ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ, ಜನರಲ್ ತಿಮ್ಮಯ್ಯ ಹಾಗೂ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರಿಂದ ಕೊಡಗಿನ ಹೆಸರು ಪ್ರಪಂಚದಲ್ಲೇ ಗುರುತಿಸಿಕೊಳ್ಳುವಂತಾಗಿದೆ. ವೀರ ಸೇನಾನಿಗಳ ಆದರ್ಶವನ್ನು ಯುವಕರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಮಾತನಾಡಿ, ಅಜ್ಜಮಾಡ ಬಿ.ದೇವಯ್ಯ ಅವರ ಕಾಣಿಕೆಯನ್ನು ಮುಂದಿನ ದಿನಗಳಲ್ಲಿ ಎಲ್ಲರೂ ಸ್ಮರಿಸುವಂತಾಗಬೇಕು. ಅವರ ಸಾಧನೆ ಮತ್ತು ಸ್ಫೂರ್ತಿ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲೀರ ಎ.ಅಯ್ಯಪ್ಪ ಮಾತನಾಡಿ, ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರು ಇಂದಿನ ಯುವಕರಿಗೆ ಮಾದರಿಯಾಗಿದ್ದಾರೆ. ಯುವ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರಿ ದೇಶಸೇವೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ನಗರಸಭಾ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ ಮಾತನಾಡಿ, ಕೊಡಗು ಹೆಚ್ಚಿನ ಸಂಖ್ಯೆಯ ವೀರಯೋಧರನ್ನು ಹೊಂದಿರುವುದು ಹೆಮ್ಮೆಯ ವಿಚಾರವಾಗಿದೆ. ಯುವಪೀಳಿಗೆ ದೇಶಸೇವೆ ಮಾಡುವಂತಾಗಲಿ ಎಂದರು.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಶಾಖೆಯ ಅಧ್ಯಕ್ಷ ಕೊಟ್ಟುಕತ್ತೀರ ಪಿ.ಸೋಮಣ್ಣ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ರಕ್ಷಣಾ ಪಡೆಗಳಿಗೆ ಸೇರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಯುವಕರು ಅಗ್ನಿಪಥ್ ಯೋಜನೆಯನ್ನು ಸದುಪಯೋಗಪಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ದೇಶಸೇವೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಡಿಕೇರಿ ಕೊಡವ ಸಮಾಜದ ಕಾರ್ಯದರ್ಶಿ ಕನ್ನಂಡ ಸಂಪತ್ ಹಾಗೂ ಆಡಳಿತ ಮಂಡಳಿ ಸದಸ್ಯರು, ಅಜ್ಜಮಾಡ ಕುಟುಂಬದ ಅಧ್ಯಕ್ಷ ಲವ ಕುಶಾಲಪ್ಪ, ಕಾರ್ಯದರ್ಶಿ ಅಜ್ಜಮಾಡ ಜಿ.ಬೋಪಯ್ಯ, ಖಜಾಂಚಿ ಅಜ್ಜಮಾಡ ಟಿ.ಚಂಗಪ್ಪ, ಅಜ್ಜಮಾಡ ಯು.ದೀಲಿಪ್ ಬೋಪಣ್ಣ, ಕೊಡವ ಮಕ್ಕಡ ಕೂಟದ ಕಾರ್ಯದರ್ಶಿ ಪುತ್ತರಿರ ಕರುಣ್ ಕಾಳಯ್ಯ, ಪ್ರಮುಖರಾದ ಡಾ.ಕುಶ್ವಂತ್ ಕೋಳಿಬೈಲು, ನಿವೃತ್ತ ಯೋಧರು, ಅಜ್ಜಮಾಡ ಕುಟುಂಬಸ್ಥರು, ಕೊಡವ ಮಕ್ಕಡ ಕೂಟದ ಸದಸ್ಯರು ಹಾಜರಿದ್ದು, ಪುಷ್ಪನಮನ ಸಲ್ಲಿಸಿದರು.

ಶ್ರೀ ವಿಜಯ ವಿನಾಯಕ ಉತ್ಸವ ಸಮಿತಿಯಿಂದ ಇಂದು ಅನ್ನ ಸಂತರ್ಪಣೆ

ವಿರಾಜಪೇಟೆ, ಸೆ7– ನಗರದ ಶ್ರೀ ವಿಜಯ ವಿನಾಯಕ ಉತ್ಸವ ಸಮಿತಿ (ದಖ್ಖನಿ ಮೊಹಲ್ಲಾ) ವತಿಯಿಂದ 33ನೇ ವರ್ಷದ ಗೌರಿ–ಗಣೇಶೋತ್ಸವದ ಅಂಗವಾಗಿ ಗುರುವಾರ (ಸೆ.8) ಸಂಜೆ 7 ಗಂಟೆಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ.

ಇದಕ್ಕೂ ಮೊದಲು ಶ್ರೀ ಮಹಾಗಣಪತಿಗೆ ವಿಶೇಷ ಹಾಗೂ ಮಹಾ ಪೂಜೆ ನಡೆಯಲಿದೆ. ಭಕ್ತಾದಿಗಳು ಭಾಗವಹಿಸುವಂತೆ ವಿಜಯ ವಿನಾಯಕ ಉತ್ಸವ ಸಮಿತಿ ಪ್ರಕಟಣೆ ತಿಳಿಸಿದೆ.

ನಿಷೇಧಾಜ್ಞೆ ವೇಳೆ ಅಕ್ರಮವಾಗಿ ದಾಸ್ತಾನು ಮಾಡಿದ್ದ ಮದ್ಯ ವಶ

ಸೋಮವಾರಪೇಟೆ, ಸೆ.7– ಜಿಲ್ಲೆಯಲ್ಲಿ ನಿಷೇಧಾಜ್ಞೆ ಇದ್ದ ಸಂದರ್ಭ ಕುಶಾಲನಗರದ ಹೊಟೇಲ್ ಒಂದರ ವಸತಿಗೃಹದಲ್ಲಿ ಅಕ್ರಮವಾಗಿ ಸಂಗ್ರಹಿಸಲಾಗಿದ್ದ ಮದ್ಯವನ್ನು ಅಬಕಾರಿ ಇಲಾಖೆಯ ಸೋಮವಾರಪೇಟೆ ಉಪ ವಿಭಾಗದ ಉಪ ಅಧೀಕ್ಷಕರಾದ ಚೈತ್ರ ಮತ್ತು ಸಿಬ್ಬಂದಿಗಳು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಕಳೆದ ಆ.24ರಿಂದ 26ರ ವರೆಗೆ ಜಿಲ್ಲೆಯಲ್ಲಿ ನಿಷೇಧಾಜ್ಞೆ ಹೇರಲಾಗಿತ್ತು. ಈ ಸಂದರ್ಭ ಕುಶಾಲನಗರದ ವಸತಿಗೃಹದಲ್ಲಿ ಅಕ್ರಮವಾಗಿ 38.52 ಲೀಟರ್ ಮದ್ಯ ಹಾಗೂ 5.85 ಲೀಟರ್ ಬಿಯರನ್ನು ಸಂಗ್ರಹಿಸಿಡಲಾಗಿತ್ತು. ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿದ ಇಲಾಖಾಧಿಕಾರಿಗಳು, ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಮಾಲೀಕರಿಗೆ ಸೇರಿದ ಸಿಎಲ್–7 ಸನ್ನದನ್ನು ಒಂದು ತಿಂಗಳ ಕಾಲ ಅಮಾನತುಪಡಿಸಿ ಆದೇಶಿಸಿದ್ದಾರೆ.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ಮಳೆ, ಪ್ರವಾಹ ಹಾನಿ: ಸಮೀಕ್ಷೆ ಚುರುಕುಗೊಳಿಸಿ, ಪರಿಹಾರ ವಿತರಿಸಿ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ.ಕಾವೇರಿ ಸೂಚನೆ



ಚಾಮರಾಜನಗರ, ಸೆ.7–ಜಿಲ್ಲೆಯಲ್ಲಿ ಪ್ರವಾಹ, ಮಳೆ, ಇನ್ನಿತರ ಪ್ರಕೃತಿ ವಿಕೋಪದಿಂದ ಉಂಟಾಗಿರುವ ಹಾನಿಗೆ ಸಂಬಂಧಿಸಿದಂತೆ ಸಮೀಕ್ಷೆ ಚುರುಕುಗೊಳಿಸಿ, ತ್ವರಿತವಾಗಿ ಪರಿಹಾರ ನೀಡುವಂತೆ ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಯೋಜನಾ ನಿರ್ದೇಶಕರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ.ಕಾವೇರಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಪ್ರಕೃತಿ ವಿಕೋಪ, ಮಳೆ ಹಾನಿ ಪ್ರಕರಣಗಳ ಕುರಿತು ನಡೆದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿರುವ ವಿವಿಧ ಪ್ರವಾಹ ಹಾಗೂ ಮಳೆ ಹಾನಿ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸಿದ್ದೇನೆ. ಜನರು ಸಂಕಷ್ಟದಲ್ಲಿದ್ದಾರೆ. ಮನೆ, ಬೆಳೆಗೆ ನಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ಜನರಿಗೆ ತುರ್ತಾಗಿ ನೆರವು ನೀಡಬೇಕಿದೆ. ಸಮೀಕ್ಷೆ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಿ ಸಂತ್ರಸ್ತರಿಗೆ ಪರಿಹಾರ ವಿತರಿಸಬೇಕು ಎಂದು ನಿರ್ದೇಶನ ನೀಡಿದರು.

ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಅಧಿಕಾರಿಗಳ ತಂಡ, ನೆರೆ ನೀರು ಇಳಿಮುಖವಾಗಿರುವ ಪ್ರದೇಶಗಳಲ್ಲಿ ಬೆಳೆ ಹಾನಿ ಹಾಗೂ ಹಾನಿಗೊಳಗಾಗಿರುವ ಮನೆಗಳ ಜಂಟಿ ಸರ್ವೆ ಕಾರ್ಯ ಪೂರ್ಣಗೊಳಿಸಿ, ಪರಿಹಾರ ತಲುಪಿಸಲು ಕ್ರಮ ವಹಿಸಬೇಕು ಎಂದರು.

ಜಲಾಶಯಗಳಿಂದ ಬಿಡುವ ನೀರು, ಮಳೆಯಂತಹ ಮುನ್ಸೂಚನೆ ಸಂದರ್ಭದಲ್ಲಿ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ನಿಗಾ ವಹಿಸಬೇಕು. ಪ್ರಸ್ತುತ ಪ್ರವಾಹದಿಂದ ಜಾನುವಾರುಗಳಿಗೆ ಮೇವು ಕೊರತೆಯಾಗಬಾರದು. ಶಾಲೆ, ಅಂಗನವಾಡಿಗಳು, ರಸ್ತೆ, ಸೇತುವೆ, ಕೆರೆ, ಕಾಲುವೆ ಸೇರಿದಂತೆ ಎಲ್ಲವನ್ನು ವೀಕ್ಷಿಸಿ ಸಮಗ್ರ ವರದಿ ನೀಡಿ, ಪುನರ್‌ನಿರ್ಮಾಣ, ದುರಸ್ತಿಗೆ ಕ್ರಮ ವಹಿಸಬೇಕು ಎಂದು ಉಸ್ತುವಾರಿ ಕಾರ್ಯದರ್ಶಿ ಬಿ.ಬಿ.ಕಾವೇರಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮಾತನಾಡಿದರು. ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಎಸ್‌ಪಿ ಕೆ.ಎಸ್.ಸುಂದರ್ ರಾಜ್, ಎಸಿ ಗೀತಾ ಹುಡೇದ, ಕಾವೇರಿ ನೀರಾವರಿ ನಿಗಮದ ಇಇ ಎಂ.ಬಿ. ಪಾಟೀಲ್, ಎಇಇ ಮಂಜುನಾಥಸ್ವಾಮಿ, ಮಂಜುನಾಥ್, ನೀರಾವರಿ ಇಲಾಖೆ ಇಇ ವೆಂಕಟೇಶ್ ಪ್ರಭು, ಜಂಟಿ ಕೃಷಿ ನಿರ್ದೇಶಕ ಮಧುಸೂದನ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಶಿವಪ್ರಸಾದ್, ಪಶು ಸಂಗೋಪನೆ ಇಲಾಖೆ ಉಪ ನಿರ್ದೇಶಕ ಡಾ.ಶಿವಣ್ಣ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಇಇ ಇಬ್ರಾಹಿಂ, ಇತರೆ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

ಪ್ರವಾಹ ಪೀಡಿತ ಪ್ರದೇಶ–ಕಾಳಜಿ ಕೇಂದ್ರಗಳ ಪರಿಶೀಲನೆ

ಚಾಮರಾಜನಗರ: ಜಿಲ್ಲೆಯ ಮಳೆ ಹಾನಿ, ಪ್ರವಾಹ ಪೀಡಿತ ಗ್ರಾಮಗಳು ಹಾಗೂ ಕಾಳಜಿ ಕೇಂದ್ರಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ. ಕಾವೇರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೊಳ್ಳೇಗಾಲ ಪಟ್ಟಣದಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೆ ತೆರಳಿ ಸಂತ್ರಸ್ತರ ಅಹವಾಲು ಆಲಿಸಿದರು. ಯಳಂದೂರು ತಾಲೂಕಿನ ಮಾಂಬಳ್ಳಿ ಗ್ರಾಮದಲ್ಲಿ ಸುವರ್ಣಾವತಿ ನದಿಯಿಂದ ಉಂಟಾದ ಪ್ರವಾಹದಿಂದ ಹಾನಿಗೊಳಗಾದ ಪ್ರದೇಶಗಳು, ಮನೆಗಳಿಗೆ ಭೇಟಿ ನೀಡಿದರು. ಅಗರ ಗ್ರಾಮದ ವಾಲ್ಮೀಕಿ ಭವನದಲ್ಲಿ ಇರುವ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ ಸಂತ್ರಸ್ತರೊಂದಿಗೆ ಸಮಾಲೋಚಿಸಿದರು.

ಮದ್ದೂರು, ಯರಿಯೂರು, ಯಳಂದೂರು ಪಟ್ಟಣ, ಬಳೆಪೇಟೆ, ಮೊತ್ತದಕೇರಿ, ಅಂಬಳೆ, ಕಂದಹಳ್ಳಿ ಗ್ರಾಮಗಳಿಗೂ ಭೇಟಿ ನೀಡಿ ಪ್ರವಾಹದಿಂದ ಉಂಟಾಗಿರುವ ಹಾನಿಯ ಬಗ್ಗೆ ವಿವರ ಪಡೆದುಕೊಂಡರು. ಭೇಟಿಯ ಸಂದರ್ಭದಲ್ಲಿ ಗ್ರಾಮಸ್ಥರು, ಸ್ಥಳೀಯರು ಪ್ರವಾಹದ ನೀರು ಹೆಚ್ಚಾಗಿ ಅನೇಕ ಬಡಾವಣೆಗಳಿಗೆ, ಗ್ರಾಮಗಳಿಗೆ ನುಗ್ಗಿ ಹೆಚ್ಚಿನ ಹಾನಿ ಉಂಟು ಮಾಡಿದೆ. ಹೂಳು ತೆಗೆಯುವ ಕೆಲಸ ಆಗಬೇಕು. ಸಂಪರ್ಕ ಕಲ್ಪಿಸುವ ಕಾಲುವೆಗಳಲ್ಲೂ ಹೂಳು ತೆಗೆದರೆ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಮನವಿ ಮಾಡಿದರು.

ದೊಡ್ಡಅರಸಿನಕೊಳದಿಂದ ನೀರು ಸೋರಿಕೆ; ರಸ್ತೆ ಸಂಚಾರ ಬಂದ್



ಚಾಮರಾಜನಗರ, ಸೆ.7–ನಗರದ ಪ್ರಸಿದ್ಧ ದೊಡ್ಡಅರಸಿನ ಕೊಳದಿಂದ ಭಾರೀ ಪ್ರಮಾಣದ ನೀರು ಸೋರಿಕೆ ಆಗುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಕೊಳದ ರಸ್ತೆ ಸಂಚಾರ ಬಂದ್ ಮಾಡಲಾಗಿದೆ.

ನಗರದ ಕೊಳದ ಬೀದಿಯಲ್ಲಿರುವ ದೊಡ್ಡಅರಸಿನ ಕೊಳ ಇತ್ತೀಚೆಗೆ ಬಿದ್ದ ಮಳೆಯಿಂದ ಸಂಪೂರ್ಣ ಭರ್ತಿ ಆಗಿತ್ತು. ಮಂಗಳವಾರ ಸಾಯಂಕಾಲದಿಂದ ಕೊಳದಿಂದ ಸಣ್ಣದಾಗಿ ಆರಂಭವಾದ ನೀರು ಸೋರಿಕೆ ನಂತರ ಹೆಚ್ಚಾಯಿತು. ಖಾಸಗಿ ಬಸ್ ನಿಲ್ದಾಣ ಮೂಲಕ ಕೊಳದ ಸೋರಿಕೆ ಆಗುತ್ತಿದ್ದು, ಈ ನೀರು ಚರಂಡಿ ಮೂಲಕ ದೊಡ್ಡರಾಯಪೇಟೆ ಕೆರೆಗೆ ಹರಿಯುತ್ತಿದೆ. ವಿಷಯ ತಿಳಿದ ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಅಧಿಕಾರಿಗಳೊಂದಿಗೆ ಬುಧವಾರ ಬೆಳಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಭಾರೀ ಪ್ರಮಾಣದಲ್ಲಿ ನೀರು ಹೊರ ಹೋಗುತ್ತಿದ್ದು, ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಕೊಳ ಸದ್ಯ ನೀರು ಹೊರಹೋಗುತ್ತಿರುವುದರಿಂದ ಹಾಗೂ ಕೊಳ ತುಂಬಿರುವುದರಿಂದ ಅಂತಿಮವಾಗಿ ಸದ್ಯಕ್ಕೆ ಏನು ಮಾಡಲು ಸಾಧ್ಯವಿಲ್ಲ ಎಂಬ ನಿರ್ಧಾರಕ್ಕೆ ಬರಲಾಯಿತು.

ಸಂಚಾರ ಬಂದ್: ಮುನ್ನೆಚ್ಚರಿಕಾ ಕ್ರಮವಾಗಿ ದೊಡ್ಡಅರಸಿನ ಕೊಳದಿಂದ ಹಳೆ ಆರ್‌ಟಿಓ ವರೆಗಿನ ರಸ್ತೆ(ದೊಡ್ಡಅರಸಿನ ಕೊಳ ಹಾಗೂ ಖಾಸಗಿ ಬಸ್ ನಿಲ್ದಾಣದ ರಸ್ತೆ)ಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದೆ. ರಸ್ತೆಯ ಎರಡೂ ಬದಿಯಲ್ಲಿ ಬ್ಯಾರಿಕೇಡ್ ಅಳವಡಿಸಿ ಯಾವುದೇ ವಾಹನ ಸಂಚರಿಸದಂತೆ ಕ್ರಮ ಕೈಗೊಳ್ಳಲಾಗಿದೆ. ಎರಡೂ ಕಡೆಯೂ ಸಹ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ದೊಡ್ಡಅರಸಿನ ಕೊಳದಿಂದ ನೀರು ಸೋರಿಕೆ ಆಗುತ್ತಿರುವುದು ಗಮನಕ್ಕೆ ಬಂದಿದೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ನೀರು ಸೋರಿಕೆ ಆಗುತ್ತಿದ್ದ ಸ್ಥಳವನ್ನು ಸ್ವಚ್ಛಗೊಳಿಸಿ, ಸೋರಿಕೆಯನ್ನು ತಪ್ಪಿಸಲು ಕ್ರಮಕೈಗೊಳ್ಳಲಾಗಿದೆ. ಕೊಳ್ಳದಲ್ಲಿ ಸ್ವಲ್ಪ ನೀರು ಕಡಿಮೆ ಆದ ನಂತರ ಸೋರಿಕೆ ಆಗುತ್ತಿರುವ ಜಾಗಕ್ಕೆ ಮರಳಿನ ಮೂಟೆಗಳನ್ನು ಹಾಕಲು ಸೂಚಿಸಲಾಗಿದೆ.

–ಆಶಾ ನಟರಾಜು, ಚಾ.ನಗರ ನಗರಸಭೆ ಅಧ್ಯಕ್ಷೆ.

ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ



ಚಾಮರಾಜನಗರ, ಸೆ.7–ನಗರದ ಡಾ. ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ 2022ನೇ ಸಾಲಿನ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಥ್ರೋಬಾಲ್ ಎಸೆಯುವ ಮೂಲಕ ನಗರಸಭೆ ಅಧ್ಯಕ್ಷೆ ಆಶಾ ನಟರಾಜು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕ್ರೀಡೆ ಪ್ರತಿಯೊಬ್ಬರನ್ನು ದೈಹಿಕ ಹಾಗೂ ಮಾನಸಿಕವಾಗಿ ಸದೃಢರನ್ನಾಗಿಸುತ್ತದೆ. ಕ್ರೀಡಾಪಟುಗಳು ಸೋಲು–ಗೆಲುವನ್ನು ಸಮನಾಗಿ ಸ್ವೀಕರಿಸಬೇಕು. ಜಿಲ್ಲೆಯ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲೂ ಭಾಗವಹಿಸಿ, ವಿಜೇತರಾಗುವ ಮೂಲಕ ಜಿಲ್ಲೆಗೆ ಕೀರ್ತಿ ತರುವಂತಾಗಬೇಕು ಎಂದು ಕಿವಿಮಾತು ಹೇಳಿದರು.

ಕ್ರೀಡಾ ಜ್ಯೋತಿ ಬೆಳಗಿಸಿದ ನಗರಸಭೆ ಸದಸ್ಯ ಸಿ.ಜಿ. ಚಂದ್ರಶೇಖರ್ ಮಾತನಾಡಿ, ದಸರಾ ಕ್ರೀಡಾಕೂಟ ಜಿಲ್ಲೆಯಲ್ಲಿ ಹಿಂದಿನಿಂದಲೂ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ಇಂದಿನ ಯುವ ಕ್ರೀಡಾಪಟುಗಳು ಕ್ರೀಡಾ ಸ್ಫೂರ್ತಿಯಿಂದ ಪಾಲ್ಗೊಂಡು ಎಲ್ಲಾ ಕ್ರೀಡೆಗಳಲ್ಲೂ ಯಶಸ್ವಿಯಾಗಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಕ್ರೀಡಾಪಟುಗಳು ಹಾಗೂ ತೀರ್ಪುಗಾರರು ಕ್ರೀಡಾ ತೀರ್ಪುಗಳಿಗೆ ಬದ್ಧರಾಗಿ, ಕ್ರೀಡಾ ಮನೋಭಾವನೆಯಿಂದ ನಿಯಮಗಳನ್ನು ಪಾಲಿಸುವಂತೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ಬಿಪಿಇಓ ಶಂಕರ್, ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಎಸ್.ನಾಗಣ್ಣ, ಗೌರವಾಧ್ಯಕ್ಷ ಕುಮಾರಸ್ವಾಮಿ, ತಾಲೂಕು ಅಧ್ಯಕ್ಷ ಚಿಕ್ಕಬಸವಯ್ಯ, ಕಾರ್ಯದರ್ಶಿ ಪ್ರಸಾದ್‌ಮೂರ್ತಿ, ಕುಮಾರ ನಾಯಕ್ ಹಾಗೂ ಮಲ್ಲಿಕಾರ್ಜುನ ಅವರು ಇದೇ ಸಂದರ್ಭದಲ್ಲಿದ್ದರು.

ಕೇಂದ್ರ, ರಾಜ್ಯ ಸರ್ಕಾರದಿಂದ ಶಿಕ್ಷಣ ಕ್ಷೇತ್ರ ಅಭಿವೃದ್ಧಿ



ಗುಂಡ್ಲುಪೇಟೆ, ಸೆ.7– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ಕ್ರಮಕೈಗೊಂಡಿವೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ಪಟ್ಟಣದಲ್ಲಿ ಶಿಕ್ಷಣ ಇಲಾಖೆಯಿಂದ ಗುರುಭವನದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಕ್ಷಕರಿಗೆ ನಿವೃತ್ತಿಯ ನಂತರೂ ಸಾರ್ಥಕತೆ ಭಾವನೆ ಬರುತ್ತದೆ. ಡಾಕ್ಟರ್, ಇಂಜಿನಿಯರ್, ವಿಜ್ಞಾನಿ, ಮಂತ್ರಿ, ಮುಖ್ಯಮಂತ್ರಿ ಎಲ್ಲರೂ ಶಿಕ್ಷಕರಿಂದಲೇ ವಿದ್ಯೆ ಕಲಿತವರಾಗಿದ್ದು, ಎಲ್ಲರಿಂದಲೂ ಶಿಕ್ಷಕರಿಗೆ ಗೌರವ ಸಮರ್ಪಣೆಯಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಕ್ರಮಕೈಗೊಂಡಿದ್ದು, ರೈತರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿದೆ ಎಂದರು.

ವಿಶ್ರಾಂತ ಅರ್ಥಶಾಸ್ತ್ರ ಉಪನ್ಯಾಸಕ ಡಿ.ಎಸ್.ಸದಾಶಿವಮೂರ್ತಿ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ನಿವೃತ್ತ ಹಾಗೂ ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರನ್ನು ಸನ್ಮಾನಿಸಲಾಯಿತು. ದಿನಾಚರಣೆ ಅಂಗವಾಗಿ ಶಿಕ್ಷಕರಿಗೆ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲಾಗಿತ್ತು. ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ. ಶಿವಮೂರ್ತಿ, ತಹಸೀಲ್ದಾರ್ ರವಿಶಂಕರ್, ತಾಪಂ ಇಓ ಅರಸು, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷೆ ಅನ್ನ ಪೂರ್ಣಮ್ಮ, ಬಗರ್ ಹುಕುಂ ಸಮಿತಿಯ ಉಪಾಧ್ಯಕ್ಷ ನಿಟ್ರೆ ನಾಗರಾಜಪ್ಪ, ಪದಾಧಿಕಾರಿಗಳಾದ ಮಹೇಶ್, ದಿನೇಶ್, ರವಿ ಮಾಸ್ಟರ್ ಇತರರಿದ್ದರು.

ಗಾಂಜಾ ಸಾಗಣೆ: ವ್ಯಕ್ತಿ ಬಂಧನ

ಹನೂರು, ಸೆ.7–ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿ ಬಂಧನಯೋರ್ವನನ್ನು ರಾಮಪುರ ಠಾಣೆ ಪೊಲೀಸರು ಬಂಧಿಸಿ, 750 ಗ್ರಾಂ. ಗಾಂಜಾ ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಚಿಕ್ಕಲತ್ತೂರು ಗ್ರಾಮದ ಬಸವ ಅಲಿಯಾಸ್ ಬಸಪ್ಪ ಬಂಧಿತ ಆರೋಪಿ. ಈತ ಗ್ರಾಮದ ಬಳಿ ಮಾರಾಟಕ್ಕಾಗಿ ಚೀಲದಲ್ಲಿ ಒಣ ಗಾಂಜಾ ಸಾಗಿಸುತ್ತಿದ್ದ. ಖಚಿತ ಮಾಹಿತಿ ಹಾಗೂ ಕೊಳ್ಳೇಗಾಲ ಡಿವೈಎಸ್‌ಪಿ ನಾಗರಾಜು ಮಾರ್ಗದರ್ಶನದಲ್ಲಿ ರಾಮಪುರ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ನಂಜುಂಡಸ್ವಾಮಿ ಸಿಬ್ಬಂಯೊಂದಿಗೆ ದಾಳಿ ನಡೆಸಿ ಗಾಂಜಾ ಸಮೇತ ಆರೋಪಿಯನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇದೇ ವೇಳೆ ವೈದ್ಯಾಧಿಕಾರಿ, ಮನು, ಮುಖ್ಯ ಪೇದೆಗಳಾದ ಗಿರೀಶ್, ನಾಗೇಂದ್ರ, ಲಿಯಾಖಾತ್ ಅಲಿಖಾನ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಇದ್ದರು.

ದಡದಹಳ್ಳಿಗೆ ಕಾಡಾ ಅಧ್ಯಕ್ಷರ ಭೇಟಿ

ಗೋಡೆ ಕುಸಿದು ಮೃತಪಟ್ಟ ಮೂರ್ತಿ ಕುಟುಂಬಕ್ಕೆ ವೈಯಕ್ತಿಕ ನೆರವು

ಚಾಮರಾಜನಗರ, ಸೆ.7–ಚಾಮರಾಜನಗರ ತಾಲೂಕಿನ ದಡದಹಳ್ಳಿಯಲ್ಲಿ ಮನೆಯ ಗೋಡೆ ಕುಸಿದು ಮೃತಪಟ್ಟ ಮೂರ್ತಿ ಅವರ ಮನೆಗೆ ಇಂದು ಭೇಟಿ ನೀಡಿದ ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ(ಕಾಡಾ) ಅಧ್ಯಕ್ಷ ಜಿ. ನಿಜಗುಣರಾಜು ಅವರು ಕುಟುಂಬಕ್ಕೆ ಸಾಂತ್ವನ ಹೇಳಿದರಲ್ಲದೆ, ವೈಯಕ್ತಿಕ ನೆರವು ನೀಡಿದರು.



ಮೂರ್ತಿ ಅವರ ಮನೆಗೆ ತೆರಳಿ ಘಟನೆಯ ಸಂಪೂರ್ಣ ವಿವರ ಪಡೆದ ನಿಜಗುಣರಾಜು, ಸರ್ಕಾರದಿಂದ ಘೋಷಿಸಿರುವ ಪರಿಹಾರ ತ್ವರಿತವಾಗಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಹಾನಿಗೀಡಾಗಿರುವ ಮನೆಯನ್ನು ನಿರ್ಮಾಣ ಮಾಡಿಕೊಡಬೇಕು. ಕುಟುಂಬದ ನೆರವಿಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದರು. ದಡದಹಳ್ಳಿ ಗ್ರಾಮದಲ್ಲಿ ಪ್ರಕೃತಿ ವಿಕೋಪದಿಂದ ಹಾನಿಗೀಡಾಗಿರುವ ಮನೆಗಳನ್ನು ಪರಿಶೀಲಿಸಿ ಪಟ್ಟಿ ಮಾಡಲಾಗಿದೆ. ಇನ್ನೂ ಕೆಲ ಮನೆಗಳು ಶಿಥಿಲಗೊಂಡಿದ್ದು, ಇವುಗಳಿಗೂ ಸೂಕ್ತ ಪರಿಹಾರ ಒದಗಿಸಬೇಕಿದೆ. ಈ ನಿಟ್ಟಿನಲ್ಲಿ ಕಂದಾಯ ಅಧಿಕಾರಿಗಳು, ಗ್ರಾಪಂ ಅಧಿಕಾರಿಗಳು ಮತ್ತೊಮ್ಮೆ ಪರಿಶೀಲಿಸಬೇಕು ಎಂದು ನಿಜಗುಣರಾಜು ನಿರ್ದೇಶನ ನೀಡಿದ್ದಾರೆ.

ವೆಂಕಟಯ್ಯನಛತ್ರದಲ್ಲಿ ಬೃಹತ್ ಉಚಿತ ಕಣ್ಣಿನ ತಪಾಸಣೆ



ಚಾಮರಾಜನಗರ, ಸೆ.7– ತಾಲೂಕಿನ ವೆಂಕಟಯ್ಯನಛತ್ರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೋಮವಾರ ಬೆಳಗ್ಗೆ ಬೃಹತ್ ಉಚಿತ ಕಣ್ಣಿನ ತಪಾಸಣೆ ಶಿಬಿರ ನಡೆಯಿತು.

ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಎಂಆರ್‌ಸಿ ಕಣ್ಣಾಸ್ಪತ್ರೆ, ಜ್ವಾಲೇಶ್ವರಿ ಇಂಡೇನ್ ಗ್ರಾಮೀಣ್ ವಿತರಕ್ ಹಾಗೂ ರೋಟರಿ ಸಿಲ್ಕ್ ಸಿಟಿ ಚಾಮರಾಜನಗರ ಸಂಯುಕ್ತ ಆಶ್ರಯದಲ್ಲಿ, ವೆಂಕಟಯ್ಯನ ಛತ್ರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ್ದ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ಗ್ರಾಪಂ ಅಧ್ಯಕ್ಷೆ ಶೈಲಜಾ ಉಮೇಶ್ ಗಿಡಕ್ಕೆ ನೀರನ್ನು ಹಾಕುವ ಮೂಲಕ ಚಾಲನೆ ನೀಡಿದರು.

ಶಿಬಿರದಲ್ಲಿ ಸುಮಾರು 155 ಜನ ಶಿಬಿರಾರ್ಥಿ ಗಳು ಕಣ್ಣಿನ ತಪಾಸಣೆಗೆ ಒಳಗಾದರು. ಇವರಲ್ಲಿ ಪೊರೆ ಸಮಸ್ಯೆವುಳ್ಳ 18 ಜನರನ್ನು ಉಚಿತವಾಗಿ ಶಸ್ತ್ರಚಿಕಿತ್ಸೆಗೆ ಮೈಸೂರಿನ ಎಂಆರ್‌ಸಿ ಕಣ್ಣಾಸ್ಪತ್ರೆಗೆ ಕರೆದೊಯ್ಯಲಾಯಿತು. ಇದೇ ಸಂದರ್ಭದಲ್ಲಿ ಚಾಮುಲ್ ಅಧ್ಯಕ್ಷ ನಾಗೇಂದ್ರ, ಚಾಮುಲ್ ನಿರ್ದೇಶಕ ಹೆಚ್.ಎಸ್. ಬಸವರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹೆಚ್.ಎಂ. ಬಸವಣ್ಣ, ಆಜಾದ್ ಹಿಂದೂ ಸೇನೆ ರಾಜ್ಯಾಧ್ಯಕ್ಷ ಪೃಥ್ವಿರಾಜ್, ಜಿಪಂ ಮಾಜಿ ಅಧ್ಯಕ್ಷೆ ಹಾಗೂ ಬಿಜೆಪಿ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ವೀರ ಶೈವ ಲಿಂಗಾಯತ ನೌಕರರ ಸಂಘದ ಮಾಜಿ ಅಧ್ಯಕ್ಷ ಪರಮೇಶ್ವರಪ್ಪ, ಡಾಕ್ಟರ್ ಅಖಿಲ, ಡಾಕ್ಟರ್ ಗೋವಿಂದರಾಜು, ತಾಪಂ ಮಾಜಿ ಉಪಾಧ್ಯಕ್ಷ ಪಿ.ಎನ್.ದಯಾನಿಧಿ, ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಮುರುಘೇಂದ್ರ ಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷರು ಹಾಗೂ ಜ್ವಾಲೇಶ್ವರಿ ಇಂಡೇನ್ ಗ್ರಾಮೀಣ್ ವಿತರಕ್ ಮಾಲೀಕ ಹೆಚ್.ಬಿ.ಶಮಿತ್ ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಅಂಕನಶೆಟ್ಟಿಪುರ ಸೋಮಣ್ಣ, ಶ್ರೀನಿವಾಸ್, ಗ್ರಾಪಂ ಸದಸ್ಯ ಮೆಡಿಕಲ್ ಅಶೋಕ್, ಎಚ್.ಆರ್.ಸ್ವಾಮಿ, ಎ.ಎಂ.ಸೋಮಣ್ಣ, ಉದ್ಯಮಿ ಪ್ರತಾಪ್, ಗ್ರಾಮದ ಮುಖಂಡರಿದ್ದರು.

ಶಿವರಾತ್ರಿ ರಾಜೇಂದ್ರ ಶ್ರೀಗಳಿಂದ ಶೈಕ್ಷಣಿಕ ಕ್ರಾಂತಿ



ಕೊಳ್ಳೇಗಾಲ, ಸೆ.7– ರಾಜೇಂದ್ರ ಮಹಾಸ್ವಾಮಿಗಳು ಮೌನಕ್ರಾಂತಿಯ ಮಹಂತರು. ಅವರ ದಾಸೋಹ ಪರಿಕಲ್ಪನೆ, ಶಿಕ್ಷಣ ಕ್ಷೇತ್ರದಲ್ಲಿನ ಸೇವೆ ಬಣ್ಣಿಸಲಾಗದು ಎಂದು ಮೈಸೂರಿನ ಪ್ರೊ. ಎ.ಜಿ.ಶಿವಕುಮಾರ್ ಹೇಳಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 107ನೇ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಶ್ರೀಗಳು ಪದವಿಗಾಗಿ ಅಪೇಕ್ಷೆ ಪಟ್ಟವರಲ್ಲ, ಪರಹಿತಕ್ಕಾಗಿ ಬದುಕಿದವರು. ಉಪಕಾರ ಮಾಡುವುದೇ ಧರ್ಮ, ಪರರಿಗಾಗಿ ಬದುಕುವುದು ಪುಣ್ಯ ಎಂದು ನಂಬಿದವರು. ಯುವ ಪೀಳಿಗೆ ಇವರ ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದು ಕಿವಿಮಾತು ಹೇಳಿದರು.

ಚಾಮರಾಜನಗರ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಮಹೇಶ್ ಮಾತನಾಡಿ, ಶ್ರೀಗಳ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ಧನ್ಯರು. ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಶಿಕ್ಷಣ ಸಂಸ್ಥೆ ತೆರೆದ ಶ್ರೀಗಳು ಮಹಾನ್ ಚೇತನರು ಎಂದರು.

ಈ ಸಂದರ್ಭದಲ್ಲಿ ಪದವಿ ಕಾಲೇಜು ಪ್ರಾಂಶುಪಾಲ ಡಾ.ಪ್ರಭು, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎನ್.ಮಹದೇವಸ್ವಾಮಿ, ನರ್ಸಿಂಗ್ ಶಾಲೆ ಪ್ರಾಂಶುಪಾಲ ಹೇಮೇಶ್‌ಮೂರ್ತಿ, ನಾಗಭೂಷಣ್, ಜಯಶ್ರೀ, ಮಹದೇವಮ್ಮ ಇತರರಿದ್ದರು.


1.20 ಲಕ್ಷ ರೂ. ಮೌಲ್ಯದ ಮದ್ಯ ನಾಶ



ಚಾಮರಾಜನಗರ, ಸೆ.7–ನಗರದ ಹೊರ ವಲಯದಲ್ಲಿ ಅವಧಿ ಮೀರಿದ ಸುಮಾರು 1.20 ಲಕ್ಷ ರೂ. ಮೌಲ್ಯದ ಮದ್ಯವನ್ನು ಅಬಕಾರಿ ಉಪಅಧೀಕ್ಷಕ ಎಂ.ಡಿ.ಮೋಹನ್ ನೇತೃತ್ವದಲ್ಲಿ ನಾಶಪಡಿಸಲಾಯಿತು.

ತಾಲೂಕಿನ ಬದನುಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ಪಾನೀಯ ನಿಗಮದ ಡಿಪೋನಲ್ಲಿ ಅವಧಿ ಮೀರಿದ ಮತ್ತು ಮಾನವ ಸೇವನೆಗೆ ಯೋಗ್ಯವಲ್ಲದ 355 ಲೀ. ಬಿಯರ್ ಹಾಗೂ 27 ಲೀ. ಐಎಂಎಲ್ ಸೇರಿ ಒಟ್ಟು 382 ಲೀ. ಮದ್ಯವನ್ನು ನಾಶಪಡಿಸಲಾಯಿತು. ಈ ಸಂದರ್ಭದಲ್ಲಿ ಅಬಕಾರಿ ನಿರೀಕ್ಷಕ ಮೀನಾ, ಉಮಾಶಂಕರ್, ಕೆಎಸ್‌ಬಿಸಿಎಲ್‌ನ ಗುರುನಾಥ್ ಶೆಟ್ಟಿ, ಡಿಪೋ ವ್ಯವಸ್ಥಾಪಕ ಆರ್.ಬಿ.ಬಸವರಾಜು, ಬದನಗುಪ್ಪೆ ಗ್ರಾಮಲೆಕ್ಕಾಧಿಕಾರಿ ಸರಸ್ವತಿ ಗೋಂದಕರ, ಅಬಕಾರಿ ಉಪ ನಿರೀಕ್ಷಕಿ ನಂದಿನಿ, ಅನುವಂತಸಿಂಗ್ ಸಿಬ್ಬಂದಿ ರವಿಕುಮಾರ್, ಸಿದ್ದರಾಜು, ಕುಮಾರ್ ಇದ್ದರು.

ಸಚಿವ ಉಮೇಶ ವಿ.ಕತ್ತಿ ನಿಧನಕ್ಕೆ ಸಂಸದ ಸಂತಾಪ



ಚಾಮರಾಜನಗರ, ಸೆ.7– ಅರಣ್ಯ ಹಾಗೂ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರಾಗಿದ್ದ ಉಮೇಶ ವಿ.ಕತ್ತಿ ಅವರ ನಿಧನಕ್ಕೆ ಸಂಸದ ವಿ. ಶ್ರೀನಿವಾಸ ಪ್ರಸಾದ್ ಸಂತಾಪ ಸೂಚಿಸಿದ್ದಾರೆ. ಉಮೇಶ್ ವಿ. ಕತ್ತಿ ಅವರು ಉತ್ತಮ ಸಮಾಜ ಸೇವಕರಾಗಿದ್ದರು. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡುವಂತಾಗಲಿ ಎಂದು ಪ್ರಾರ್ಥಿಸುವುದಾಗಿ ವಿ. ಶ್ರೀನಿವಾಸ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆ ಹಾನಿ; ಶಾಸಕರಿಂದ ನಗರ ಸಂಚಾರ



ಚಾಮರಾಜನಗರ ನಗರಸಭಾ ವ್ಯಾಪ್ತಿಯ ವಿವಿಧ ಬಡಾವಣೆಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ ಮಳೆ ಹಾನಿ ಕುರಿತು ಪರಿಶೀಲಿಸಿದರು.

ಚಾಮರಾಜನಗರ,ಸೆ.7–ಚಾಮರಾಜನಗರ ನಗರಸಭಾ ವ್ಯಾಪ್ತಿಯ 8ನೇ ವಾರ್ಡ್, 15ನೇ ವಾರ್ಡ್‌ನ ಆದಿ ಜಾಂಭವರ ಬಡಾವಣೆ ಹಾಗೂ ಪೌರಕಾರ್ಮಿಕರ ಬಡಾವಣೆಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಮಳೆಹಾನಿ ಕುರಿತು ಪರಿಶೀಲನೆ ನಡೆಸಿದರು.

ಭಾರೀ ಮಳೆಯಿಂದ ನಗರದ 15ನೇ ವಾರ್ಡ್ ಭೇಟಿ ನೀಡಿದ ಶಾಸಕರು, ಮನೆಗಳಿಗೆ ಮಳೆ ನೀರು ನುಗ್ಗಿ ಉಂಟಾದ ತೊಂದರೆ ಅವಲೋಕಿಸಿದರು. ನಂತರ 8ನೇ ವಾರ್ಡ್‌ನಲ್ಲಿ ಮಳೆಯಿಂದ ಗೋಡೆ ಕುಸಿದ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಮನೆ ಕಳೆದುಕೊಂಡವರ ಪಟ್ಟಿ ತಯಾರಿಸಿ, ತ್ವರಿತ ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳುವಂತೆ ಸ್ಥಳದಲ್ಲಿದ್ದ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ನಗರದಲ್ಲಿ ನಿರಂತರ ಮಳೆಯಿಂದಾಗಿ ಅಪಾರ ಹಾನಿ ಉಂಟಾಗಿದೆ. ಸಂತ್ರಸ್ತರಿಗೆ ಸೂಕ್ತ ಪರಿಹಾರ ಹಾಗೂ ಮನೆ ಕಳೆದುಕೊಂಡವರಿಗೆ ಮನೆ ನಿರ್ಮಿಸಲು ಕ್ರಮ ವಹಿಸುವುದಾಗಿ ಶಾಸಕರು ಭರವಸೆ ನೀಡಿದರು.

ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಚಾ.ಗು.ನಾಗರಾಜು ಮಾತನಾಡಿ, ಆದಿ ಜಾಂಭವರ ಬಡಾವಣೆಯ ಮುಖ್ಯ ರಸ್ತೆಯಿಂದ ಹಾಸ್ಟೆಲ್‌ವರೆಗೆ ಸಿಸಿ ರಸ್ತೆ ನಿರ್ಮಿಸಿ ದರೆ ಮಳೆಯ ನೀರು ಸರಾಗವಾಗಿ ಹರಿದು ಚರಂಡಿ ಮೂಲಕ ಹರಿಯುತ್ತದೆ. ಇದರಿಂದ ಮಳೆನೀರು ಮನೆಗಳಿಗೆ ನುಗ್ಗುವುದು ತಪ್ಪುತ್ತದೆ ಎಂದು ಶಾಸಕರ ಗಮನ ಸೆಳೆದರು.

ಕೋಳಿ ಫಾರಂಗೆ ಭೇಟಿ: ಭಾರೀ ಮಳೆ ನೀರಿಗೆ ಚಾಮರಾಜನಗರ ತಾಲೂಕಿನ ದೇವರಾಜಿಪುರದ ಪ್ರದೀಪ್ ಅವರ ಜಮೀನಿನ ಫಾರಂನಲ್ಲಿ 2 ಸಾವಿರ ಕೋಳಿ ಮರಿಗಳು ಕೊಚ್ಚಿ ಹೋಗಿದ್ದು, ವಿಷಯ ತಿಳಿದು ಶಾಸಕ ಸಿಪುಟ್ಟರಂಗಶೆಟ್ಟಿ ಅಧಿಕಾರಿಗಳೊಂದಿಗೆ ದೇವರಾಜಿಪುರಕ್ಕೆ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಸರ್ಕಾರದಿಂದ ಪರಿಹಾರ ಕೊಡಿಸುವ ಭರವಸೆ ನೀಡಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯ ಆರ್.ಪಿ.ನಂಜುಂಡಸ್ವಾಮಿ, ಮುಖಂಡ ಹೆಚ್.ಹೆಚ್.ನಾಗರಾಜು, ನಗರಸಭೆ ಇಂಜಿನಿಯರ್ ರೇಣುಕಾ ಆರಾಧ್ಯ, ಆರೋಗ್ಯ ನಿರೀಕ್ಷಕ ಮಂಜುನಾಥ್, ಸ್ವಾಮಿ ಸೇರಿದಂತೆ ವಿವಿಧ ಬಡಾವಣೆ ಮುಖಂಡರು ಹಾಜರಿದ್ದರು.

ಹನೂರಲ್ಲಿ ತಾಲೂಕು ಮಟ್ಟದ ಕ್ರೀಡಾಕೂಟ



ಹನೂರು, ಸೆ.7–ಪಟ್ಟಣದ ಮಹದೇಶ್ವರ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ 14ರಿಂದ 17 ವರ್ಷದೊಳಗಿನ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳ ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಕ್ರೀಡಾಧ್ವಜರೋಹಣ ಹಾಗೂ ಗುಂಡು ಎಸೆಯುವ ಮೂಲಕ ಶಾಸಕ ಆರ್.ನರೇಂದ್ರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ತಾಲೂಕು ಕೇಂದ್ರ ಸೇರಿದಂತೆ ಗ್ರಾಮೀಣ ಭಾಗದ ಶಾಲೆಗಳ ವಿದ್ಯಾರ್ಥಿಗಳು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಉತ್ತಮ ಪ್ರತಿಭೆ ಹೊಂದಿದ್ದಾರೆ. ಶೈಕ್ಷಣಿಕ ಹಾಗೂ ಆಟೋಟಗಳಲ್ಲೂ ಕೂಡ ಉತ್ತಮ ಸಾಧನೆ ತೋರುತ್ತಿರುವುದು ಸಂತಸ ತಂದಿದೆ. ಕ್ರೀಡೆಯಲ್ಲಿ ಸೋಲು ಗೆಲುವು ಸಹಜ, ಕ್ರೀಡಾ ಸ್ಫೂರ್ತಿ ಮೆರೆಯುವ ಮೂಲಕ ಕ್ರೀಡಾಕೂಟ ಯಶಸ್ವಿಗೊಳಿಸಬೇಕು ಎಂದರಲ್ಲದೆ, ತಾಲೂಕಿನ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ತೋರಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಲಿ ಎಂದು ಹಾರೈಸಿದರು.

ಸಚಿವ ಉಮೇಶ್ ಕತ್ತಿ ನಿಧನಕ್ಕೆ ಸಂತಾಪ: ಅರಣ್ಯ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಪೂರೈಕೆ ಸಚಿವ ಉಮೇಶ್ ಕತ್ತಿ ನಿಧನ ಹಿನ್ನೆಲೆಯಲ್ಲಿ ಕ್ರೀಡಾ ಧ್ವಜಾರೋಹಣ ನೆರವೇರಿಸಿದ ಬಳಿಕ ಶಾಸಕ ಆರ್. ನರೇಂದ್ರ ಅವರು. ವೇದಿಕೆ ಏರದೆ ಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಂದಿಗೆ ಎರಡು ನಿಮಿಷಗಳ ಕಾಲ ಮೌನಾಚರಣೆ ಸಲ್ಲಿಸಿ, ಗೌರವ ಸಮರ್ಪಿಸಿದರು.

ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಗಿರೀಶ್ ಕ್ರೀಡಾ ಜ್ಯೋತಿ ಬೆಳಗಿಸಿದರು. ಪಟ್ಟಣದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಶಾಲೆಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮಕ್ಕೂ ಮುನ್ನ ವಿದ್ಯಾರ್ಥಿಗಳು ಆಕರ್ಷಕ ಪಥಸಂಚಲನ ನಡೆಸಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಜು, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಮಹದೇವ್, ಇಸಿಓ ಕಿರಣ್, ಪ್ರೌಢಶಾಲಾ ತಾಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಕೆಂಪರಾಜು, ಪ್ರಾಥಮಿಕ ತಾಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಜೋಸೆಫ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗಿರೀಶ್, ಕಾರ್ಯದರ್ಶಿ ಮುನಿನಾಯಕ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸದಸ್ಯ ಸಣ್ಣಸ್ವಾಮಿ, ಖಜಾಂಚಿ ಚಂದ್ರಶೇಖರ್ ಸೇರಿದಂತೆ ವಿವಿಧ ಶಾಲೆಯ ಶಿಕ್ಷಕರು, ದೈಹಿಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


'ಸರ್ವೇ ಜನಾಃ ಸುಖಿನೋಭವಂತು' ಹಿಂದೂ ಧರ್ಮದ ಸಾರ್ವಕಾಲಿಕ ತತ್ವ

ಅಮೆರಿಕಾದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರತಿಪಾದನೆ

ಮೈಸೂರು,ಸೆ.7–ಹಿಂದೂ ಧರ್ಮ ಎಲ್ಲರನ್ನೂ ಅಪ್ಪಿಕೊಳ್ಳುವ ಧರ್ಮ. 'ಸರ್ವೇ ಜನಾಃ ಸುಖಿನೋ ಭವಂತು ಎಂಬ ಸಾರ್ವಕಾಲಿಕ ತತ್ವವನ್ನು ಹಿಂದೂಧರ್ಮ ಜಗತ್ತಿಗೆ ತೋರಿಸಿಕೊಟ್ಟಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅಮೆರಿಕಾದ ಟೆನೆಸ್ಸಿಯ ಮೆಂಫೀಸ್‌ನಲ್ಲಿ ನಡೆದ ಸತ್ಸಂಗದಲ್ಲಿ ಭಾಗವಹಿಸಿ ಮಾತನಾಡಿದ ಶ್ರೀಗಳು, ಪ್ರತಿಯೊಬ್ಬರು ಲೌಕಿಕ ಜೀವನದ ಜೊತೆಗೆ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ ಬದುಕು ಕಟ್ಟಿಕೊಳ್ಳಲು ಭಾರತದ ವಿವಿಧ ಭಾಗಗಳಿಂದ ಬಂದು ಭಾರತೀಯತೆ ಇಲ್ಲಿಯೂ ಗಟ್ಟಿಗೊಳ್ಳುವಂತೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ನಿಮ್ಮೆಲ್ಲರ ಪರಿಶ್ರಮದಿಂದ ಅಮೆರಿಕಾದಲ್ಲಿಯೂ ಒಂದು ಮಿನಿ ಭಾರತ ರೂಪುಗೊಳ್ಳುತ್ತಿದೆ. ಭಾರತೀಯ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಶ್ರೀಮಂತಗೊಳಿಸಲಾಗುತ್ತಿದೆ.



ಮನುಷ್ಯನ ವೈಯಕ್ತಿಕ ಬದುಕು ಶುದ್ಧವಾಗಿರಬೇಕು. ಆಗ ಮಾತ್ರ ಸಾಧನೆ ಸಾಧ್ಯವಾಗುತ್ತದೆ. ಸದಾ ದೇವರ ಸ್ಮರಣೆಯನ್ನು ಮಾಡಬೇಕು. ಇತರ ವಿಷಯಗಳಿಗೆ ಸಮಯ ನೀಡುವಂತೆ ಧ್ಯಾನ–ಪೂಜೆಗಳಿಗೂ ಸಮಯ ಮೀಸಲಿಡಬೇಕು ಎಂದು ಸುತ್ತೂರು ಶ್ರೀಗಳು ಸಲಹೆ ನೀಡಿದರು.

ಅಮೇರಿಕಾದಲ್ಲಿಯೂ ದೇವಾಲಯಗಳ ಸ್ಥಾಪನೆ, ಜೀರ್ಣೋದ್ಧಾರ, ಗೋಶಾಲೆಗಳ ಸ್ಥಾಪನೆಯಂತಹ ಕಾರ್ಯಗಳು ನಡೆಯುತ್ತಿರುವುದು ಶ್ಲಾಘನೀಯ. ಇವೆಲ್ಲ ಭಾರತೀಯ ಪರಂಪರೆಯ ಪ್ರತೀಕಗಳು. ಪುರುಷೋತ್ತಮ್ ಎಸ್–3 ಫೌಂಡೇಶನ್ ಸ್ಥಾಪಿಸಿ ಭಾರತೀಯತೆಯ ಅಸ್ಮಿತೆಗಾಗಿ ಸಾವಯವ ಕೃಷಿ, ಗೋಶಾಲೆ, ಧ್ಯಾನ, ಜಪ, ತಪ ವಿಶೇಷ ಪೂಜೆಗಳು ಇತ್ಯಾದಿಗಳಿಗಾಗಿ ಅವರ ಜೀವನವನ್ನು ಮುಡಿಪಾಗಿಟ್ಟಿರುವುದು ಅತ್ಯಂತ ಶ್ಲಾಘನೀಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ಲೋಬಲ್ ಹಿಂದು ಹೆರಿಟೇಜ್ ಫೌಂಡೇಶನ್‌ನ ಅಧ್ಯಕ್ಷ ಪ್ರಕಾಶ್ ವಲಗುಪುಡಿ, ಜೆಎಸ್‌ಎಸ್ ಸಿರಿಚ್ಯುಯಲ್ ಮಿಷನ್‌ನ ಕುಮಾರ್ ರಾಜಶೇಖರ್, ಡಾ. ಸಜ್ಜನ್ ಶಿವ, ಜಯರಾಜೇಂದ್ರ ಆಲಮಟ್ಟಿ, ರುದ್ರಮುನಿದೇವರು ಹಾಗೂ ಟೆನೆಸ್ಸಿಯ ವಿವಿಧ ಭಾಗಗಳಿಂದ ಆಗಮಿಸಿದ್ದ ಆಧ್ಯಾತ್ಮಿಕ ಜಿಜ್ಞಾಸುಗಳು ಸೇರಿದಂತೆ ಇನ್ನೂ ಅನೇಕ ಭಕ್ತಾದಿಗಳು ಸತ್ಸಂಗದಲ್ಲಿ ಭಾಗವಹಿಸಿದ್ದರು.

ಸೆ.12, 13ರಂದು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ

ಮೈಸೂರು,ಸೆ.7(ಆರ್‌ಕೆಬಿ)–ಹಂಪಿ ಕನ್ನಡ ವಿಶ್ವವಿದ್ಯಾಲಯದ ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರ, ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯದ ಆಶ್ರಯದಲ್ಲಿ ಸೆ.12 ಮತ್ತು 13ರಂದು ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ವಿದ್ಯಾಲಯದಲ್ಲಿ 'ಜೈನ ಧರ್ಮ: ಸಮಾಜಮುಖಿ ಚಿಂತನೆಗಳು' ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಸೆ.12ರಂದು ಬೆಳಗ್ಗೆ 11 ಗಂಟೆಗೆ ಧರ್ಮಸ್ಥಳ ಎಸ್‌ಡಿಎಂ ಸಮೂಹ ವಿದ್ಯಾಸಂಸ್ಥೆಗಳ ಉಪಾಧ್ಯಕ್ಷ ಡಿ.ಸುರೇಂದ್ರಕುಮಾರ್ ಉದ್ಘಾಟನೆ ನೆರವೇರಿಸುವರು. ಹಂಪಿ ವಿವಿ ಕುಲಪತಿ ಡಾ.ಸ.ಚಿ.ರಮೇಶ ಅಧ್ಯಕ್ಷತೆ ವಹಿಸುವರು. ನಂತರ ನಡೆಯುವ ಗೋಷ್ಠಿಗಳಲ್ಲಿ 'ಪ್ರಾಚೀನ ಕನ್ನಡ ಸಾಹಿತ್ಯ, 'ನಡುಗನ್ನಡ ಸಾಹಿತ್ಯ' 'ಆಧುನಿಕ ಕನ್ನಡ ಸಾಹಿತ್ಯ, 'ಜೈನಧರ್ಮ ಮತ್ತು ಅನ್ಯಧರ್ಮ', 'ಪ್ರಸ್ತುತ ಸಂದರ್ಭ' ಕುರಿತಂತೆ ಸಮಾಜಮುಖಿ ಚಿಂತನೆಗಳು ಹೊರಹೊಮ್ಮಲಿದೆ. 13ರಂದು ಸಂಜೆ 4ಕ್ಕೆ ಹಂಪಿ ಕನ್ನಡ ವಿವಿ ಕುಲಸಚಿವ ಡಾ.ಎ.ಸುಬ್ಬಣ್ಣ ರೈ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರೋಪದಲ್ಲಿ ಬೆಂಗಳೂರಿನ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಡಾ.ಬೈರಮಂಗಲ ರಾಮೇಗೌಡ ಸಮಾರೋಪ ಭಾಷಣ ಮಾಡುವರು.

ಸೆ.10, 'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ

ಮೈಸೂರು, ಸೆ.7–'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮ ಸೆ.10ರಂದು ಸಂಜೆ 6 ಗಂಟೆಗೆ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ನಡೆಯಲಿದೆ. ಈ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಉದ್ಘಾಟಿಸಲಿದ್ದು, ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ಇತರೆ ಗಣ್ಯರು ಉಪಸ್ಥಿತರಿರುತ್ತಾರೆ ಎಂದು ಸಂಚಾಲಕ ಡಿ.ಸಿ.ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ 99013–13740 ಸಂಪರ್ಕಿಸಬಹುದು.

ರಸ್ತೆ ವಿಭಜಕಕ್ಕೆ ಡಿಕ್ಕಿ: ಉರುಳಿ ಬಿದ್ದ ಬಸ್

ಮೈಸೂರು, ಸೆ.7– ಮೈಸೂರಿನ ಬೋಗಾದಿ ರಸ್ತೆಯಲ್ಲಿನ ಹರ್ಷ ಬಾರ್ ಸಮೀಪ ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ಖಾಸಗಿ ಬಸ್ಸೊಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿರುವ ಘಟನೆ ಬುಧವಾರ ರಾತ್ರಿ ನಡೆದಿದೆ. ನಗರದ ಆಯಿಷ್ ವೃತ್ತದ ಕಡೆಯಿಂದ ವೇಗವಾಗಿ ಬರುತ್ತಿದ್ದ ಖಾಸಗಿ ಬಸ್ (ಕೆಎ–11 ಬಿ–6455)ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ವಿಭಜಕ್ಕೆ ಡಿಕ್ಕಿ ಹೊಡೆದು, ಪಲ್ಟಿಯಾಗಿದೆ. ಈ ದುರಂತ ವೇಳೆ ಸಾರ್ವಜನಿಕರು ಗುಂಪು ಸೇರಿದ್ದರಿಂದ ಕೆಲಕಾಲ ವಾಹನಗಳ ಸಂಚಾರದಲ್ಲಿ ವ್ಯತ್ಯಯವಾಗಿತ್ತು. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.



ಪೂಜಾ ಅನುಧರ್‌ಗೆ ಪಿಹೆಚ್.ಡಿ ಪದವಿ

ಮೈಸೂರು, ಸೆ.7– ಡಾ. ಬಿ.ವಿ. ಸುಷ್ಮಾ ಅವರ ಮಾರ್ಗದರ್ಶನದಲ್ಲಿ ಜಿ. ಪೂಜಾ ಅನುಧರ್ ಅವರು ಸಿದ್ಧ ಆಹಾರ ಕುರಿತು ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಇಂದು ಮೈಸೂರು ಸುತ್ತಮುತ್ತ ವಿದ್ಯುತ್ ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಸೆ.7– ಚೆಸ್ಕಾಂ ವತಿಯಿಂದ ತುರ್ತು ನಿರ್ವಹಣಾ ಕಾರ್ಯ ನಿಮಿತ್ತ ನಾಳೆ (ಗುರುವಾರ) ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ರಾಜೀವನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜಿದ್, ಎಸ್.ಬಡಾವಣೆ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ಆಲ್ ಬಜಾರ್ ಮಸ್ಜಿದ್ ವೃತ್ತ, ಅಂಬೇಡ್ಕರ್ ಭವನ ರಸ್ತೆ, ಕ್ಯೂಬಾ ಮಸ್ಜಿದ್ ವೃತ್ತ, ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆಹುಂಡಿ, ಕೆ.ಹೆಚ್.ಬಿ. ಬಡಾವಣೆ, RTO–55, ಆಸೀನಾ ಬಡಾವಣೆ, ರಾಜೀವನಗರ 3ನೇ ಹಂತ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ರಾಮಾನುಜ ರಸ್ತೆ, ಹೊಸಬಂಡಿಕೇರಿ, ಜೆ.ಎಸ್.ಎಸ್. ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ಸಬರ್ಬ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತ–ಮುತ್ತ, ಸರ್ಕಾರಿ ಅಥಿತಿ ಗೃಹ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು, ತಾಲ್ಲೂಕು ಕಚೇರಿ, ಡಿ. ದೇವರಾಜ ಅರಸು ರಸ್ತೆ, ಬಿ.ಎನ್.ರಸ್ತೆ, ಚಾಮುಂಡಿಬೆಟ್ಟ, ಸಿದ್ಧಾರ್ಥನಗರ, ಆಲನಹಳ್ಳಿ ಸುತ್ತ–ಮುತ್ತಲಿನ ಪ್ರದೇಶಗಳು, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತ–ಮುತ್ತಲಿನ ಪ್ರದೇಶಗಳು, ಶ್ರೀ ಹರ್ಷ ರಸ್ತೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತ–ಮುತ್ತಲಿನ ಪ್ರದೇಶಗಳು, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತ–ಮುತ್ತಲಿನ ಪ್ರದೇಶಗಳು.



ಚಿಕ್ಕೇಗೌಡನಹುಂಡಿ, ದೇವಲಾಪುರ, ರಾಯನಹುಂಡಿ, ಆಯರಹಳ್ಳಿ, ಮರಿಗೌಡನಹುಂಡಿ, ಕುಂಬ್ರಹಳ್ಳಿ, ಕುಂಬ್ರಹಳ್ಳಿ ಮಠ, ಸೋಮೇಶ್ವರಪುರ, ಬಸಹಳ್ಳಿಹುಂಡಿ, ಕಿರಾಳು, ಹದಿನಾರು, ಹದಿನಾರು ಮೋಳೆ, ಮೂಡಹಳ್ಳಿ, ಮಲ್ಲರಾಜಹುಂಡಿ, ಭರಣಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತ–ಮುತ್ತ. ಮೇಗಳಾಪುರ, ಕೀಳನಪುರ, ಸಿದ್ದರಾಮನಹುಂಡಿ, ಎಂ.ಸಿ.ಹುಂಡಿ, ಇನಾಂ ಉತ್ತನಹಳ್ಳಿ, ಕುಪ್ಪೆಗಾಲ, ಮುದ್ದೇಗೌಡನಹುಂಡಿ, ರಂಗನಾಥಪುರ, ಶ್ರೀನಿವಾಸಪುರ, ದೇವೆಗೌಡನಹುಂಡಿ, ಯಡಕೊಳ, ಕಡವೆಕಟ್ಟೆ ಹುಂಡಿ, ಹೊಸಹಳ್ಳಿ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮೀಪುರ, ಮಾಧವಗೆರೆ, ವರಕೋಡು ಪೇಪರ್ ಮಿಲ್, ಕುಪ್ಯ, ಬೊಮ್ಮನಾಯಕನಹಳ್ಳಿ, ಕೆ.ಪಿ.ಹುಂಡಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ನಂಜನಗೂಡು ವಿಭಾಗ ವ್ಯಾಪ್ತಿಯ ಕುಪ್ಯ ಗ್ರಾಮ ಪಂಚಾಯಿತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಲ್ಲಿ ವ್ಯತ್ಯಯವಾಗಲಿದೆ.

ಸರ್ಕಾರಿ ಶಾಲಾ ಮಕ್ಕಳಿಗೆ ಮುಂದಿನ ತಿಂಗಳು ಸಾಕ್ಸ್, ಶೂಗಳ ವಿತರಣೆ

ಬೆಂಗಳೂರು,ಸೆ.7–ಸರ್ಕಾರಿ ಶಾಲಾ ಮಕ್ಕಳಿಗೆ ಮುಂದಿನ ತಿಂಗಳಿನಿಂದ ಸಾಕ್ಸ್, ಶೂಗಳ ವಿತರಣೆ ಮಾಡಲಾಗುತ್ತದೆ ಎಂದು ಶಿಕ್ಷಣ ಇಲಾಖೆ ಮಾಹಿತಿ ನೀಡಿದೆ.

ದಸರಾ ನಂತರ ರಾಜ್ಯದ 48,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳ 47.13 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಂತಿಮವಾಗಿ ಶೂ ಮತ್ತು ಸಾಕ್ಸ್‌ಗಳನ್ನು ಪಡೆಯಲಿದ್ದಾರೆ. ಇದಕ್ಕಾಗಿ ಇಲಾಖೆ ಹಣವನ್ನೂ ಬಿಡುಗಡೆ ಮಾಡಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ವಿಶಾಲ್ ಮಾಹಿತಿ ನೀಡಿದ್ದಾರೆ. ಆಯಾ ಡಿಸಿಗಳ ಮೂಲಕ ಎಲ್ಲಾ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಲಾಗಿದ್ದು, ಅವರು ಶಾಲೆಗಳ ಶಾಲಾಭಿವೃದ್ಧಿ ವ್ಯವಸ್ಥಾಪನಾ ಸಮಿತಿಗಳ ಮ್ಯಾಪಿಂಗ್ ಮಾಡುವ ಬಿಇಒಗಳಿಗೆ ಹಣವನ್ನು ಬಿಡುಗಡೆ ಮಾಡುತ್ತಾರೆ ಮತ್ತು ಮಾಸಾಂತ್ಯದೊಳಗೆ ಎಸ್‌ಡಿಎಂಸಿಗಳಿಗೆ ಹಣ ಬಿಡುಗಡೆ ಮಾಡುತ್ತಾರೆ. ಅವರು ಹಣವನ್ನು ಪಡೆದ ನಂತರ, ಎಸ್‌ಡಿಎಂಸಿಗಳು ಶೂ ಮತ್ತು ಸಾಕ್ಸ್‌ಗಳನ್ನು ಖರೀದಿಸಿ ಅಕ್ಟೋಬರ್‌ನಲ್ಲಿ ವಿದ್ಯಾರ್ಥಿಗಳಿಗೆ ವಿತರಿಸುತ್ತವೆ. ಶೂ, ಸಾಕ್ಸ್ ಮತ್ತು ಸೈಕಲ್‌ಗಳಿಗೆ ಸತತ ಮೂರನೇ ವರ್ಷ ಬಜೆಟ್‌ನಲ್ಲಿ ಅನುಮೋದನೆ ನೀಡಲಾಗಿಲ್ಲ, ಮತ್ತು ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಎರಡು ಕಾರ್ಯಕ್ರಮಗಳನ್ನು ಕೈಬಿಟ್ಟಿರುವುದನ್ನು ಸಮರ್ಥಿಸಿಕೊಂಡರು, ಗುಣಮಟ್ಟದ ಶಿಕ್ಷಣ ನೀಡಲು ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಎನ್‌ಎಸ್‌ಇ ಮಾಜಿ ಸಿಇಒ ರವಿ ನಾರಾಯಣ ಬಂಧನ

ನವದೆಹಲಿ, ಸೆ.7–ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ವ್ಯವಸ್ಥಾಪಕ ನಿರ್ದೇಶಕ ರವಿ ನಾರಾಯಣ್ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಟ್ಯಾಪಿಂಗ್ ಪ್ರಕರಣದಲ್ಲಿ ನಾರಾಯಣ್ ಅವರನ್ನು ಬಂಧಿಸಲಾಗಿದೆ ಎಂದು ತಿಳಿದುಬಂದಿದೆ. ರವಿ ನಾರಾಯಣ್ 1994ರ ಏಪ್ರಿಲ್‌ನಿಂದ 2013ರ ಮಾರ್ಚ್ 31ರವರೆಗೆ ಎನ್‌ಎಸ್‌ಇಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಆ ಬಳಿಕ 2013ರಿಂದ 2017ರವರೆಗೆ ಅವರನ್ನು ಕಾರ್ಯಕಾರಿಯೇತರ ಉಪ ಮುಖ್ಯಸ್ಥರಾಗಿ ನೇಮಕವಾಗಿದ್ದರು.

ಒಂದನೇ ಪುಟದಿಂದ

ಉಮೇಶ್ ಕತ್ತಿ ಅಂತ್ಯಕ್ರಿಯೆ

ವಿಮಾನ ನಿಲ್ದಾಣದಿಂದ ಕತ್ತಿ ಪಾರ್ಥಿವ ಶರೀರವನ್ನು ಬೆಳಗಾವಿಗೆ ವಿಶೇಷ ವಿಮಾನದಲ್ಲಿ ಕೊಂಡೊಯ್ಯಬೇಕಾಗಿತ್ತು. ಆದರೆ ಹವಾಮಾನ ವೈಪರೀತ್ಯದಿಂದಾಗಿ ವಿಮಾನ ಮಧ್ಯಾಹ್ನ 1.30ಕ್ಕೆ ಟೇಕ್ ಆಫ್ ಆಗಿ 2.30ಕ್ಕೆ ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣ ತಲುಪಿತು. ಅಲ್ಲಿಂದ ಅಲಂಕೃತ ವಾಹನದಲ್ಲಿ ಕತ್ತಿ ಹುಟ್ಟೂರು ಬೆಲ್ಲದ ಬಾಗೇವಾಡಿಗೆ ಪಾರ್ಥಿವ ಶರೀರವನ್ನು ಮೆರವಣಿಗೆ ಮೂಲಕ ಕೊಂಡೊಯ್ಯಲಾಯಿತು. ಮಾರ್ಗದುದ್ದಕ್ಕೂ ಪಕ್ಷಾತೀತವಾಗಿ ಅವರ ಅಭಿಮಾನಿಗಳು ಅಂತಿಮ ಗೌರವ ಸಲ್ಲಿಸಿದರು. ಇದರಿಂದಾಗಿ ಕೆಲವೆಡೆ ವಾಹನವನ್ನು ಕೆಲ ನಿಮಿಷಗಳ ಕಾಲ ನಿಲ್ಲಿಸಬೇಕಾದ ಅನಿವಾರ್ಯತೆ ಒದಗಿತು. ಕತ್ತಿ ಒಡೆತನದ ವಿಶ್ವರಾಜ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಪಕ್ಷಾತೀತವಾಗಿ ರಾಜಕೀಯ ಮುಖಂಡರು ಹಾಗೂ ಸಾವಿರಾರು ಸಾರ್ವಜನಿಕರು ಸಾಗರೋಪಾದಿ ಯಲ್ಲಿ ಆಗಮಿಸಿ ಅಗಲಿದ ನಾಯಕನ ಅಂತಿಮ ದರ್ಶನ ಪಡೆದರು. ವಿವಿಧ ಮಠಗಳ ಮಠಾಧೀಶರು ಆಗಮಿಸಿದ್ದರು. ಇದೇ ಸ್ಥಳದಲ್ಲಿ ಸಶಸ್ತ್ರ ಪಡೆ ಪೊಲೀಸರು ಆಗಸದೆಡೆಗೆ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಸರ್ಕಾರಿ ಗೌರವವನ್ನು ಸಲ್ಲಿಸಿದರು. ನಂತರ ಪಾರ್ಥಿವ ಶರೀರಕ್ಕೆ ಹೊದಿಸಿದ್ದ ರಾಷ್ಟ್ರ ಧ್ವಜವನ್ನು ಮುಖ್ಯಮಂತ್ರಿಗಳು ಕತ್ತಿ ಅವರ ಪತ್ನಿ ಶೀಲಾ ಅವರಿಗೆ ಹಸ್ತಾಂತರಿಸಿದರು. ರಾತ್ರಿ ವಿಶ್ವರಾಜ ಸಕ್ಕರೆ ಕಾರ್ಖಾನೆ ಯಿಂದ ಪಾರ್ಥಿವ ಶರೀರವನ್ನು ಮೆರವಣಿಗೆ ಮೂಲಕ ಕತ್ತಿ ಅವರ ಜಮೀನಿಗೆ ಕೊಂಡೊಯ್ಯಲಾಯಿತು. ವಿವಿಧ ಮಠಾಧೀಶರು ಪಾರ್ಥಿವ ಶರೀರಕ್ಕೆ ವೀರಶೈವ ಲಿಂಗಾಯಿತ ಸಂಪ್ರದಾಯದಂತೆ ವಿಧಿ–ವಿಧಾನಗಳನ್ನು ನೆರವೇರಿಸುವ ಮೂಲಕ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಈ ವೇಳೆ ಅಷ್ಟ ದಿಕ್ಕುಗಳಲ್ಲೂ ಪೂರ್ಣಕುಂಭ ಇಟ್ಟು ಶಿವಲಿಂಗ ಸ್ವಾಮೀಜಿಗಳ ನೇತೃತ್ವದಲ್ಲಿ ಪೂಜೆ ಮಾಡಲಾಯಿತು. ತಂದೆ ವಿಶ್ವನಾಥ ಕತ್ತಿ ಸಮಾಧಿ ಬಳಿಯೇ ಉಮೇಶ್ ಕತ್ತಿಯವರ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಅಂತ್ಯಸಂಸ್ಕಾರದಲ್ಲಿ ಮಠಾಧೀಶರು, ಗಣ್ಯರ ದಂಡು: ಉಮೇಶ್ ಕತ್ತಿಯವರ ಅಂತ್ಯಸಂಸ್ಕಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಅವರ ಪುತ್ರ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ಆರ್.ಅಶೋಕ್, ಗೋವಿಂದ ಕಾರಜೋಳ, ಆರಗ ಜ್ಞಾನೇಂದ್ರ, ಸಿ.ಸಿ.ಪಾಟೀಲ್, ಶಾಸಕರಾದ ಸಿ.ಟಿ.ರವಿ, ಹೆಚ್.ಡಿ.ರೇವಣ್ಣ, ರಮೇಶ್ ಜಾರಕಿ ಹೊಳಿ, ಸತೀಶ್ ಜಾರಕಿ ಹೊಳಿ, ಲಕ್ಷ್ಮಣ ಸವದಿ, ಬಸನಗೌಡ ಪಾಟೀಲ್ ಯತ್ನಾಳ್, ಎಂ.ಬಿ.ಪಾಟೀಲ್, ಅಭಯ ಪಾಟೀಲ್, ಅರವಿಂದ ಬೆಲ್ಲದ್, ಮಹಂತೇಶ ಕೌಜಲಗಿ, ಲಕ್ಷ್ಮಿ ಹೆಬ್ಬಾಳ್ಕರ್, ಅಂಜಲಿ ನಿಂಬಾಳ್ಕರ್, ಪಿ.ರಾಜೀವ್, ಪ್ರಕಾಶ್ ಹುಕ್ಕೇರಿ, ಸಂಸದ ವೀರಣ್ಣ ಕಡಾಡಿ, ಮಾಜಿ ಸಚಿವ ಎ.ಬಿ.ಪಾಟೀಲ್, ಮಾಜಿ ಶಾಸಕರಾದ ರಾಜು ಕಾಗೆ, ಶಶಿಕಾಂತ ನಾಯಕ್, ಮಹಂತೇಶ ಕವಠಗಿ ಮಠ, ಅರವಿಂದ ಪಾಟೀಲ್, ಕೂಡಲ ಸಂಗಮದ ಜಯ ಮೃತ್ಯುಂಜಯ ಶ್ರೀಗಳು, ಹುಕ್ಕೇರಿ ಹಿರೇಮಠದ ಶಿವಾಚಾರ್ಯರು, ನಿಡಸೋಸಿ ಮಠದ ಶಿವಲಿಂಗೇಶ್ವರ ಶ್ರೀಗಳು, ಗದಗದ ಶ್ರೀಗಳು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 50ಕ್ಕೂ ಹೆಚ್ಚು ಮಠಾಧೀಶರು ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿದ್ದರು.

> **"ಉಮೇಶ್ ಕತ್ತಿ ಅವರ ತಂದೆ ವಿಶ್ವನಾಥ್ ಕತ್ತಿ ಶಾಸಕರಾಗಿದ್ದರು. ಅವರು ಸಹ ಹೃದಯಾಘಾತದಿಂದ ನಿಧನ ಹೊಂದಿದ್ದರು. ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಸಚಿವ ಉಮೇಶ್ ಕತ್ತಿ ಅವರ ತಂದೆ ವಿಶ್ವನಾಥ್ ಕತ್ತಿ ಅವರು ಜನತಾ ಪಕ್ಷದ ಶಾಸಕರಾಗಿದ್ದರು. 1984ರ ಸಮಯದಲ್ಲಿ ಶಾಸಕರಾಗಿದ್ದ ಅವರು ವಿಧಾನಸಭೆ ಅಧಿವೇಶನ ನಡೆಯುತ್ತಿದ್ದಾಗ ಸದನದಲ್ಲೇ ಹೃದಯಾಘಾತದಿಂದ ಕುಸಿದು ಬಿದ್ದರು. ತಕ್ಷಣ ಅಂದು ಸಚಿವರಾಗಿದ್ದ ಡಾ. ಜೀವರಾಜ ಆಳ್ವ ಸದನದೊಳಗೆ ಪ್ರಾಥಮಿಕ ಚಿಕಿತ್ಸೆ ನೀಡಿದರೂ ಫಲಕಾರಿಯಾಗಿರಲಿಲ್ಲ. ಸದನದ ಇತಿಹಾಸದಲ್ಲೇ ಶಾಸಕರಾದವರು ಸದನದಲ್ಲಿದ್ದಾಗ ಮೃತಪಟ್ಟಿದ್ದು ಅದೇ ಮೊದಲು. ನಾವೆಲ್ಲ ಆಗ ಶಾಸಕರಾಗಿದ್ದೆವು. ತಂದೆಯವರ ಬಳಿಕ ಮಗ ಉಮೇಶ್ ಕತ್ತಿಯವರು ಹುಕ್ಕೇರಿಯಿಂದ ನಿಂತು ಶಾಸಕರಾಗಿ ಗೆದ್ದು ಬಂದರು. – ವಿಪಕ್ಷ ನಾಯಕ ಸಿದ್ದರಾಮಯ್ಯ**

> **"ಉಮೇಶ್ ಕತ್ತಿಯವರ ಅಗಲಿಕೆ ನಾಡಿಗೆ ಹಾಗೂ ಪಕ್ಷಕ್ಕೆ ತುಂಬಲಾರದ ನಷ್ಟ. ನಮ್ಮ ಜೊತೆ ಬಹುಕಾಲದ ಸ್ನೇಹಿತನಾಗಿದ್ದ ಉಮೇಶ್ ಕತ್ತಿ ಅಗಲಿಕೆ ಅರಗಿಸಿಕೊಳ್ಳಲಾಗುತ್ತಿಲ್ಲ. ನಾನು ಯಾವುದೇ ಕೆಲಸ ಹೇಳಿದರೂ ಮಾಡುತ್ತಿದ್ದರು. ಕೊಟ್ಟ ಕೆಲಸ ಮುಗಿಸಿ ನನಗೆ ಫೋನ್ ಮಾಡಿ ಕೆಲಸ ಮಾಡಿದ್ದೇನೆ ಎಂದು ಹೇಳುತ್ತಿದ್ದರು. ಅಂತಹ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ. ಅವರ ಅಗಲಿಕೆಯ ನೋವನ್ನು ಅರಗಿಸಿಕೊಳ್ಳುವ ಶಕ್ತಿ ಭಗವಂತ ಅವರ ಕುಟುಂಬದವರಿಗೆ ನೀಡಲಿ. –ಬಿ.ಎಸ್.ಯಡಿಯೂರಪ್ಪ**

ಕುಸಿದು ಬಿದ್ದ ಕತ್ತಿ ಸಹೋದರ ರಮೇಶ್ ಕತ್ತಿ

ಉಮೇಶ್ ಕತ್ತಿ ಅಗಲಿಕೆಯಿಂದಾಗಿ ತಮ್ಮ ರಮೇಶ್ ಕತ್ತಿಯವರ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ. ವಿಶ್ವರಾಜ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಕತ್ತಿಯವರ ಅಂತಿಮ ದರ್ಶನ ಪಡೆಯುತ್ತಿರುವಾಗಲೇ ರಮೇಶ್ ಕತ್ತಿ ಆರೋಗ್ಯದಲ್ಲಿ ಏರುಪೇರು ಉಂಟಾಯಿತು. ತೀವ್ರ ಅಸ್ವಸ್ಥರಾದ ಅವರನ್ನು ಕೊಠಡಿಯೊಂದಕ್ಕೆ ಕರೆದೊಯ್ದು ವೈದ್ಯರು ಇಸಿಜಿ ತಪಾಸಣೆ ನಡೆಸಿದರು. ಕೆಲ ಗಂಟೆಗಳ ಕಾಲ ವಿಶ್ರಾಂತಿ ಪಡೆದ ನಂತರ ರಮೇಶ್ ಕತ್ತಿ ತಮ್ಮ ಸಹೋದರನ ಅಂತ್ಯಕ್ರಿಯೆಯಲ್ಲಿ ಭಾಗಿಯಾದರು.


ಆರ್‌ಬಿಐ ಆವರಣದಲ್ಲಿ ಚಿರತೆ ಸಂಸಾರ

ಚಿರತೆಗಳ ಹಾವಳಿಯಿಂದ ಕ್ವಾರ್ಟರ್ಸ್‌ನಲ್ಲಿದ್ದ ಬೀದಿನಾಯಿಗಳ ಸಂಖ್ಯೆಯೂ ಇಳಿಮುಖವಾಗಿದೆ. ಕಳೆದ ರಾತ್ರಿಯೂ ನಾಯಿಯೊಂದನ್ನು ಬೇಟೆಯಾಡಿ ತಿಂದು ಹಾಕಿವೆ. ಚಿರತೆಗಳ ಸೆರೆ ಹಿಡಿಯುವವರೆಗೂ ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರಿಗೆ ಆತಂಕವಾಗಿದೆ. ಎಲ್ಲಿ ಚಿರತೆ ದಾಳಿ ಮಾಡುತ್ತದ್ದೋ ಎಂಬ ಆತಂಕ ಶಿಕ್ಷಕರಿಗೂ ಇದೆ. ಹಾಗಾಗಿ ಮುನ್ನೆಚ್ಚರಿಕಾ ಕ್ರಮವಾಗಿ ರಜೆ ಘೋಷಿಸಿದ್ದಾರೆ. ಇದರಿಂದ ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿದೆ. ಕೂಡಲೇ ಅರಣ್ಯ ಇಲಾಖೆ ಚಿರತೆಗಳನ್ನು ಸೆರೆ ಹಿಡಿದು ಸ್ಥಳೀಯರ ಆತಂಕ ನಿವಾರಣೆ ಮಾಡಿ, ಶಾಲೆ ಪುನರಾರಂಭಗೊಳ್ಳುವಂತೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಚಿರತೆ ಸೆರೆಗೆ ಕ್ರಮ: ಆರ್‌ಬಿಐ ಆವರಣದಲ್ಲಿ ಚಿರತೆ ಪ್ರತ್ಯಕ್ಷವಾಗಿರುವ ಸಂಬಂಧ ಡಿಸಿಎಫ್ ಕೆ. ಕಮಲ ಕರಿಕಾಳನ್ ಮಾತನಾಡಿ, ಚಿರತೆ ಓಡಾಡುತ್ತಿರುವ ಮಾಹಿತಿಯನ್ನು ಕಳೆದ ವಾರ ಅಲ್ಲಿನ ಅಧಿಕಾರಿಗಳು ಅರಣ್ಯ ಇಲಾಖೆಗೆ ನೀಡಿದ್ದಾರೆ. ಕೂಡಲೇ ನಮ್ಮ ಸಿಬ್ಬಂದಿಯನ್ನು ಕಳುಹಿಸಿ ಪರಿಶೀಲಿಸಲಾಗಿದೆ. ಅಲ್ಲದೆ, ಅಲ್ಲಿರುವ ಸಿಸಿ ಕ್ಯಾಮರಾ ಫುಟೇಜ್‌ನಲ್ಲಿ ಚಿರತೆ ಓಡಾಡುತ್ತಿರುವ ದೃಶ್ಯವನ್ನು ತೋರಿಸಿದ್ದಾರೆ. ಕೂಡಲೇ ಎಸಿಎಫ್ ಲಕ್ಷ್ಮೀಕಾಂತ ಅವರೊಂದಿಗೆ ಆರ್‌ಎಫ್‌ಓ ಒಳಗೊಂಡ ಸಿಬ್ಬಂದಿ, ಪರಿಶೀಲಿಸಿದ ಬಳಿಕ ಒಂದು ಬೋನ್ ಇಟ್ಟು ಸೂಕ್ಷ್ಮವಾಗಿ ಪರಿಶೀಲಿಸಲಾಗಿತ್ತು ಆದರೆ ಅಲ್ಲಿಂದ ಚಿರತೆ ಸುಳಿವು ಇರಲಿಲ್ಲ. ಒಂದೆರಡು ದಿನದ ಬಳಿಕ ಮತ್ತೆ ಓಡಾಡುತ್ತಿರುವ ಬಗ್ಗೆ ಮಾಹಿತಿ ನೀಡಿದ್ದರು. ಈಗ ಮೂರು ಬೋನ್ ಇಟ್ಟು, ಚಿರತೆ ಸೆರೆಗೆ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೇ ಆರ್‌ಬಿಐ ಹಾಗೂ ಕೇಂದ್ರೀಯ ವಿದ್ಯಾಲಯದ ಆವರಣದಲ್ಲಿ ಚಿರತೆ ಸೆರೆಗೆ ಕಾರ್ಯಾಚರಣೆ ಆರಂಭಿಸಲಾಗಿದೆ. ಅಲ್ಲಿರುವ ಪೊದೆಗಳಲ್ಲಿ ಶೋಧಿಸಲಾಗುತ್ತಿದೆ. ಇದುವರೆಗೆ ಕಂಡು ಬಂದಿಲ್ಲ. ಸಾಮಾನ್ಯವಾಗಿ ಚಿರತೆ ರಾತ್ರಿ ವೇಳೆ ಓಡಾಡುವ ಪ್ರಾಣಿಯಾಗಿದ್ದು, ಇದರಿಂದ ಅವುಗಳ ಸೆರೆ ಸಾಧ್ಯವಾಗಿಲ್ಲ. ಆದರೂ ಕಾರ್ಯಾಚರಣೆ ಮುಂದುವರೆಸಲಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಪಶುವೈದ್ಯರ ತಂಡವನ್ನು ಕಾಯ್ದಿರಿಸಲಾಗಿದೆ. ಚಿರತೆ ಕಂಡು ಬಂದರೆ ಅರವಳಿಕೆ ಮದ್ದು ನೀಡಿ, ಸೆರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಕೇಂದ್ರೀಯ ವಿದ್ಯಾಲಯಕ್ಕೆ ರಜೆ ನೀಡುವ ಅವಶ್ಯಕತೆ ಇಲ್ಲ ಎಂದು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದೇವೆ. ತರಗತಿಗಳು ನಡೆಯುವುದು ಹಗಲು ವೇಳೆಯಾಗಿರುವುದರಿಂದ ಚಿರತೆ ಹಗಲು ಓಡಾಡುವುದೇ ಇಲ್ಲ. ಹೀಗಾಗಿ ಶಾಲೆ ನಡೆಸುವಂತೆ ಸಲಹೆ ನೀಡಲಾಗಿದೆ. ಅಲ್ಲದೆ, ಸ್ಥಳದಲ್ಲಿ ಅರಣ್ಯ ಸಿಬ್ಬಂದಿ ಇರುವುದರಿಂದ ಯಾರೂ ಭಯಪಡುವ ಅಗತ್ಯವಿಲ್ಲ ಎಂದರು.

ಮೈಸೂರು ದಸರಾ ಮಹೋತ್ಸವ-2022

ದಸರೆಗೆ ವ್ಯಾಪಕ ಭದ್ರತೆ



ಆಹಾ... ಇದೇನಾ ಅರಮನೆ

ಬುಧವಾರ ಮೈಸೂರಿಗೆ ಆಗಮಿಸಿದ ದಸರಾ ಗಜಪಡೆಯ ಎರಡನೇ ತಂಡದ ಸದಸ್ಯ, ದುಬಾರೆ ಶಿಬಿರದ ಶ್ರೀರಾಮ ಲಾರಿಯಿಂದ ಇಳಿದು ಅಚ್ಚರಿಯಿಂದಲೇ ಅರಮನೆ ಪ್ರವೇಶಿಸುವ ದೃಶ್ಯ ಒಂದು ರೀತಿ ಕುತೂಹಲಕಾರಿಯಾಗಿತ್ತು.

ಮೈಸೂರು, ಸೆ.7(ಆರ್‌ಕೆ)–ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ಈ ಬಾರಿ ವ್ಯಾಪಕ ಬಂದೋಬಸ್ತ್‌ನೊಂದಿಗೆ ಕಟ್ಟೆಚ್ಚರ ವಹಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರ ನಿರ್ದೇಶನದಂತೆ ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಅವರು ಈಗಾಗಲೇ ಮೈಸೂರಿನಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ದಸರಾ ಬಂದೋಬಸ್ತ್‌ಗೆ ಸೂಚನೆ ನೀಡಿರುವುದರಿಂದ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ಮೈಸೂರಿನ ಎಲ್ಲಾ ಪೊಲೀಸ್ ಠಾಣೆಗಳು, ಸಿಎಆರ್, ಕೆಎಸ್‌ಆರ್‌ಪಿ, ಅಶ್ವಾರೋಹಿದಳ, ವಿಧ್ವಂಸಕ ಕೃತ್ಯಗಳ ಪತ್ತೆ ಮತ್ತು ನಿಗ್ರಹದಳ ಹಾಗೂ ರಾಜ್ಯ ಗುಪ್ತ ವಾರ್ತಾ ವಿಭಾಗ (ಸ್ಟೇಟ್ ಇಂಟೆಲಿಜೆನ್ಸ್)ದ ಮುಖ್ಯಸ್ಥರೊಂದಿಗೆ ನಿರಂತರ ಸಮಾಲೋಚನೆ ನಡೆಸುತ್ತಿದ್ದಾರೆ. ಮೈಸೂರು ನಗರದ ಪೊಲೀಸರೊಂದಿಗೆ ಜಿಲ್ಲಾ ಪೊಲೀಸ್ ಘಟಕ, ದಕ್ಷಿಣ ವಲಯದ ಪೊಲೀಸ್ ಠಾಣೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ಪಡೆದು ಭದ್ರತೆಗೆ ನಿಯೋಜಿಸಲು ಪ್ಲಾನ್ ಮಾಡುತ್ತಿರುವ ಪೊಲೀಸ್ ಆಯುಕ್ತ, ಅರಮನೆ ಭದ್ರತಾ ವಿಭಾಗದ ಅಧಿಕಾರಿಗಳಿಗೂ ಸೂಚನೆ ನೀಡಿದ್ದಾರೆ.

ಕಳೆದ ಎರಡು ವರ್ಷ ಕೋವಿಡ್ ಪರಿಸ್ಥಿತಿಯಿಂದಾಗಿ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಿಸಿದ್ದರಿಂದ ಹೆಚ್ಚು ಜನರು ಭಾಗಿಯಾಗಿರಲಿಲ್ಲ. ಆದರೆ ಈ ಬಾರಿ ಅದ್ಧೂರಿಯಾಗಿ ಆಚರಿಸಲು ಸರ್ಕಾರ ನಿರ್ಧರಿಸಿರುವುದರಿಂದ ದೇಶ–ವಿದೇಶಗಳಿಂದಲೂ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಮೈಸೂರಿಗೆ ಆಗಮಿಸುವ ನಿರೀಕ್ಷೆ ಇರುವ ಕಾರಣ, ನೂಕು–ನುಗ್ಗಲು ನಿಯಂತ್ರಿಸಿ ಅಹಿತಕರ ಘಟನೆಗಳಾಗದಂತೆ ಎಚ್ಚರ ವಹಿಸಲು ಸರ್ವ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.



ಅರಮನೆ ಒಳ ಹಾಗೂ ಹೊರ ಆವರಣ, ಜಂಬೂ ಸವಾರಿ ಮಾರ್ಗ, ಪಂಜಿನ ಕವಾಯತು ಮೈದಾನ, ಚಾಮುಂಡಿಬೆಟ್ಟ, ಮೈಸೂರಿನ ಪ್ರಮುಖ ರಸ್ತೆ ಸರ್ಕಲ್‌ಗಳ ಸಿಸಿ ಕ್ಯಾಮರಾ, ಬೀದಿ ದೀಪಗಳನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಲಾಗುತ್ತಿದ್ದು, ದಸರಾ ಮಹೋತ್ಸವದ ಉದ್ಘಾಟನೆ, ವಸ್ತುಪ್ರದರ್ಶನ, ಆಹಾರ ಮೇಳ, ಕುಸ್ತಿ, ಯುವ ಸಂಭ್ರಮ, ಯುವ ದಸರಾ, ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿ ಮೆಟಲ್ ಡೋರ್ ಡಿಟೆಕ್ಟರ್, ಸಿಸಿ ಕ್ಯಾಮರಾ ಅಳವಡಿಸುವುದು, ಶ್ವಾನದಳದಿಂದ ಪರಿಶೀಲನೆ, ಪ್ರವೇಶ, ನಿರ್ಗಮನ ಸ್ಥಳಗಳಲ್ಲಿ ಕಟ್ಟೆಚ್ಚರ ವಹಿಸಲು ಪೊಲೀಸರು ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಹೋಟೆಲ್, ಲಾಡ್ಜ್, ಸರ್ವೀಸ್ ಅಪಾರ್ಟ್‌ಮೆಂಟ್‌ಗಳು, ಪಿಜಿಗಳು, ಪ್ರವಾಸಿ ತಾಣಗಳು, ಸಾರ್ವಜನಿಕರು ಹೆಚ್ಚಾಗಿ ಸೇರುವ ಬಸ್, ರೈಲು ನಿಲ್ದಾಣ, ಮಾಲ್‌ಗಳು, ಸಿನೆಮಾ ಮಂದಿರಗಳು, ವಾಣಿಜ್ಯ ಕೇಂದ್ರ, ಮಾರುಕಟ್ಟೆಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮರಾ ಮಾನಿಟರ್ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಮಾಡುವಂತೆ ಪೊಲೀಸ್ ಆಯುಕ್ತರು ಸೂಚಿಸಿದ್ದಾರೆ.

ದಸರಾ ಆರಂಭವಾಗುತ್ತಿದ್ದಂತೆಯೇ ಮೈಸೂರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳ ಚೆಕ್‌ಪೋಸ್ಟ್‌ಗಳಲ್ಲಿ ದಿನದ 24 ಗಂಟೆಯೂ ಬರುವ ಮತ್ತು ಹೋಗುವ ವಾಹನಗಳ ಮೇಲೆ ನಿಗಾ ಇರಿಸುವುದು, ರೌಡಿಗಳ ಪರೇಡ್ ಮಾಡಿ ಸೂಕ್ತ ತಿಳುವಳಿಕೆ ನೀಡುವುದು, ವಿಧ್ವಂಸಕ ಕೃತ್ಯಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸುವತ್ತ ಈಗಾಗಲೇ ಪೊಲೀಸರು ಪ್ರಕ್ರಿಯೆ ಆರಂಭಿಸಿದ್ದಾರೆ. ಜಿಲ್ಲಾಡಳಿತದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ದಸರಾ ಕಾರ್ಯಕ್ರಮಗಳು, ಮುಖ್ಯ ಅತಿಥಿಗಳು, ಹೆಸರಾಂತ ಕಲಾವಿದರು, ಗಣ್ಯರು, ಅತಿಗಣ್ಯರು ಭಾಗವಹಿಸುವ ಬಗ್ಗೆ ಮಾಹಿತಿ ಕಲೆ ಹಾಕುತ್ತಿರುವ ಪೊಲೀಸರು, ಮೈಸೂರಿನಲ್ಲಿ ವಾಸ್ತವ್ಯ ಹೂಡಿರುವ ವಿದೇಶಿಗರು, ವ್ಯಾಸಂಗ ಮಾಡುತ್ತಿರುವ ವಿದೇಶಿ ವಿದ್ಯಾರ್ಥಿಗಳ ಮೇಲೂ ನಿಗಾ ವಹಿಸುತ್ತಿದ್ದಾರೆ.

ರಾಜ್ಯಪಾಲರು, ಮುಖ್ಯಮಂತ್ರಿ, ಕೇಂದ್ರ ಸಚಿವರು, ಹೈಕೋರ್ಟ್, ಸುಪ್ರೀಂಕೋರ್ಟ್ ನ್ಯಾಯಾಧೀಶರು ಸೇರಿದಂತೆ ಅತಿಗಣ್ಯರು ಬಂದಾಗ ಸುಗಮ ಸಂಚಾರ, ವಾಸ್ತವ್ಯ, ಸುರಕ್ಷತೆಗೆ ಪೂರ್ವ ಸಿದ್ಧತೆ ಮಾಡಿಕೊಂಡು ಎಲ್ಲೂ ಲೋಪವಾಗದಂತೆ ಎಚ್ಚರ ವಹಿಸಿ ಶಾಂತಿಯುತವಾಗಿ ದಸರಾ ಮಹೋತ್ಸವ ಯಶಸ್ವಿಯಾಗಿ ನಡೆಯಲು ಇನ್ನಿಲ್ಲದ ವ್ಯವಸ್ಥೆ ಮಾಡಲು ಪೊಲೀಸ್ ಘಟಕಗಳ ಅಧಿಕಾರಿಗಳು ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಅದೇ ರೀತಿ ಹೊರ ಜಿಲ್ಲೆಗಳಿಂದ ಭದ್ರತೆಗಾಗಿ ಬರುವ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳಿಗೆ ದಸರಾ ಕರ್ತವ್ಯದ ಬಗ್ಗೆ ವಿವರಣೆ ನೀಡಿ ಜವಾಬ್ದಾರಿ ವಹಿಸಲು ಪ್ಲಾನ್ ಮಾಡಲಾಗುತ್ತಿದೆ. ಇಷ್ಟರಲ್ಲೇ ರಾಜ್ಯಮಟ್ಟದ ಹಿರಿಯ ಪೊಲೀಸ್ ಅಧಿಕಾರಿಗಳು ಮೈಸೂರಿನಲ್ಲಿ ಸಭೆ ನಡೆಸಲಿದ್ದು, ಭದ್ರತಾ ಸಿದ್ಧತೆ ಪರಿಶೀಲಿಸುವರು.

ಮೈಸೂರು ದಸರಾದಲ್ಲಿ ಪಾಲ್ಗೊಳ್ಳುವ ಸಂಭ್ರಮದಲ್ಲಿದ್ದ ಅರಣ್ಯ ಸಚಿವ ಉಮೇಶ್ ಕತ್ತಿ; ಈಗ ನೆನಪಷ್ಟೇ

ಮೈಸೂರು,ಸೆ.7(ಎಂಟಿವೈ)– ಕಳೆದ ರಾತ್ರಿ ಬೆಂಗಳೂರಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾದ ಅರಣ್ಯ ಸಚಿವ ಉಮೇಶ್ ಕತ್ತಿ ಅವರು ಇಂದಿಗೆ ಸರಿಯಾಗಿ(ಆ.7) ಒಂದು ತಿಂಗಳ ಹಿಂದೆ ದಸರಾ ಗಜಪಡೆಯ ಗಜಪಯಣದಲ್ಲಿ ಪಾಲ್ಗೊಂಡಿದ್ದರು. ಕುಟುಂಬ ಸದಸ್ಯರೊಂದಿಗೆ ಮೈಸೂರು ಪ್ರವಾಸ ಕೈಗೊಂಡಿದ್ದ ಅವರು, ನಾಗರಹೊಳೆ, ಬಂಡೀಪುರ ಅರಣ್ಯದಲ್ಲಿ ಸಫಾರಿ ಮೂಲಕ ವಿಹರಿಸಿದ್ದರು.

ಆ.7ರಂದು ಹುಣಸೂರು ತಾಲೂಕಿನ ವೀರನಹೊಸಳ್ಳಿ ಗೇಟ್ ಬಳಿ ನಡೆದ ಗಜಪಯಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಚಿವ ಉಮೇಶ್ ಕತ್ತಿ, ಇದುವರೆಗೂ ನಾನು ಶಾಸಕನಾಗಿ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದೆ. ಆದರೆ ಈ ಬಾರಿ ಅರಣ್ಯ ಸಚಿವನಾಗಿ ಪಾಲ್ಗೊಳ್ಳುತ್ತೇನೆ ಎಂದು ಹೇಳುವ ಮೂಲಕ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಇಂಗಿತ ವ್ಯಕ್ತಪಡಿಸಿದ್ದರು. ಆದರೆ ಕಳೆದ ರಾತ್ರಿ ಅವರು ಇಹಲೋಕ ತ್ಯಜಿಸಿದ್ದಾರೆ. ದಸರಾ ಮಹೋತ್ಸವದಲ್ಲಿ ಸಚಿವನಾಗಿ ಪಾಲ್ಗೊಳ್ಳುವ ಅವರ ಕನಸು ಕನಸಾಗಿಯೇ ಉಳಿದು ಹೋಯಿತು.

ಮಂತ್ರಿಯಾಗಿ ಇದೇ ಮೊದಲ ಬಾರಿ ದಸರಾ ಗಜಪಡೆ ಸ್ವಾಗತ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದಕ್ಕೆ ಖುಷಿಯಾಗಿದೆ. ಆನೆಗಳ ಮಾವುತರು, ಕಾವಾಡಿಗಳ ಬೇಡಿಕೆಗೆ ಸರ್ಕಾರ ಸಮ್ಮತಿಸಿದೆ. ಎಲ್ಲಾ ಸಮಸ್ಯೆಗಳು ನಿವಾರಣೆಯಾಗಿದೆ. ದಸರಾ ಮಹೋತ್ಸವದ ಯಶಸ್ಸಿಗಾಗಿ ಆನೆಗಳ ಮಾವುತರು, ಕಾವಾಡಿಗಳು ಶ್ರಮಿಸುತ್ತಾರೆ ಎಂದು ಭರವಸೆ ನೀಡಿದ್ದರು. ಅರಣ್ಯ, ವನ್ಯಜೀವಿಗಳ ಬಗ್ಗೆ ಹೆಚ್ಚಿನ ಒಲವು ಹೊಂದಿದ್ದ ಉಮೇಶ್ ಕತ್ತಿ ನಾಗರಹೊಳೆ, ಬಂಡೀಪುರ, ಕಬಿನಿ ಹಿನ್ನೀರಿನ ಅರಣ್ಯ, ಬಿಳಿಗಿರಿರಂಗನಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಕ್ಯಾತೇಶ್ವರ ಗುಡಿ ಅರಣ್ಯ, ಮಲೆ ಮಹಾದೇಶ್ವರ ವನ್ಯಧಾಮ, ಕಾವೇರಿ ವನ್ಯಧಾಮದಲ್ಲೂ ವಾಸ್ತವ್ಯ ಹೂಡಿ ಅರಣ್ಯ ಪ್ರದೇಶದಲ್ಲಿ ವಿಹರಿಸಿದ್ದರು.



ಕಳೆದ ತಿಂಗಳು ನಡೆದ ಗಜಪಯಣ ಕಾರ್ಯಕ್ರಮದಲ್ಲಿ ಸಚಿವ ಉಮೇಶ್ ಕತ್ತಿ ಪಾಲ್ಗೊಂಡಿದ್ದರು.

ಸಂತಾಪ: ಅರಣ್ಯ ಸಚಿವ ಉಮೇಶ್ ಕತ್ತಿ ಅವರ ಆತ್ಮಕ್ಕೆ ಶಾಂತಿ ಕೋರಿ ಇಂದು ಬೆಳಗ್ಗೆ ಮೈಸೂರು ಅರಣ್ಯ ಭವನದಲ್ಲಿ ಸಿಬ್ಬಂದಿ ಮೌನಾಚರಣೆ ಮೂಲಕ ಸಂತಾಪ ವ್ಯಕ್ತಪಡಿಸಿದರು. ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್ ಹಾಗೂ ಕೆ.ಕಮಲ ಕರಿಕಾಳನ್ ಸೇರಿದಂತೆ ಹಿರಿಯ ಅಧಿಕಾರಿಗಳಿಂದ ಸಿಬ್ಬಂದಿಗಳವರೆಗೆ ಗೌರವ ಸಮರ್ಪಿಸಿದರು.

ಅರಮನೆ ಅಖಾಡದಲ್ಲಿ ಕಾಳಗಕ್ಕೆ ಸಜ್ಜಾಗುತ್ತಿರುವ ಜಗ ಜಟ್ಟಿಗಳು!



2019ರಲ್ಲಿ ಮೈಸೂರಿನ ಬಲರಾಮ ಜಟ್ಟಿ ಮತ್ತು ಚನ್ನಪಟ್ಟಣದ ನರಸಿಂಹ ಜಟ್ಟಿ ಹಾಗೂ ಚಾಮರಾಜನಗರದ ಗಿರೀಶ್ ಜಟ್ಟಿ ಮತ್ತು ಬೆಂಗಳೂರಿನ ನಾರಾಯಣ ಜಟ್ಟಿ ನಡುವೆ ಕಾಳಗ ನಡೆದಿತ್ತು.

ಎ. ಗಣೇಶ್

ಮೈಸೂರು, ಸೆ.7– ವಿಜಯದಶಮಿ ದಿನದೊಂದು ಅರಮನೆಯಲ್ಲಿ ನಡೆಯುವ ವಜ್ರಮುಷ್ಠಿ ಕಾಳಗವು ಪ್ರಮುಖ ಆಕರ್ಷಣೆಯಾಗಿದ್ದು, ಈಗಾಗಲೇ ಮೈಸೂರಿನ ಜಟ್ಟಿಗಳು ಕಸರತ್ತು ಆರಂಭಿಸಿದ್ದಾರೆ.

ಮೈಸೂರು ದಸರಾ ಎಂದ ತಕ್ಷಣ ನೆನಪಿಗೆ ಬರುವುದು ವಿಜಯದಶಮಿ ದಿನ ನಡೆಯುವ ವಿಶ್ವವಿಖ್ಯಾತ ಜಂಬೂ ಸವಾರಿ ಒಂದಾದರೆ, ಮತ್ತೊಂದೆಡೆ ಅದೇ ದಿನ ಜಟ್ಟಿಗಳು ನೆತ್ತರು ಹರಿಸುವ ವಜ್ರಮುಷ್ಠಿ ಕಾಳಗವಾಗಿದ್ದು, ಇದಕ್ಕಾಗಿ ಜಟ್ಟಿಗಳು ಈಗಾಗಲೇ ತಯಾರಿ ನಡೆಸುತ್ತಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ದಸರಾ ಮಹೋತ್ಸವ ಅತ್ಯಂತ ಸರಳವಾಗಿ ನಡೆದಿದ್ದು, ಅನೇಕ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿತ್ತು. ಅವುಗಳಲ್ಲಿ ವಜ್ರಮುಷ್ಠಿ ಕಾಳಗವು ಒಂದು. ಯಾವುದೇ ಕ್ಷಣದಲ್ಲಾದರೂ ಅರಮನೆಯಿಂದ ಬುಲಾವ್ ಬರಬಹುದು ಎಂದು ಜಟ್ಟಿಗಳು ಮಾತ್ರ ಎರಡು ವರ್ಷವೂ ತಮ್ಮ ಕಸರತ್ತು ನಿಲ್ಲಿಸದೆ, ತಮ್ಮ ತಯಾರಿ ನಡೆಸಿದ್ದರು. ಆದರೆ, ಕೊರೊನಾ ಕಂಟಕದಿಂದ ಅದು ನಡೆಯಲೇ ಇಲ್ಲ.

ಈ ಬಾರಿ ಸರ್ಕಾರ ಅದ್ಧೂರಿ ದಸರಾ ಆಚರಿಸಲು ನಿರ್ಧರಿಸಿ, ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಬೆಂಗಳೂರಿನ ವಿಧಾನಸೌಧದಲ್ಲಿ ಉನ್ನತ ಮಟ್ಟದ ಸಭೆ ನಡೆಸಿ, ಅಧಿಕಾರಿಗಳಿಗೆ ಅದ್ಧೂರಿ ದಸರಾ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಲು ಸೂಚಿಸಿದ್ದರು. ಅದರಂತೆ ಎಲ್ಲಾ ದಸರಾ ಉಪಸಮಿತಿಗಳಿಂದ ಚಟುವಟಿಕೆಗಳು ಚುರುಕುಗೊಂಡಿದೆ. ಇತ್ತ ಮೈಸೂರಿನ ಜಟ್ಟಿಗಳು ವರಮಹಾಲಕ್ಷ್ಮೀ ಹಬ್ಬದಂದು ವಿಶೇಷ ಪೂಜೆ ಸಲ್ಲಿಸಿ, ತಮ್ಮ ಕಸರತ್ತು ಆರಂಭಿಸಿದ್ದಾರೆ.

2019ರ ದಸರಾ ಮಹೋತ್ಸವದಲ್ಲಿ ಕಡೆಯ ಬಾರಿ ವಜ್ರಮುಷ್ಠಿ ಕಾಳಗ ನಡೆದಿದ್ದು, ಮೈಸೂರು, ಚಾಮರಾಜನಗರ, ಚನ್ನಪಟ್ಟಣ ಮತ್ತು ಬೆಂಗಳೂರಿನ ಜಟ್ಟಿಗಳು ಕಾಳಗದಲ್ಲಿ ಭಾಗವಹಿಸಿದ್ದರು. ಮೈಸೂರಿನ ಬಲರಾಮ ಜಟ್ಟಿ ಮತ್ತು ಚನ್ನಪಟ್ಟಣದ ನರಸಿಂಹ ಜಟ್ಟಿ ಹಾಗೂ ಚಾಮರಾಜನಗರದ ಗಿರೀಶ್ ಜಟ್ಟಿ ಮತ್ತು ಬೆಂಗಳೂರಿನ ನಾರಾಯಣ ಜಟ್ಟಿ ನಡುವೆ ಕಾಳಗ ನಡೆದಿತ್ತು. ಅದರಲ್ಲಿ ಬಲರಾಮ ಜಟ್ಟಿ, ನಾರಾಯಣ್ ಜಟ್ಟಿ ತಮ್ಮ ಎದುರಾಳಿಗಳ ತಲೆಯಲ್ಲಿ 30 ಸೆಕೆಂಡ್‌ನಲ್ಲಿಯೇ ನೆತ್ತರನ್ನು ಚಿಮ್ಮಿಸಿದ್ದರು. ನಂತರ ಜಂಬೂ ಸವಾರಿ ಅದ್ಧೂರಿಯಾಗಿ ಜರುಗಿತ್ತು. ಮೈಸೂರು ಅರಮನೆಯಲ್ಲಿ ನಡೆಯುವ ವಜ್ರಮುಷ್ಠಿ ಕಾಳಗದಲ್ಲಿ ಪೈಲ್ವಾನ್‌ಗಳು ಭಾಗವಹಿಸುವುದೆಂದರೆ, ಒಂದು ಪ್ರತಿಷ್ಠೆಯಾಗಿದ್ದು, ಪ್ರತಿ ಬಾರಿಯೂ ಮೈಸೂರು, ಚಾಮರಾಜನಗರ, ಚನ್ನಪಟ್ಟಣ ಮತ್ತು ಬೆಂಗಳೂರಿನ ಪೈಲ್ವಾನ್‌ಗಳಿಂದ ಭಾರೀ ಪೈಪೋಟಿ ನಡೆಯುತ್ತದೆ. ವಜ್ರಮುಷ್ಠಿ ಕಾಳಗದಲ್ಲಿ 4 ಮಂದಿ ಪೈಲ್ವಾನರು, 6 ಮಂದಿ ಉಸ್ತಾದ್, ಇಬ್ಬರು ಜಸ್ಬಂದಿಸ್(ರೆಫರಿಗಳು) ಇರಲಿದ್ದಾರೆ.

ಸುಣ್ಣದಕೇರಿಯ ಮೈಸೂರಿನ ಹಿರಿಯ ಜಟ್ಟಿ ಟೈಗರ್ ಬಾಲಾಜಿ ಅವರು ತಮ್ಮ ಪುತ್ರರಾದ ಪೈಲ್ವಾನ್ ಬಲರಾಮ್ ಜಟ್ಟಿ ಮತ್ತು ಪೈಲ್ವಾನ್ ವಿಷ್ಣು ಬಾಲಾಜಿ ಜಟ್ಟಿ ಅವರಿಗೆ ಜಟ್ಟಿ ಕುಸ್ತಿಯ ತರಬೇತಿ ಆರಂಭಿಸಿದ್ದಾರೆ.

ಬೆಳಗ್ಗೆ 3.30ರಿಂದ ಕಸರತ್ತು : 2019ರ ವಜ್ರಮುಷ್ಠಿ ಕಾಳಗದಲ್ಲಿ ಬಲರಾಮ್ ಜಟ್ಟಿ ವಜ್ರಮುಷ್ಠಿ ಕಾಳಗದಲ್ಲಿ ಭಾಗವಹಿಸಿ ಅವರ ಎದುರಾಳಿಯ ತಲೆಯಲ್ಲಿ ನೆತ್ತರು ಹರಿಸಿ ಯಶಸ್ವಿ ಸಾಹಸ ಮೆರೆದಿದ್ದರು. ಈ ಬಾರಿಯ ಜಟ್ಟಿ ಕುಸ್ತಿಗಾಗಿ ಈಗಾಗಲೇ ಕಸರತ್ತು ಆರಂಭಿಸಿದ್ದಾರೆ. ಪ್ರತಿನಿತ್ಯ ಮುಂಜಾನೆ 3.30ಕ್ಕೆ ಎದ್ದು, ತಣ್ಣೀರಿನಲ್ಲಿ ಸ್ನಾನ ಮಾಡಿ ದೇವರಿಗೆ ಪೂಜೆ ಸಲ್ಲಿಸಿದ ನಂತರ ತಮ್ಮ ಮನೆಯ ಮುಂಭಾಗದ ರಸ್ತೆಯಲ್ಲಿ ಕಸರತ್ತು ಆರಂಭಿಸುತ್ತಾರೆ.

ಪೌಷ್ಠಿಕ ಆಹಾರ: ಪೈಲ್ವಾನರು ಕಸರತ್ತು ನಡೆಸುವುದಕ್ಕೆ ತಕ್ಕಂತೆ ಪೌಷ್ಟಿಕ ಆಹಾರವನ್ನು ತೆಗೆದು ಕೊಳ್ಳುತ್ತಾರೆ. ವಜ್ರಮುಷ್ಠಿ ಕಾಳಗದಲ್ಲಿ ಭಾಗವಹಿಸುವ ಜಟ್ಟಿಗಳು ಸಾದಾ ಕುಸ್ತಿ ತಯಾರಿ ನಡೆಸುವುದಕ್ಕಿಂತ ಹೆಚ್ಚಾಗಿ ಇದಕ್ಕೆ ಕಸರತ್ತು ನಡೆಸಲಿದ್ದು, ಒಬ್ಬ ಪೈಲ್ವಾನ್‌ಗೆ 2.5 ಲೀ ಹಾಲು, ನಿಂಬೆಹಣ್ಣಿನ ಜ್ಯೂಸ್, ಡ್ರೈಫ್ರೂಟ್ ಪ್ರತಿ ದಿನ ಸೇವಿಸುತ್ತಾರೆ. ರಾತ್ರಿ ಮಲಗುವ ಮುನ್ನ ಹಾಲಿಗೆ ಸಕ್ಕರೆ ಮತ್ತು ತುಪ್ಪವನ್ನು ಬೆರೆಸಿ ಕುಡಿಯುತ್ತಾರೆ ಇದರೊಟ್ಟಿಗೆ ಇತರೆ ಪುಷ್ಠಿದಾಯಕ ಆಹಾರವನ್ನು ಸೇವಿಸಲಿದ್ದು, ಒಂದು ದಿನಕ್ಕೆ 1000 ರೂ. ವೆಚ್ಚ ತಗುಲಲಿದೆ. ಈ ಬಾರಿಯ ದಸರಾ ಮಹೋತ್ಸವದಲ್ಲಿ ವಜ್ರಮುಷ್ಠಿ ಕಾಳಗ ನಡೆಯಲಿದ್ದು, ವಿಜಯದಶಮಿಗೆ ಕೆಲವೇ ದಿನಗಳು ಬಾಕಿ ಇರುವಂತೆ ಹಿರಿಯ ಜಟ್ಟಿಗಳು ಜೋಡಿಗಳನ್ನು ಆಯ್ಕೆ ಮಾಡಿ ಮಹಾರಾಜರ ಮುಂದೆ ನಿಲ್ಲಿಸಿ, ಅವರ ಆಶೀರ್ವಾದ ಪಡೆದ ನಂತರ ಕೇಶ ಮುಂಡನ ಮಾಡಿಸಿಕೊಂಡು ಕಂಕಣ ಧರಿಸಿ ಕೆಮ್ಮಣ್ಣು, ಅರಿಶಿನ, ಕುಂಕುಮ, ಹೂಗಳು ಮತ್ತು ಇತರೆ ದೈವಿಕ ವಸ್ತುಗಳನ್ನು ಬಳಸಿ ಸಿದ್ಧಪಡಿಸಿರುವ ವಜ್ರಮುಷ್ಠಿ ಕಾಳಗದ ಅಖಾಡಕ್ಕೆ ವಜ್ರಮುಷ್ಠಿ ಧರಿಸಿಕೊಂಡು ಧುಮುಕಲಿದ್ದಾರೆ.



‘ದಸರಾ ಪಂಜ ಕುಸ್ತಿ’ ಆಯೋಜನೆ, ಪೈಲ್ವಾನರ ಜೋಡಿ ಕಟ್ಟುವ ಮುನ್ನವೇ ಪೋಸ್ಟರ್ ಬಿಡುಗಡೆಗೆ ನಿರ್ಧಾರ



ಮೈಸೂರು, ಸೆ.7(ಎಂಕೆ)– ನಾಡಹಬ್ಬ ಮೈಸೂರು ದಸರಾ ಕುಸ್ತಿ ಜೊತೆ ಜೊತೆಗೆ ‘ದಸರಾ ಪಂಜ ಕುಸ್ತಿ(ಆರ್ಮ್ ರಸ್ಲಿಂಗ್)’ ಆಯೋಜನೆ, ನಾಡಕುಸ್ತಿಗೆ ಪೈಲ್ವಾನರ ಜೋಡಿ ಕಟ್ಟುವ ಮುನ್ನವೇ ಪೋಸ್ಟರ್ ಬಿಡುಗಡೆ ಮಾಡಲು ನಿರ್ಧರಿಸಲಾಯಿತು.

ದಸರಾ ಕುಸ್ತಿ ಉಪ ಸಮಿತಿಯ ಉಪ ವಿಶೇಷಾಧಿಕಾರಿಯೂ ಆದ ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕಿ ಡಾ.ಬಿ.ಆರ್.ನಂದಿನಿ ನೇತೃತ್ವದಲ್ಲಿ ಹಿರಿಯ ಕುಸ್ತಿ ತರಬೇತುದಾರರು, ಪೈಲ್ವಾನರು ಹಾಗೂ ಕ್ರೀಡಾ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ದಸರಾ ಕುಸ್ತಿ ಯಶಸ್ವಿ ಕುರಿತು ಚರ್ಚಿಸಲಾಯಿತು. ದಸರಾ ಉದ್ಘಾಟನೆಗೆ ಒಂದು ವಾರ ಬಾಕಿ ಇರುವಂತೆ ನಾಡಕುಸ್ತಿಗೆ ಪೈಲ್ವಾನರ ಜೋಡಿ ಕಟ್ಟಬೇಕು. ಅದಕ್ಕೂ ಮುಂಚಿತವಾಗಿ ಹೆಚ್ಚಿನ ಪ್ರಚಾರ ನೀಡುವ ದೃಷ್ಟಿಯಿಂದ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳಿಂದ ದಸರಾ ಕುಸ್ತಿ ಪೋಸ್ಟರ್ ಬಿಡುಗಡೆ ಮಾಡಬೇಕು ಎಂದು ನಿರ್ಧರಿಸಲಾಯಿತು. 2019ರ ದಸರಾ ಕುಸ್ತಿ ಜೊತೆಗೆ ಮೊದಲ ಬಾರಿ ನಡೆದಿದ್ದ ‘ದಸರಾ ಪಂಜ ಕುಸ್ತಿ’ ಪಂದ್ಯಾವಳಿಯನ್ನು ಮುಂದುವರೆಸಿಕೊಂಡು ಹೋಗುವ ದೃಷ್ಟಿಯಿಂದ ಒಂದು ದಿನ ಕುಸ್ತಿ ಅಖಾಡದಲ್ಲಿಯೇ ಆಯೋಜಿಸುವುದು. ದಸರಾ ಕೇಸರಿ, ದಸರಾ ಕಂಠೀರವ, ದಸರಾ ಕುಮಾರ ಹಾಗೂ ದಸರಾ ಕಿಶೋರಿ ಪ್ರಶಸ್ತಿಗಳಿಗೆ ಕುಸ್ತಿ ಪಂದ್ಯಾವಳಿ ನಡೆಸಲು ಸೂಕ್ತ ಸಿದ್ಧತೆ ಮಾಡಿಕೊಳ್ಳಲು ನಿರ್ಣಯಿಸಲಾಯಿತು.

ಜೊತೆಗೆ ಮೇಯರ್ ಕಪ್, ಝಡ್ ಪಿ ಕಪ್‌ಗಳಿಗೂ ಕುಸ್ತಿ ನಡೆಯಲಿದೆ. ದಸರಾ ಪಂಜ ಕುಸ್ತಿಯಲ್ಲಿ ಪುರುಷರು, ಮಹಿಳೆಯರ ವಿಭಾಗದ ಜೊತೆಗೆ ವಿಶೇಷಚೇತನರಿಗೂ ಅವಕಾಶ ನೀಡಲಾಗುವುದು. ಸೆ.26 ರಿಂದ ಅ.1ರವರೆಗೆ ದಸರಾ ಕುಸ್ತಿ ಪಂದ್ಯಗಳನ್ನು ನಡೆಸಲಿದ್ದು, ಅದರ ನಡುವೆ ಒಂದು ದಿನ ಪಂಜ ಕುಸ್ತಿ ನಡೆಸುವುದು ಸೂಕ್ತವೆಂದು ತೀರ್ಮಾನಕ್ಕೆ ಬರಲಾಯಿತು. ಸಭೆಯಲ್ಲಿ ಕುಸ್ತಿ ಸಮಿತಿ ಕಾರ್ಯದರ್ಶಿ ಹರ್ಷ, ಕುಸ್ತಿ ತರಬೇತುದಾರರಾದ ರಂಗಪ್ಪ, ಬನ್ನೂರು ರವಿ, ಮಲ್ಲುಸ್ವಾಮಿ, ಪಂಜಕುಸ್ತಿ ತರಬೇತುದಾರ ವಿಶ್ವನಾಥ್, ಮೈಸೂರು ಕೃಷ್ಣ, ಸಿದ್ದರಾಜು, ಕೇಶವ್‌ರಾಜ್, ಅಮೃತ್ ಪುರೋಹಿತ್ ಮತ್ತಿತರರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಎಲ್ಐಸಿ ಏಜೆಂಟರ ಪ್ರತಿಭಟನೆ



ತಿ.ನರಸೀಪುರ. ಸೆ.7 – ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಭಾರತೀಯ ಜೀವ ವಿಮಾ ಪ್ರತಿನಿಧಿಗಳು ಪಟ್ಟಣದ ಉಪಗ್ರಹ ಶಾಖೆ ಮುಂಭಾಗ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಭಾರತೀಯ ಜೀವವಿಮಾ ನಿಗಮದ ಪ್ರತಿನಿಧಿಗಳ ಒಕ್ಕೂಟದ ಅಧ್ಯಕ್ಷ ಎಂ.ರಾಜು, ಎಲ್ಲಾ ವಿಮಾ ಪ್ರತಿನಿಧಿಗಳು ಒಂದೇ ಎಂಬ ಘೋಷಣೆ ಯೊಂದಿಗೆ ದೇಶದಾದ್ಯಂತ 2048 ಶಾಖೆಗಳಲ್ಲಿ ಎಲ್ಐಸಿ ಪ್ರತಿನಿಧಿಗಳು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಧರಣಿ ನಡೆಸುತ್ತಿದ್ದಾರೆ. ಇಂದು ಶಾಖೆಯಲ್ಲಿ ಯಾವುದೇ ವ್ಯವಹಾರ ಮಾಡದೇ ಪ್ರತಿನಿಧಿಗಳ ವಿಶ್ರಾಂತಿ ದಿವಸ ಎಂದು ಆಚರಿಸಲಾಗುತ್ತಿದೆ ಎಂದರು.

ಜೀವ ವಿಮಾ ನಿಗಮದ ಕೆಲವು ನಿಯಮಗಳಿಂದ ಪ್ರತಿನಿಧಿಗಳಿಗೆ ಹಾಗೂ ಪಾವತಿದಾರರಿಗೆ ಸಮಸ್ಯೆಯಾಗುತ್ತಿದೆ. ಪ್ರೀಮಿಯಂ ಮೇಲೆ ವಿಧಿಸಿರುವ ಜಿಎಸ್‌ಟಿ ರದ್ದಾಗಬೇಕು. ಪಾಲಿಸಿದಾರರು ಪಡೆಯುವ ಸಾಲದ ಮೇಲಿನ ಬಡ್ಡಿಯನ್ನು ಕಡಿಮೆಗೊಳಿಸಬೇಕು. ಕ್ಲಬ್ ಸದಸ್ಯರಿಗೆ ನೀಡುವ ಮೆಡಿಕ್ಲೇಮ್ ಎಲ್ಲಾ ಪ್ರತಿನಿಧಿಗಳಿಗೆ ವಿಸ್ತರಿಸಿ ಹಾಗೂ ಪಿಂಚಣಿ ಸೌಲಭ್ಯ ಪ್ರತಿನಿಧಿಗಳಿಗೆ ಒದಗಿಸುವಂತೆ ಅವರು ಒತ್ತಾಯಿಸಿದರು.

ಪಾಲಿಸಿದಾರರ ಬೋನಸ್ ಹೆಚ್ಚಿಸಬೇಕು, ಪಾಲಿಸಿದಾರರ ಸಾಲ ಮತ್ತು ಪ್ರೀಮಿಯಂ ವಿಳಂಬದ ಶುಲ್ಕದ ಬಡ್ಡಿ ದರಗಳನ್ನು ಕಡಿಮೆ ಮಾಡಬೇಕು, ಜಿಎಸ್‌ಟಿಯನ್ನು ತೆಗೆಯಬೇಕು, ಪ್ರತಿನಿಧಿಗಳ ಕಲ್ಯಾಣ ರಚನೆ ಮಾಡಬೇಕು, ಗ್ರಾಚ್ಯುಟಿಯನ್ನು ಹೆಚ್ಚಿಸಬೇಕು, ಎಲ್ಲಾ ಪ್ರತಿನಿಧಿಗಳಿಗೆ ಗ್ರೂಪ್ ಮೆಡಿಕಲ್ಸ್ ನೀಡಬೇಕು, ಪಿಂಚಣಿ ಯೋಜನೆ ಜಾರಿಗೆ ತರಬೇಕು, ವಿಮಾ ಪ್ರತಿನಿಧಿಯನ್ನು ವೃತ್ತಿಪರರು ಎಂದು ಗುರುತಿಸಬೇಕು, ವಹಿವಾಟು ಶುಲ್ಕವನ್ನು ಹೆಚ್ಚಿಸಬೇಕು, ನೇರ ಹಾಗೂ ಆನ್‌ಲೈನ್ ವಿಮಾ ಪಾಲಿಸಿಗಳ ಮಾರಾಟ ನಿಲ್ಲಬೇಕು. ವಿಮಾ ಕ್ಷೇತ್ರಕ್ಕೆ ಬರುತ್ತಿರುವ ನೇರ ಬಂಡವಾಳ ರದ್ದು, ಪ್ರತಿನಿಧಿಗಳ ಕಲ್ಯಾಣ ನಿಧಿ ಸ್ಥಾಪನೆ, ಅಪಘಾತ ವಿಮೆ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಭಾರತೀಯ ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟದ ಟಿ.ಸಿ. ಮಾದೇಗೌಡ, ಕೆ.ಪ್ರಕಾಶ್, ಎಚ್. ರಾಜಣ್ಣ, ಶ್ರೀನಿವಾಸ್, ಸೋಮಣ್ಣ, ಮಾದಾಪುರ ಎಂ.ಎಸ್. ಬಸವರಾಜು, ಎಂ.ಎಸ್.ಮಹದೇವಯ್ಯ, ಎಂ.ರಾಜಣ್ಣ ಎಂ.ಆರ್. ನಾಗೇಂದ್ರ ಕೆಂಡಗಣ್ಣ ಸ್ವಾಮಿ, ಎನ್.ಮಹದೇವಸ್ವಾಮಿ, ಸಿ.ಆರ್. ರಂಗಸ್ವಾಮಿ, ವನಜಾಕ್ಷಿ, ಬಿ. ಶಿವಣ್ಣ, ಕೆ.ಎಂ. ವಿನಯ್ ಕುಮಾರ್, ಎನ್. ನಾಗರಾಜು, ಚನ್ನೇಗೌಡ, ಎನ್.ಶಿವಕುಮಾರ್, ರಾಮು, ಎಸ್.ರಂಗೇಗೌಡ, ಸಿ. ಮಹದೇವಯ್ಯ, ಪ.ಪಂ ಮಾಜಿ ಅಧ್ಯಕ್ಷ ವೀರೇಶ್, ಇತರರು ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ಗಾಳಿಪಟ –2 (ಕ): ಮ.1.10ಕ್ಕೆ, ಸಂ.4.05ಕ್ಕೆ, ಲಕ್ಕಿಮ್ಯಾನ್ (ಕ): ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಲವ್ 360 (ಕ): ರಾ.10.40ಕ್ಕೆ, ತಿರುಚಿಟ್ರಂಬಲಂ (ತ): ಮ.1.25ಕ್ಕೆ, ಸಂ.4.10ಕ್ಕೆ, ಕಾರ್ತಿಕೇಯ 2(ತೆ): ರಾ.7.10ಕ್ಕೆ, ಒಟ್ಟು (ಮ): ರಾ.9.55ಕ್ಕೆ.
- ಸ್ಕ್ರೀನ್ 3 ಸೀತಾರಾಮಂ (ತೆ): ಬೆ.10.40ಕ್ಕೆ, ಕ್ಯಾಪ್ಟನ್ (ತ): ಮ.1.45ಕ್ಕೆ, ಕಾರ್ತಿಕೇಯ 2(ತೆ): ಸಂ.4.05ಕ್ಕೆ, ಕೋಬ್ರಾ (ತ): ಸಂ.6.45ಕ್ಕೆ, ಪಥೋಪಥಂ ನೋಟಂಡು (ಮ): ರಾ.9.55ಕ್ಕೆ.
- ಸ್ಕ್ರೀನ್ 4 ಕ್ಯಾಪ್ಟನ್ (ತ): ಬೆ.10.45ಕ್ಕೆ, ಸಂ.4.40ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ, ಕೋಬ್ರಾ (ತ): ಮ.1.10ಕ್ಕೆ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 ಕೋಬ್ರಾ (ಇಂ): ಬೆ.10ಕ್ಕೆ, ಮ.1.40ಕ್ಕೆ, ಸಂ.5.20ಕ್ಕೆ, ರಾ.9ಕ್ಕೆ.
- ಸ್ಕ್ರೀನ್ 2 ಲವ್ 360 (ಕ): ಬೆ.11.20ಕ್ಕೆ, ಬೀಸ್ಟ್ (ಇಂ): ಮ.2.10ಕ್ಕೆ, ರಾ.7.40ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಸಂ.4.30ಕ್ಕೆ, ಕೋಬ್ರಾ (ಇಂ): ರಾ.10ಕ್ಕೆ
- ಸ್ಕ್ರೀನ್ 3 ಗಾಳಿಪಟ 2(ಕ): ಬೆ.10.45ಕ್ಕೆ, ಮ.1.45ಕ್ಕೆ, ಫ್ಯಾಂಟಸಿ (ಕ): ಸಂ.4.50ಕ್ಕೆ, ಪಲ್ತು ಜನ್ವರ್ (ಮ): ರಾ.7.40ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ರಾ.10.10ಕ್ಕೆ.
- ಸ್ಕ್ರೀನ್ 4 ಬೀಸ್ಟ್ (ಇಂ): ಬೆ.10.50ಕ್ಕೆ, ಲವ್ 360 (ಕ): ಮ.1.10ಕ್ಕೆ, ಗಾಳಿಪಟ 2(ಕ): ಸಂ.4ಕ್ಕೆ, ರಾ.7.05ಕ್ಕೆ, ಸೀತಾರಾಮಂ (ತೆ): ರಾ.10.10ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಸ್ಕ್ರೀನ್ 1 ಲೈಗರ್ (ತೆ): ಬೆ.10.45ಕ್ಕೆ, ಲವ್ 360 (ಕ): ಮ.1.30ಕ್ಕೆ, ಲೈಗರ್ (ಕ): ಸಂ.4.05ಕ್ಕೆ, ಧಮಾಕ (ಕ): ಸಂ.6.50ಕ್ಕೆ
- ಸ್ಕ್ರೀನ್ 2 ಗಾಳಿಪಟ 2(ಕ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ, ರಂಗ ರಂಗ ವೈಭವಂಗ (ತೆ): ಸಂ.4.45ಕ್ಕೆ, ಕೋಬ್ರಾ (ತ): ರಾ.9.15ಕ್ಕೆ
- ಸ್ಕ್ರೀನ್ 3 ಕೋಬ್ರಾ (ತ): ಮ.1.30ಕ್ಕೆ, ಸಂ.6.50ಕ್ಕೆ.
- ಸ್ಕ್ರೀನ್ 4 ರಂಗ ರಂಗ ವೈಭವಂಗ (ತೆ): ಬೆ.10.30ಕ್ಕೆ, ಗಾಳಿಪಟ–2 (ಕ): ಮ.1.20ಕ್ಕೆ, ರಾ.7.15ಕ್ಕೆ, ಕೋಬ್ರಾ (ತ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಮ.2.55ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಫ್ಯಾಂಟಸಿ(ಕ): ಬೆ.11ಕ್ಕೆ, ಸರ್ವಸ್ಯ ನಾಟ್ಯಂ (ಕ): ಬೆ.10.10ಕ್ಕೆ, ತಾಜ್‌ಮಹಲ್ 2 (ಕ): ಮ.1.20ಕ್ಕೆ, ಕೋಬ್ರಾ (ತ): ಬೆ.11ಕ್ಕೆ, ಮ.2.40ಕ್ಕೆ, ಸಂ.6.20ಕ್ಕೆ, ರಾ.10ಕ್ಕೆ, ಕೋಬ್ರಾ (ತೆ): ಬೆ.11.15ಕ್ಕೆ, ಸಂ.6.05ಕ್ಕೆ, ಬೀಸ್ಟ್ (ಇಂ): ಬೆ.10.10ಕ್ಕೆ, ಮ.2.15ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಬೆ.10.45ಕ್ಕೆ, ಸಂ.4.30ಕ್ಕೆ, ಸೊಲೊಮಂಟೆ ತೇನೀಚಕಲ್ (ಮ): ರಾ.7.15ಕ್ಕೆ, ಸೀತಾರಾಮಂ (ಹಿಂ): ಮ.3.50ಕ್ಕೆ, ರಂಗ ರಂಗ ವೈಭವಂಗ (ತೆ): ಮ.3.15ಕ್ಕೆ, ರಾ.9.15ಕ್ಕೆ, ಪಲ್ತು ಜನ್ವರ್ (ಮ): ರಾ.9.45ಕ್ಕೆ, ಕಾರ್ತಿಕೇಯ–2 (ತೆ): ಬೆ.9.05ಕ್ಕೆ, ಮ.12.10ಕ್ಕೆ, ಲೈಗರ್ (ಹಿಂ): ಮ.3.20ಕ್ಕೆ, ತಿರುಚಿಟ್ರಂಬಲಂ (ತ): ಮ.12.25ಕ್ಕೆ, ಸಂ.6.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಾಜ್ ಮಹಲ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲೈಗರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೋಬ್ರಾ (ತ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೋಬ್ರಾ (ತ)	4 ಪ್ರದರ್ಶನಗಳು
ಸಂಗಂ	
ರಂಗ ರಂಗ ವೈಭವಂಗ (ತೆ)	4 ಪ್ರದರ್ಶನಗಳು
ಲಿಡೋ	
ಕ್ಯಾಪ್ಟನ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಕೋಬ್ರಾ (ತ)	4 ಪ್ರದರ್ಶನಗಳು

ಭಾರೀ ಮಳೆಗೆ ಹೆಚ್.ಡಿ.ಕೋಟೆ ಬಳಿ ಸೇತುವೆ ಮುಳುಗಡೆ

ತಡೆಗೋಡೆಗಳು ಕುಸಿತ, ಗ್ರಾಮಗಳ ಸಂಪರ್ಕ ಕಡಿತ

●ಮನವಿಗೆ ಸ್ಪಂದಿಸದ ಅಧಿಕಾರಿಗಳು ●ಗ್ರಾಮಸ್ಥರಿಂದಲೇ ಕಸ ತೆರವು



ಹೆಚ್.ಡಿ.ಕೋಟೆ, ಸೆ.7– ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಹೆಬ್ಬಾಳ ಜಲಾಶಯದಲ್ಲಿ ನೀರಿನ ಮಟ್ಟ ಹೆಚ್ಚಾಗಿದ್ದು, ತೊರಳ್ಳಿ ಗ್ರಾಮದ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಭಾರೀ ಮಳೆಯಿಂದ ಹೆಬ್ಬಾಳದ ಜಲಾಶಯದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಹೊಸ ತೊರಳ್ಳಿಗೆ ತೆರಳುವ ಸೇತುವೆ ಮುಳುಗಡೆಯಾಗಿ ಸೇತುವೆಗೆ ನಿರ್ಮಿಸಿರುವ ತಡೆಗೋಡೆಗಳು ನೀರಿನ ರಭಸಕ್ಕೆ ಕುಸಿದು ಸಂಪೂರ್ಣ ಹಾಳಾಗಿವೆ.

ಈ ಸೇತುವೆ ನಿರ್ಮಾಣ ಮಾಡಿ ಬಹಳ ವರ್ಷಗಳಾಗಿದ್ದು, ಈಗ ನೀರಿನ ರಭಸಕ್ಕೆ ತಡೆಗೋಡೆಗಳು ಹಾಳಾಗಿವೆ. ಇದರಿಂದ ವಾಹನ ಸವಾರರು ಸೇತುವೆ ಮೇಲೆ ಸಂಚರಿಸಲು ಭಯಪಡುತ್ತಿದ್ದಾರೆ. ಆದ್ದರಿಂದ ತಕ್ಷಣವೇ ತಡೆಗೋಡೆ ನಿರ್ಮಿಸಿ, ಅಲ್ಲಿಯವರೆಗೂ ಭಾರೀ ವಾಹನ ಸಂಚಾರ ನಿಷೇಧಿಸಬೇಕು. ಮುಂದಿನ ದಿನಗಳಲ್ಲಿ ನೂತನ ಸೇತುವೆಯನ್ನು ನಿರ್ಮಿಸಬೇಕೆಂದು ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಗ್ರಾಮಸ್ಥರು ಒತ್ತಾಯಿಸಿದರು.

ಸೇತುವೆಗೆ ಅಡ್ಡಲಾಗಿ ನಿಂತಿರುವ ಬಿದಿರು ಬಂಬುಗಳು, ಕಸದ ರಾಶಿಯನ್ನು ತೆರವುಗೊಳಿಸಿದರೆ ಸೇತುವೆ ಮೇಲೆ ನೀರು ಹರಿಯುವುದು ಕಮ್ಮಿಯಾಗುತ್ತದೆ ಎಂದು ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿದ್ದ ತಹಸೀಲ್ದಾರ್ ರತ್ನಾಂಬಿಕ ಅವರಿಗೆ ಮನವಿ ಮಾಡಿದರು.

ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ತಹಶೀಲ್ದಾರ್ ಅವರು ತಕ್ಷಣ ಇದನ್ನು ತೆರವುಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಂಜೆಯಾದರೂ ಅಧಿಕಾರಿಗಳು ಬಿದಿರು ಬೊಂಬುಗಳು ಹಾಗೂ ಕಸದ ರಾಶಿಯನ್ನು ತೆರವುಗೊಳಿಸದ ಕಾರಣ, ಗ್ರಾಮಸ್ಥರುಗಳೇ ಸ್ವತಃ ಜೆಸಿಬಿ ಮೂಲಕ ಸೇತುವೆ ಬಳಿ ಇದ್ದ ಬಿದಿರು ಬೊಂಬುಗಳು ಹಾಗೂ ಕಸದ ರಾಶಿ ತೆರವುಗೊಳಿಸಿದರು. ನಂತರ ಸೇತುವೆ ಮೇಲೆ ನೀರು ಕಡಿಮೆಯಾದ ನಂತರ ಸೇತುವೆ ಮೇಲೆ ವಾಹನ ಸಂಚಾರ ಸಾಧ್ಯವಾಯಿತು.

ನಂಜನಗೂಡಲ್ಲಿ ಮಳೆಯಿಂದ ಪುರಾತನ ಗರಡಿ ಮನೆ ಕುಸಿತ

ನಂಜನಗೂಡು, ಸೆ.7– ಮಂಗಳವಾರ ರಾತ್ರಿ ಸುರಿದ ಮಳೆಗೆ ಪಟ್ಟಣದ ಶ್ರೀರಾಂಪುರ ಬಡಾವಣೆಯಲ್ಲಿದ್ದ ಪುರಾತನವಾದ ಗರಡಿ ಮನೆ ಕುಸಿದು ಬಿದ್ದಿದೆ.



ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಸಮೀಪದಲ್ಲಿರುವ ಶ್ರೀರಾಂಪುರದಲ್ಲಿ ಮಂಗಳವಾರ ರಾತ್ರಿ ಸುರಿದ ಮಳೆಗೆ 10 ಜನರ ಗರಡಿ ಮನೆ ಕುಸಿದು ಬಿದ್ದಿದ್ದು, ಯಾರಿಗೂ ಅಪಾಯ ಸಂಭವಿಸಿಲ್ಲ

ಶ್ರೀರಾಂಪುರ ಗ್ರಾಮದ ದೊಡ್ಡ ಯಜಮಾನರಾದ ಕಮಲೇಶ್ ಮಾತನಾಡಿ, ಇತಿಹಾಸವುಳ್ಳ ಈ ಗರಡಿಯಲ್ಲಿ ಸಾಕಷ್ಟು ಪೈಲ್ವಾನ್‌ಗಳು ಸೃಷ್ಟಿಯಾಗಿದ್ದಾರೆ. ಬುಧವಾರ ಮುಂಜಾನೆ ಕುಸಿದು ಬಿದ್ದಿರುವ ವಿಷಯ ತಿಳಿಯಿತು. ಆದ್ದರಿಂದ ನಮ್ಮ ಕ್ಷೇತ್ರದ ಶಾಸಕರಾದ ಹರ್ಷವರ್ಧನ್, ಸಂಸದ ವಿ. ಶ್ರೀನಿವಾಸ್‌ಪ್ರಸಾದ್ ಹಾಗೂ ತಾಲೂಕು ದಂಡಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ನಮಗೆ ಹೊಸದಾಗಿ ಗರಡಿ ಮನೆ ನಿರ್ಮಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಗರಡಿ ಯಜಮಾನರಾದ ಲೋಕೇಶ್, ಶೇಕಿ, ಸುಧಾಕರ್, ವರದರಾಜು, ವೀರಭದ್ರ, ಪ್ರಸನ್ನ, ಹುಲಿಮರಿ ಪ್ರಸಾದ್, ಮಣಿ, ಸುಧಾ ಹಾಗೂ ಪೈಲ್ವಾನ್‌ಗಳು ಇದ್ದರು.

ಗೋವುಗಳನ್ನು ಹತ್ಯೆ ಮಾಡಿ ಮಾಂಸ ಮಾರಾಟ ಮಾಡುತ್ತಿದ್ದ ಇಬ್ಬರ ಸೆರೆ

ತಿ.ನರಸೀಪುರ, ಸೆ.7– ಗೋವುಗಳನ್ನು ಹತ್ಯೆ ಮಾಡಿ ಅಕ್ರಮವಾಗಿ ಮಾಂಸ ಮಾರಾಟ ಮಾಡುತ್ತಿದ್ದ ಆರೋಪಿಗಳನ್ನು ಬಂಧಿಸುವಲ್ಲಿ ಪಟ್ಟಣ ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ಗರ್ಗೇಶ್ವರಿ ಗ್ರಾಮದಲ್ಲಿ ಅಕ್ರಮವಾಗಿ ಹಸು–ಕರುಗಳನ್ನು ಕಡಿದು ಮಾಂಸ ಮಾರಾಟ ಮಾಡುತ್ತಿದ್ದ ಸಲೀಂ ಬಿನ್ ಖಾದರ್ ಹಾಗೂ ಮುನಾಫ್ ಬಿನ್ ಅನ್ವರ್ ಎಂಬುವವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಗರ್ಗೇಶ್ವರಿ ಗ್ರಾಮದ ಎಂ.ಎನ್.ಅಕ್ಕಿಗಿರಣಿ ಎದುರಿನ ಕಾವೇರಿ ನದಿ ತಟದಲ್ಲಿರುವ ಇಲಿಯಾಸ್ ಎಂಬುವರಿಗೆ ಸೇರಿದ ಮಾವಿನ ತೋಪಿನಲ್ಲಿ ಆರೋಪಿಗಳು ದನ–ಕರುಗಳನ್ನು ಹತ್ಯೆ ಮಾಡುತ್ತಿದ್ದು ಅದರ ತಲೆ ಮತ್ತು ಕಾಲುಗಳನ್ನು ನದಿಯ ಒಳಗಡೆ ಎಸೆದು ಜಲ ಮಾಲೀನ್ಯ ಮಾಡುತ್ತಿದ್ದರೆಂದು ತಿಳಿದುಬಂದಿದೆ.

ಖಚಿತ ಮಾಹಿತಿ ಆದರಿಸಿ ಪಿಎಸ್‌ಐ ತಿರುಮಲ್ಲೇಶ್ ನೇತೃತ್ವದಲ್ಲಿ ಪೊಲೀಸರು ಕಾರ್ಯಪ್ರವೃತ್ತರಾಗಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದರು. ಈ ಬಗ್ಗೆ ತಿ.ನರಸೀಪುರ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ. ಕಾರ್ಯಾಚರಣೆಯಲ್ಲಿ ಪಿಡಿಓ ಅಮ್ಜದ್ ಪಾಷ, ಕಾರ್ಯದರ್ಶಿ ಸೌಮ್ಯ, ಗ್ರಾಮಲೆಕ್ಕಿಗ ನಾಗೇಂದ್ರ ಭಾಗವಹಿಸಿದ್ದರು.

ಆತ್ಮಹತ್ಯೆಗೆ ಶರಣಾದ ರೈತನ ಮನೆಗೆ ಧ್ರುವನಾರಾಯಣ್ ಭೇಟಿ



ಮಲ್ಲುಂಡಿ, ಸೆ.7– ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ನಂಜನಗೂಡು ತಾಲೂಕಿನ ಕಂದೇಗಾಲ ಗ್ರಾಮದ ರೈತ ಮಹದೇವಸ್ವಾಮಿ ನಿವಾಸಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ಆರ್. ಧ್ರುವನಾರಾಯಣ್ ಭೇಟಿ ನೀಡಿ ಸಾಂತ್ವನ ಹೇಳಿ, ವೈಯಕ್ತಿಕವಾಗಿ ನೆರವು ನೀಡಿದರು.

ಬಳಿಕ ಮಾತನಾಡಿದ ಅವರು ರೈತರು ಸಾಲಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು. ಸರ್ಕಾರ ರೈತರ ಬಗ್ಗೆ ಕಾಳಜಿ ವಹಿಸಬೇಕು. ಕೇಂದ್ರ, ರಾಜ್ಯ ಸರ್ಕಾರವನ್ನು ಮಲತಾಯಿ ರೀತಿ ನೋಡುತ್ತಿದೆ. ಮಳೆ ಹಾನಿಯಿಂದ ರೈತರ ಫಸಲು ನಾಶವಾಗಿರುವುದಕ್ಕೆ ಪರಿಹಾರ ನೀಡಲು ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವೈಫಲ್ಯದಿಂದ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದರು.

ಸಾಲಸೋಲ ಮಾಡಿ ಬೆಳೆದ ಫಸಲು ಒಂದಡೆ ಕಾಡು ಪ್ರಾಣಿಗಳ ಹಾವಳಿಯಿಂದ ಹಾಳಾಗುತ್ತಿದ್ದು, ಕಾಡಂಚಿನ ಗ್ರಾಮಗಳಿಗೆ ಹೆಚ್ಚಿನ ಆದ್ಯತೆ ನೀಡಿ ರೈತರ ಹಿತ ಕಾಪಾಡಲು ಸರ್ಕಾರ ಮುಂದಾಗಬೇಕಿದೆ. ರೈತರು ತಮ್ಮ ಫಸಲುಗಳಿಗೆ ವಿಮೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿ, ಮಳೆ ಹಾನಿಯಾಗಿರುವ ರೈತರಿಗೆ ಸೂಕ್ತ ಪರಿಹಾರ ನೀಡಿ ಮತ್ತು ಕಾಡುಪ್ರಾಣಿಗಳ ಹಾವಳಿಯನ್ನು ತಪ್ಪಿಸಿ ಎಂದು ಅಧಿಕಾರಿಗಳಿಗೆ ಕರೆ ಮಾಡಿ ರೈತರ ಹಿತ ಕಾಪಾಡುವಂತೆ ಸಲಹೆ ನೀಡಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಸದಸ್ಯ ನಾಗೇಶ್ ರಾಜ್, ಜಿಪಂ ಮಾಜಿ ಸದಸ್ಯ ಕೆ. ಮಾರುತಿ, ಮುಖಂಡರಾದ ಹುರ ಶಿವಣ್ಣ, ಶಿವಪ್ಪ ದೇವರು, ಚೆನ್ನಕೇಶವ, ಮಹೇಶ್, ಗ್ರಾಪಂ ಸದಸ್ಯ ಕೃಷ್ಣಮೂರ್ತಿ, ಹಗಿನವಾಳು ಬಸವಣ್ಣ ಸೇರಿದಂತೆ ಪ್ರಮುಖರು ಹಾಜರಿದ್ದರು.

ಮಳೆ ಹಾನಿ ಪ್ರದೇಶಕ್ಕೆ ಶಾಸಕ ಅಶ್ವಿನ್‌ಕುಮಾರ್ ಭೇಟಿ, ಪರಿಶೀಲನೆ



ಮೂಗೂರು, ಸೆ.7– ಭಾರಿ ಮಳೆಯಿಂದ ಮನೆಗೆ ನೀರು ನುಗ್ಗಿ ಹಾನಿ ಸಂಭವಿಸಿದ ಹಿನ್ನೆಲೆಯಲ್ಲಿ ಎಂ. ಸೀಹಳ್ಳಿ ಗ್ರಾಮಕ್ಕೆ ಶಾಸಕ ಎಂ.ಅಶ್ವಿನ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಮೂಗೂರು ಸಮೀಪದ ಸೀಹಳ್ಳಿ ಗ್ರಾಮದ ತಗ್ಗು ಪ್ರದೇಶದ ಮನೆಗಳಿಗೆ ಭಾರೀ ಪ್ರಮಾಣದ ನೀರು ನುಗ್ಗಿ ಅವಾಂತರ ಸೃಷ್ಟಿಸಿತು. ಬಡಾವಣೆಯಲ್ಲಿ ಸಮರ್ಪಕವಾದ ಚರಂಡಿ ವ್ಯವಸ್ಥೆ ಇಲ್ಲದ ಪರಿಣಾಮ ನೀರು ಸಂಗ್ರಹಗೊಂಡು ವಾಸದ ಮನೆಗಳು ಜಲಾವೃತಗೊಂಡು ಶಿಥಿಲಗೊಳ್ಳುತ್ತಿವೆ ಎಂದು ಸ್ಥಳೀಯ ನಿವಾಸಿಗಳು ಶಾಸಕರ ಬಳಿ ತಮ್ಮ ಅಳಲನ್ನು ತೋಡಿಕೊಂಡರು. ಸ್ಥಳದಲ್ಲಿ ಹಾಜರಿದ್ದ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಶೇಖರಣೆಗೊಂಡ ಮಳೆಯ ನೀರು ಸಾಗಲು ಅನುವು ಮಾಡಿ ಗ್ರಾಪಂ ವತಿಯಿಂದ ಚರಂಡಿ ವ್ಯವಸ್ಥೆ ಕಲ್ಪಿಸಿ ಮತ್ತೆ ಇಂತಹ ಅವ್ಯವಸ್ಥೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ನೀರಾವರಿ ಇಲಾಖೆಯ ಇಇ ಸುಬ್ರಮಣ್ಯ, ಮಂಜುನಾಥ, ರೇಣುಕೇಶ್, ಕಬಿನಿ ನೀರು ಬಳಕೆದಾರರ ಮಹಾ ಮಂಡಳದ ಮಾಜಿ ಅಧ್ಯಕ್ಷ ಗುರುಮೂರ್ತಿ, ಪರಮೇಶ್, ಗ್ರಾಮ ಪಂಚಾಯಿತಿ ಸದಸ್ಯೆ ಪುಟ್ಟನಂಜಮ್ಮ, ಮಹಾದೇವಸ್ವಾಮಿ, ದುಂಡೇಗೌಡ, ನಿಂಗಶೆಟ್ಟಿ, ಗೌಡರ ಮಹಾದೇವಪ್ಪ, ಮಾದಪ್ಪ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಸರ್ಕಾರಿ ವಕೀಲರಾಗಿ ರವಿಶಂಕರ್ ನೇಮಕ



ತಿ.ನರಸೀಪುರ, ಸೆ.7– ತಾಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ಜಿ. ರವಿಶಂಕರ್ ಅವರನ್ನು ತಿ.ನರಸೀಪುರ ತಾಲೂಕಿನ ಹಿರಿಯ ಶ್ರೇಣಿ ನ್ಯಾಯಾಲಯದ ಅಪರ ಸರ್ಕಾರಿ ವಕೀಲರನ್ನಾಗಿ 3 ವರ್ಷದ ಅವಧಿಗೆ ನೇಮಕ ಮಾಡಲಾಗಿದೆ.

ಸೆ.10ರಂದು ನಿವೃತ್ತಿ ವೇತನದಾರರ ಮಾಸಿಕ ಸಭೆ

ಮೈಸೂರು, ಸೆ.7– ರೈಲ್ವೆ ನಿವೃತ್ತಿ ವೇತನದಾರರ ಮಾಸಿಕ ಸಭೆ ಸೆ.10 ರಂದು ಬೆಳಗ್ಗೆ 10.30ಕ್ಕೆ ಶೇಷಾದ್ರಿ ಅಯ್ಯರ್ ರಸ್ತೆಯ ಎ.ಮಾನ್ಯುಯಲ್ ಸಭಾಂಗಣದಲ್ಲಿ ನಡೆಯಲಿದೆ. ಸರ್ವಸದಸ್ಯರು ಈ ಸಭೆಯಲ್ಲಿ ಭಾಗವಹಿಸುವಂತೆ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಪ್ರಕಟಣೆಯಲ್ಲಿ ತಿಳಿಸಿದ್ದು, ಹೆಚ್ಚಿನ ವಿವರಗಳಿಗೆ ಮೊ:94481–85022, 810514–22777 ಅನ್ನು ಸಂಪರ್ಕಿಸಬಹುದು.

ಹಸಿರು ನಮ್ಮ ಉಸಿರು

ಪಿಹೆಚ್.ಡಿ ಪದವಿ



ಮೈಸೂರು, ಸೆ.7– ಡಾ.ಬಿ. ಪ್ರಭುಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎಚ್.ಎಂ. ಮಲ್ಲಿಕಾರ್ಜುನ ಅವರು ಕನ್ನಡ ಭಾಷೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ವಿಮರ್ಶಾ ಸಾಹಿತ್ಯ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಚಪ್ಪರದಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ




ಬೆಟ್ಟದಪುರ, ಸೆ. 7– ಪಿರಿಯಾಪಟ್ಟಣ ತಾಲೂಕು ಚಪ್ಪರದಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಈ ಹಿಂದೆ ತೆರವಾಗಿದ್ದ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಎರಡು ಸ್ಥಾನಗಳಿಗೆ ತಲಾ ಒಂದೊಂದೇ ನಾಮಪತ್ರ ಬಂದಿದ್ದರಿಂದ ಅಧ್ಯಕ್ಷರಾಗಿ ಪ್ರಸನ್ನಕುಮಾರ್, ಉಪಾಧ್ಯಕ್ಷರಾಗಿ ಬಾಲಕೃಷ್ಣ ಆಯ್ಕೆ ಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿ ಆಗಮಿಸಿದ್ದ ಸಿಡಿಓ ಪ್ರಸಾದ್ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಸಂಜು, ನಾಗರಾಜು, ಕೃಷ್ಣೇಗೌಡ, ಚಂದ್ರನಾಯಕ, ಬಸಮ್ಮ, ಮಂಜುಳ ನಾಗರಾಜು, ಗ್ರಾಪಂ, ಅಧ್ಯಕ್ಷ ದೇವೇಗೌಡ, ಸದಸ್ಯರಾದ ವೆಂಕಟೇಶ್, ಸುರೇಶ್, ಸಂಘದ ಮಾಜಿ ಅಧ್ಯಕ್ಷ ಸಿ.ಎನ್. ಬಸವರಾಜು, ನಾಗೇಂದ್ರ, ಡೇರಿ ಮಾಜಿ ಅಧ್ಯಕ್ಷ ಹರೀಶ್, ಸಿಇಓ ಹುಚ್ಚಪ್ಪ, ಸಿಬ್ಬಂದಿ, ಗ್ರಾಮದ ಕೆಲವು ಮುಖಂಡರು ಸೇರಿದಂತೆ ಇನ್ನಿತರರು ಹಾಜರಿದ್ದರು.




ತಿ.ನರಸೀಪುರದ ನಾಯಕರ ಬೀದಿಯಲ್ಲಿ ಗಜಾನನ ಸೇನಾ ಸಮಿತಿಯಿಂದ ಪುರಸಭಾ ಸದಸ್ಯರಾದ ಶೋಭಾರಾಣಿ ಮಲ್ಲೇಶ್ ಅವರನ್ನು ಸನ್ಮಾನಿಸಲಾಯಿತು. ಸಮಿತಿ ಅಧ್ಯಕ್ಷ ವರದರಾಜು, ಸದಸ್ಯರಾದ ಹರೀಶ್, ಶಿವು, ನವೀನ್, ಮಹದೇವ, ನಂಜುಂಡ, ಅಕ್ಷಯ್, ಮೋನಿಶ್, ಸಂತೋಷ, ಸತೀಶ್, ರಾಘು, ಪ್ರದೀಪ್, ರಾಜಣ್ಣ ಇದ್ದಾರೆ.

ನಿಂಗೇಗೌಡ ನಿಧನ



ಹೆಚ್.ಡಿ.ಕೋಟೆ, ಸೆ.7– ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಲಿಂಗರಾಜು ಅವರ ತಂದೆ ನಿಂಗೇಗೌಡ (78) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ ಮತ್ತು ಲಿಂಗರಾಜು ಸೇರಿದಂತೆ ಮೂವರು ಪುತ್ರರು, ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಬುಧವಾರ ಸ್ವಗ್ರಾಮವಾದ ಬೊಪ್ಪನಹಳ್ಳಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

5 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ದೇವನೂರು, ಸೆ.7– ಈ ಹರ್ಷವರ್ಧನ್ ಇರುವುದೇ ಅಭಿವೃದ್ಧಿ ಕೆಲಸ ಮಾಡುವುದಕ್ಕೆ, ಅದನ್ನು ಮಾಡಿ ತೋರಿಸಿದ್ದೇನೆ ಎಂದು ಶಾಸಕ ಹರ್ಷವರ್ಧನ್ ತಿಳಿಸಿದರು.

ಇಲ್ಲಿಗೆ ಸಮೀಪದ ಗಟ್ಟವಾಡಿ ಗ್ರಾಮ ದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಗಟ್ಟವಾಡಿ, ಹಳೇಪುರ ಹಂಪಾಪುರ, ನೇರಳೆ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ 150 ಎಗೆ ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಅಭಿವೃದ್ಧಿ ವಿಚಾರದಲ್ಲಿ ಯಾರೂ ಬೆರಳು ಮಾಡಿ ತೋರಿಸದ ರೀತಿ ಕ್ಷೇತ್ರಕ್ಕೆ 600 ಕೋಟಿ ಅನುದಾನ ತಂದು ಕೆಲಸ ಮಾಡಿದ್ದೇನೆ. ಈ ರಸ್ತೆ ಕಳೆದ 20 ವರ್ಷಗಳಿಂದ ಅಭಿವೃದ್ಧಿಯಾಗಿರಲಿಲ್ಲ. ಈ ಭಾಗಕ್ಕೆ ನಾನು ಬಂದಾಗ ಇಲ್ಲಿನ ಜನರು ಈ ರಸ್ತೆ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುತ್ತಿದ್ದರು. ಇದರಿಂದ ನನಗೂ ಬೇಸರವಾಗಿ ರಸ್ತೆ ಅಭಿವೃದ್ಧಿಪಡಿಸುವವರೆಗೂ ನಾನು ಗ್ರಾಮಕ್ಕೆ ಬರುವುದಿಲ್ಲ ಎಂದಿದ್ದೆ. ಅದರಂತೆ ಆಡಿದ ಮಾತಿಗೆ ತಪ್ಪದಂತೆ ರಸ್ತೆ ಅಭಿವೃದ್ಧಿಗೆ 5 ಕೋಟಿ ರೂ. ಅನುದಾನ ತಂದು ಕಾಮಗಾರಿಗೆ ಚಾಲನೆ ನೀಡಲು ಬಂದಿದ್ದೇನೆ. ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ವಿರೋಧ ಪಕ್ಷದವರು ತಮ್ಮ ಬಗ್ಗೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಅದನ್ನು ಬಿಟ್ಟು ನೇರ ಚರ್ಚೆಗೆ ಬರಲಿ ಅವರಿಗೆ ಪ್ರತಿ ರೂಪಾಯಿಗೂ ಲೆಕ್ಕ ಕೊಡುವ ಮೂಲಕ ನೇರ ಉತ್ತರ ಕೊಡುವುದಾಗಿ ತಿಳಿಸಿದರು. ಇದೇ ವೇಳೆ ಶಾಸಕರನ್ನು ಗ್ರಾಮಸ್ಥರು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಮಹೇಶ್, ಗ್ರಾಪಂ ಅಧ್ಯಕ್ಷ ಶಂಕರ್ ನಾಯಕ್, ಸದಸ್ಯ ಕುಮಾರ್, ಮುಖಂಡ ರಾದ ರಂಗನಾಥ್, ಸಿದ್ದರಾಜು, ಜಾವಿದ್ ಅಹಮದ್, ನಾಗಣ್ಣ, ಪ್ರಕಾಶ್, ನಾಗರಾಜ್, ಬಸವಣ್ಣ, ಪ್ರಕಾಶ್, ಅಕ್ರಂಪಾಷ ಮತ್ತಿತರರಿದ್ದರು.

ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ದಸರಾ ಬೊಂಬೆ ಪ್ರದರ್ಶನ







ಇಂದು ಸಂಜೆ 6.30ಕ್ಕೆ ಚಾಲನೆ






ಮೈಸೂರು, ಸೆ.7(ಎಸ್‌ಪಿಎನ್)– ಮೈಸೂರಿನ ನಜರ್‌ಬಾದ್‌ನಲ್ಲಿರುವ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಹದಿನೆಂಟನೇ ವರ್ಷದ ದಸರಾ 'ಬೊಂಬೆ ಪ್ರದರ್ಶನ'ವನ್ನು ಸೆ.8ರ ಸಂಜೆ 6.30ಕ್ಕೆ ಆರಂಭಿಸಲಾಗುತ್ತಿದೆ.

ಪ್ರತಿ ವರ್ಷದಂತೆ ಈ ವರ್ಷವು ಶರನ್ನವ ರಾತ್ರಿ ಆರಂಭಕ್ಕೆ 18 ದಿನಗಳ ಮುಂಚಿತವಾಗಿ ವೈವಿಧ್ಯಮಯ ಗೊಂಬೆಗಳ ಪ್ರದರ್ಶನಕ್ಕೆ ಸಿದ್ಧತೆ ನಡೆದಿದೆ. ಈ ಪ್ರದರ್ಶನದಲ್ಲಿ ಬೆಂಗಳೂರು, ಕಿನ್ನಾಳ, ಚನ್ನಪಟ್ಟಣ, ಪಳಿಮಾರುಗಳಲ್ಲಿ ತಯಾರಾದ ಬೊಂಬೆಗಳು, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ರಾಜಸ್ತಾನ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಒಡಿಶಾಗಳಲ್ಲಿ ರಚಿಸಲಾಗಿರುವ ತರಾವರಿ ಬೊಂಬೆಗಳು, ಒಂದಕ್ಕಿಂತ ಒಂದು ಸುಂದರವಾಗಿವೆ. 50 ರೂ.ನಿಂದ ಹಿಡಿದು, ಎರಡೂವರೆ ಲಕ್ಷ ರೂ.ವರೆಗೆ ಬೆಲೆಬಾಳುವ ಬೊಂಬೆಗಳು ಪ್ರದರ್ಶನಕ್ಕಿವೆ.

ಈ ಪ್ರದರ್ಶನದಲ್ಲಿ ರಾಮಾಯಣವನ್ನು ಹಿಡಿದಿಡುವ ಪ್ರಯತ್ನವನ್ನು ಬೊಂಬೆ ಕಲಾವಿದರು ಯಶಸ್ವಿಯಾಗಿ ಕಟ್ಟಿಕೊಟ್ಟಿದ್ದಾರೆ. ಪುತ್ರಕಾಮೇಷ್ಠಿ ಯಾಗ, ಶ್ರೀ ರಾಮ ಜನನ, ತಾಟಕಾ ಸಂಹಾರ, ಮಾರೀಚ–ಸುಬಾಹುಗಳ ಪಲಾಯನ, ಅಹಲ್ಯ ಉದ್ಧಾರ, ಸೀತಾ ಸ್ವಯಂವರ, ಗುಹನ ದೋಣಿ ಪ್ರಯಾಣ, ಭರತನಿಗೆ ಪಾದುಕಾ ಪ್ರದಾನ, ಪಾದುಕಾ ಪಟ್ಟಾಭಿಷೇಕ, ಶೂರ್ಪನಖಿಗೆ ಶಿಕ್ಷೆ, ಮಾಯಾ ಮೃಗ–ಸೀತಾಪಹರಣ, ಜಟಾಯು ವಧ, ಶಬರಿ ಸತ್ಕಾರ, ವಾಲಿಮೋಕ್ಷ, ಸುಗ್ರೀವ ಪಟ್ಟಾಭಿಷೇಕ, ಸೇತು ಬಂಧನ, ಸಂಜೀವಿನಿ ಪರ್ವತ, ಕುಂಭಕರ್ಣ ಉತ್ಥಾನ, ರಾವಣ ಸಂಹಾರ, ಸೀತಾ ಅಗ್ನಿ ಪ್ರವೇಶ ಮತ್ತು ಶ್ರೀ ರಾಮ ಪಟ್ಟಾಭಿಷೇಕ ಸೇರಿದಂತೆ ಒಟ್ಟು 24 ವಿಹಂಗಮ ದೃಶ್ಯಗಳ ಅನನ್ಯತೆ ಬೊಂಬೆ ಮನೆಯಲ್ಲಿ ಪ್ರದರ್ಶನಕ್ಕಿಡಲಾಗಿದೆ. ಮೈಸೂರಿನ ಗೊಂಬೆ ಪ್ರಿಯರು ಹಾಗೂ ಪ್ರವಾಸಿಗರಿಗೆ



ಪ್ರತಿಷ್ಠಾನದ ವಿನ್ಯಾಸ ವಿಭಾಗ ಹಲವಾರು ನೂತನ ಬೊಂಬೆಗಳನ್ನು ತಯಾರಿಸಿದೆ. ಮೈಸೂರು ಚಾಮುಂಡಿ ಉತ್ಸವಮೂರ್ತಿ, ಶಿರಸಿ ಮಾರಿಕಾಂಬಾ, ಕೇರಳದ ಚಂಡೆಮೇಳ, ಯೋಗ ನಿರತ ವಿನಾಯಕ ಮೂರ್ತಿಗಳು, ನಾಟ್ಯ ಮಯೂರಿ, ವಾದಿರಾಜ ತೀರ್ಥರು, ಗುರುರಾಯರ ಜೀವನ ಗಾಥೆ, ಸಾಯಿ ಬಾಬಾ ಅವರ ಜೀವನ ಗಾಥೆ, ಚನ್ನಪಟ್ಟಣದ ಮುದ್ದು ಆನೆ ಬೊಂಬೆಗಳು ಪ್ರದರ್ಶನಗೊಳ್ಳಲಿದೆ. ಪ್ರತಿದಿನ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಬೊಂಬೆಗಳ ಪ್ರದರ್ಶನ ಬೆಳಗ್ಗೆ 9ರಿಂದ ರಾತ್ರಿ 7ರವರೆಗೆ ಇರಲಿದೆ. ವಿವರಗಳಿಗಾಗಿ ಮೊ:98801–11625 ಅನ್ನು ಸಂಪರ್ಕಿಸಬಹುದು ಎಂದು ರಘು ಧರ್ಮೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಭಾರತೀಯ ಜೀವ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಅವರ ಪುತ್ರಿ ಚಿ.ಸೌ.ವಂದನಾ ಹಾಗೂ ವಿನಯ್ ಆರ್.ಗೌಡ ಅವರ ವಿವಾಹ ಮಹೋತ್ಸವ ಕಳೆದ ಭಾನುವಾರ (ಸೆ.5) ಮೈಸೂರಿನ ಯಶಸ್ವಿನಿ ಕಲ್ಯಾಣ ಮಂಟಪದಲ್ಲಿ ಅದ್ದೂರಿಯಾಗಿ ನೆರವೇರಿತು. ಮೈಸೂರು ಆದಿಚುಂಚನಗಿರಿ ಶಾಖಾ ಮಠದ ಸೋಮನಾಥನಂದ ಸ್ವಾಮೀಜಿ ಅವರು ನೂತನ ವಧು–ವರರಿಗೆ ಆಶೀರ್ವದಿಸಿದರು. ಸಂಸದರಾದ ಪ್ರತಾಪ ಸಿಂಹ, ಶಾಸಕರಾದ ಎಲ್.ನಾಗೇಂದ್ರ, ಸಾರಾ ಮಹೇಶ್, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮಧುಮಾದೇಗೌಡ, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, , ವಿಶ್ರಾಂತ ಕುಲಪತಿ ಪ್ರೊ|| ಎನ್.ಎಸ್.ರಾಮೇಗೌಡ, ಮೂಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಕೆ.ಎಸ್.ಸದಾನಂದ ಸೇರಿದಂತೆ ಹಲವು ಗಣ್ಯರು ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಚುನಾವಣೆ ಘೋಷಣೆಗೆ ಮುನ್ನವೇ ರಾಜಕೀಯ ನಾಯಕರಿಂದ ಮತದಾರರ ಓಲೈಕೆ ಕಸರತ್ತು

ಪುಣ್ಯಕ್ಷೇತ್ರಗಳ ಯಾತ್ರೆ, ಉಡುಗೊರೆಗಳ ಭರಾಟೆ; ಕೊನೆ ಘಳಿಗೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ

ಬೆಂಗಳೂರು, ಸೆ. 7(ಕೆಎಂಶಿ)– ರಾಜ್ಯ ವಿಧಾನ ಸಭೆಗೆ ಚುನಾವಣೆ ಘೋಷಣೆಯಾಗುವ ಮುನ್ನವೇ ಮತದಾರರ ಓಲೈಸಲು ರಾಜಕಾರಣಿಗಳು ಭಗೀರಥ ಪ್ರಯತ್ನ ಆರಂಭಿಸಿದ್ದಾರೆ. ಮುಂಬರುವ ವಿಧಾನ ಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿರುವ ಆಕಾಂಕ್ಷಿಗಳು ತಮ್ಮ ಕ್ಷೇತ್ರದ ಜನರ ಮನವೊಲಿಕೆಗೆ ನಾನಾ ತಂತ್ರ ಆರಂಭಿಸಿದ್ದಾರೆ. ರಾಜ್ಯದಲ್ಲಿ ಹಿಂದೆಂದೂ ಕಂಡರಿಯದಂತಹ ಭಾರೀ ಮಳೆ, ಅತಿವೃಷ್ಟಿ, ಪ್ರವಾಹ ಉಂಟಾಗಿ ಜನರು ತತ್ತರಿಸಿರುವ ಸಂದರ್ಭದಲ್ಲಿಯೇ ಪ್ರವಾಸ ಭಾಗ್ಯ ಕಲ್ಪಿಸುತ್ತಿದ್ದಾರೆ.

ತಮಿಳುನಾಡಿನ ಓಂ ಶಕ್ತಿ, ಧರ್ಮಸ್ಥಳ, ಮುರುಡೇಶ್ವರ ದೇವಾಲಯಗಳು, ಜಲಪಾತ ಸೇರಿದಂತೆ ರಾಜ್ಯ ಹಾಗೂ ಹೊರ ರಾಜ್ಯದ ಯಾತ್ರಾಸ್ಥಳಗಳಿಗೆ ಪ್ರವಾಸಕ್ಕೆ ನೂರಾರು ಬಸ್‌ಗಳಲ್ಲಿ ಕಳುಹಿಸಿ ಅವರ ಮನ ಗೆಲ್ಲುವ ಪ್ರಯತ್ನ ಮಾಡುತ್ತಿದ್ದಾರೆ. ಅವಧಿಗೆ ಮುನ್ನವೇ ರಾಜ್ಯ ವಿಧಾನಸಭಾ ಚುನಾವಣೆ ನಡೆಯಲಿದೆ ಎಂಬ ಗುಂಗಿನಲ್ಲಿರುವ ಶಾಸಕರು, ಸ್ಪರ್ಧಾಕಾಂಕ್ಷಿಗಳು ಭಾರೀ ಸಿದ್ಧತೆ ಆರಂಭಿಸಿದ್ದಾರೆ.

ಪ್ರವಾಸವಷ್ಟೇ ಅಲ್ಲ, ಹಬ್ಬದ ಸಂದರ್ಭದಲ್ಲಿ ಕುಕ್ಕರ್, ತವಾ, ಆಹಾರ ಧಾನ್ಯ ಸೇರಿದಂತೆ ನಾನಾ ರೀತಿಯ ಉಡುಗೊರೆಗಳನ್ನು ನೀಡತೊಡಗಿದ್ದಾರೆ. ಜತೆಗೆ ಕ್ಷೇತ್ರದ ಜನರ ಸಮಸ್ಯೆ ಆಲಿಸಿ ಪರಿಹಾರ ಕಲ್ಪಿಸುವ ಸೋಗು ಹಾಕಿ ಪಾದಯಾತ್ರೆ ಮೂಲಕ ಕ್ಷೇತ್ರ ದರ್ಶನ ಮಾಡುತ್ತಿದ್ದಾರೆ. ಅಲ್ಲದೆ, ಹೆಚ್ಚು ಸಮಯವನ್ನು ತಮ್ಮ ಕ್ಷೇತ್ರದ ಕಾರ್ಯಕ್ರಮಗಳಿಗೆ ಕೊಡುತ್ತಿದ್ದಾರೆ. ಈ ಕಾರ್ಯದಲ್ಲಿ ಬಹುತೇಕ ಶಾಸಕರು ತೊಡಗಿದ್ದಾರೆ. ಸ್ಪರ್ಧೆಗಿಳಿಯುವ ಆಕಾಂಕ್ಷಿಗಳು ಪೈಪೋಟಿಗಿಳಿದು ಜನಮನ ಗೆಲ್ಲುವ ಪ್ರಯತ್ನ ಮಾಡತೊಡಗಿದ್ದಾರೆ. ಒಂದೊಂದು ಕ್ಷೇತ್ರದಲ್ಲಿ ಮೂರು ರಾಜಕೀಯ ಪಕ್ಷದವರು ಇಂತಹ ಕಾರ್ಯಗಳನ್ನು ಕೈಗೊಂಡಿದ್ದಾರೆ. ಸರ್ಕಾರ ಹಾಗೂ ಬಿಜೆಪಿಯ ಇತ್ತೀಚಿನ ನಡವಳಿಕೆಗಳು ಗುಜರಾತ್ ಚುನಾವಣೆ ಸಂದರ್ಭದಲ್ಲೇ ರಾಜ್ಯದಲ್ಲೂ ಚುನಾವಣೆ ಎದುರಾಗಬಹುದು ಎಂಬ ಸಂದೇಹಕ್ಕೆ ಎಡೆಮಾಡಿಕೊಟ್ಟಿವೆ. ಈ ಹಿನ್ನೆಲೆಯಲ್ಲಿ ತಮ್ಮದೇ ಆದ ತಂತ್ರ–ಪ್ರತಿತಂತ್ರಗಳ ಮೂಲಕ ಚುನಾವಣೆ ಸಿದ್ಧತೆಯಲ್ಲಿ ತೊಡಗಿದ್ದಾರೆ. ಒಟ್ಟಿನಲ್ಲಿ ಚುನಾವಣಾ ಮುಹೂರ್ತ ನಿಗದಿಯಾಗದಿದ್ದರೂ ಆಕಾಂಕ್ಷಿಗಳ ಎದೆಬಡಿತ ಈಗಿನಿಂದಲೇ ಜೋರಾಗತೊಡಗಿದೆ.

ಸಚಿವ ಉಮೇಶ್ ಕತ್ತಿ ನಿಧನಕ್ಕೆ ಎಲ್.ಆರ್.ಮಹದೇವಸ್ವಾಮಿ ಸಂತಾಪ

ಮೈಸೂರು,ಸೆ.7–ಅರಣ್ಯ ಸಚಿವರಾಗಿದ್ದ ಉಮೇಶ್ ಕತ್ತಿಯವರ ನಿಧನಕ್ಕೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅತೀವ ಸಂತಾಪ ವ್ಯಕ್ತಪಡಿಸಿದ್ದಾರೆ.



ಕತ್ತಿಯವರು ಅರಣ್ಯ ಸಚಿವರಾದ ನಂತರ ನಾಲ್ಕೈದು ಬಾರಿ ಮೃಗಾಲಯಕ್ಕೆ ಭೇಟಿ ನೀಡಿದ್ದರು. ಮೃಗಾಲಯ ಪ್ರಾಧಿಕಾರದ ಸಭೆಯನ್ನೂ ನಡೆಸಿದ್ದರು. ಬೆಳಗಾವಿಯಲ್ಲಿ ಮೃಗಾಲಯ ಆರಂಭಿಸಬೇಕೆಂಬ ಉತ್ಸುಕತೆ ಹೊಂದಿದ್ದರು. ವನ್ಯಜೀವಿಗಳ ಬಗ್ಗೆ ಅವರಿಗೆ ಅತೀವ ಪ್ರೀತಿ ಇತ್ತು ಅರಣ್ಯ ಹಾಗೂ ವನ್ಯಜೀವಿಗಳಿಗೆ ಸಂಬಂಧಿಸಿದಂತೆ ಏನೇ ಪ್ರಸ್ತಾಪ ಮಾಡಿದರೂ ತೀವ್ರ ಆಸಕ್ತಿಯಿಂದ ಚರ್ಚಿಸುತ್ತಿದ್ದರು. ಕಡತಗಳ ತ್ವರಿತ ವಿಲೇವಾರಿ ಮಾಡುತ್ತಿದ್ದರು. ಕತ್ತಿಯವರ ನಿಧನ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣಾ ಚಿಂತನೆಗೆ ಭಾರೀ ಹಿನ್ನಡೆಯುಂಟಾಗಿದೆ ಎಂದು ಅವರು ತಿಳಿಸಿದ್ದಾರೆ.

ವಿವಿಧ ರೀತಿಯ ಬಸ್ ಪಾಸ್ ವಿತರಣೆ

ಮೈಸೂರು, ಸೆ.7– ಕ.ರಾ.ರ.ಸಾ.ನಿಗಮವು 2022–23ನೇ ಸಾಲಿನ ಪದವಿ/ಸ್ನಾತಕೋತ್ತರ/ಡಿಪ್ಲೋಮ/ಕಾನೂನು ಹಾಗೂ ಇತರೆ ಪದವಿ ವಿದ್ಯಾರ್ಥಿಗಳಿಗೆ ರಿಯಾಯತಿ ದರದ ಬಸ್ ಪಾಸ್‌ಗಳನ್ನು ವಿಭಾಗದ ಬಸ್ ನಿಲ್ದಾಣಗಳಲ್ಲಿ ವಿತರಿಸುತ್ತಿದ್ದು, ಅಂತಿಮ ವರ್ಷದ ಅಂತಿಮ ಸೆಮಿಸ್ಟರ್ ಪದವಿ/ಸ್ನಾತಕೋತ್ತರ/ಡಿಪ್ಲೋಮ/ ಕಾನೂನು ಹಾಗೂ ಇತರೆ ಪದವಿ ವಿದ್ಯಾರ್ಥಿಗಳಿಗೆ ಅಕ್ಟೋಬರ್–2022ರವರೆಗೆ ಹಳೆಯ ಪಾಸ್‌ಗಳಿಗೆ ಮಾನ್ಯತೆ ನೀಡಲಾಗಿದೆ. ಎಲ್ಲಾ ಅರ್ಹ ಕಾಲೇಜು ವಿದ್ಯಾರ್ಥಿಗಳು ಸೇವಾ https://sevasinduservices.karnataka.gov.in/ ತಂತ್ರಾಂಶದ ಮೂಲಕ ಉಚಿತ/ರಿಯಾಯಿತಿ ಬಸ್ ಪಾಸ್‌ಗಾಗಿ ಅರ್ಜಿ ಸಲ್ಲಿಸಿ, ಸ್ವೀಕೃತಿ ಪ್ರತಿಯೊಂದಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ತಮ್ಮ ತಮ್ಮ ಕಾಲೇಜುಗಳಿಗೆ ಸಲ್ಲಿಸುವುದು. ಸಂಬಂಧಪಟ್ಟ ಕಾಲೇಜಿನವರು ಅರ್ಜಿ ಮತ್ತು ದಾಖಲಾತಿಗಳನ್ನು ದೃಢೀಕರಿಸಿ ನಿಗದಿತ ಮೊತ್ತದೊಂದಿಗೆ ನಗರ ಬಸ್ ನಿಲ್ದಾಣ, ಮೈಸೂರು ಕೇಂದ್ರೀಯ ಬಸ್ ನಿಲ್ದಾಣ, ಕೆ.ಆರ್.ನಗರ, ಹುಣಸೂರು, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಸರಗೂರು, ಸಾಲಿಗ್ರಾಮ, ಬಿಳಿಕೆರೆ, ಕಿತ್ತೂರು, ಚುಂಚನಕಟ್ಟೆ, ಹನಗೋಡು, ರಾವಂದೂರು, ಬೆಟ್ಟದಪುರ ಹಾಗೂ ಭೇರ್ಯ ಬಸ್ ನಿಲ್ದಾಣಗಳಲ್ಲಿ ಅರ್ಜಿ ಸಲ್ಲಿಸಿ ಸಂಸ್ಥೆಯ ನಿಯಮಾನುಸಾರ ಪಾಸ್ ಪಡೆಯಬಹುದಾಗಿರುತ್ತದೆ. ವಿದ್ಯಾರ್ಥಿಗಳು ನೇರವಾಗಿ ಪಾಸ್ ಕೌಂಟರ್‌ಗೆ ಬರುವ ಅವಶ್ಯಕತೆಯಿರುವುದಿಲ್ಲ ಎಂದು ವಿಭಾಗಿಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಮಶಾನದ 1,141 ಜಾಗಗಳು ಒತ್ತುವರಿ: ಹೈಕೋರ್ಟ್‌ಗೆ ಸರ್ಕಾರದ ಮಾಹಿತಿ



ಬೆಂಗಳೂರು, ಸೆ.7– ಸ್ಮಶಾನಕ್ಕಾಗಿ ನೀಡಿರುವ 1,141 ಜಾಗಗಳು ಒತ್ತುವರಿಯಾಗಿದೆ ಎಂದು ರಾಜ್ಯ ಸರ್ಕಾರ ಬುಧವಾರ ಕರ್ನಾಟಕ ಹೈಕೋರ್ಟ್‌ಗೆ ಮಾಹಿತಿ ನೀಡಿದೆ. ರಾಜ್ಯದಲ್ಲಿ ಸ್ಮಶಾನ ಜಾಗ ಇಲ್ಲದ ಗ್ರಾಮ ಮತ್ತು ಪಟ್ಟಣ ಪ್ರದೇಶಗಳಿಗೆ ಅಗತ್ಯ ಜಮೀನು ಒದಗಿಸುವಂತೆ ಹೈಕೋರ್ಟ್ ನೀಡಿದ್ದ ಆದೇಶ ಪಾಲನೆ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆಕ್ಷೇಪಿಸಿ ಬೆಂಗಳೂರಿನ ನಿವಾಸಿ ಮಹಮ್ಮದ್ ಇಕ್ಬಾಲ್ ಅವರು ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ. ವೀರಪ್ಪ ಮತ್ತು ಕೆ.ಎಸ್. ಹೇಮಲೇಖ ಅವರಿದ್ದ ವಿಭಾಗೀಯ ಪೀಠ ನಡೆಸಿತು. ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್ ಸಲ್ಲಿಸಿದ ಅನುಪಾಲನಾ ವರದಿಯನ್ನು ಸರ್ಕಾರದ ಪರ ವಕೀಲರು ಪೀಠಕ್ಕೆ ಸಲ್ಲಿಸಿದರು.

ರಾಜ್ಯದಲ್ಲಿ ಒತ್ತುವರಿಯಾಗಿರುವ ಸ್ಮಶಾನ ಜಾಗಗಳನ್ನು ತೆರವುಗೊಳಿಸಬೇಕು ಮತ್ತು ಶವಸಂಸ್ಕಾರಕ್ಕೆ ಸ್ಥಳಾವಕಾಶ ಇಲ್ಲದ ಗ್ರಾಮಗಳಿಗೆ ಸ್ಮಶಾನ ಮಂಜೂರು ಮಾಡಲು ಮೂರು ವಾರಗಳಲ್ಲಿ ಕ್ರಮ ಕೈಗೊಳ್ಳುವಂತೆ ಆಗಸ್ಟ್ 16ರಂದು ನ್ಯಾಯಾಲಯ ನಿರ್ದೇಶಿಸಿತ್ತು. ಅದರಂತೆ ಸರ್ಕಾರ ಸೆ.5ರಂದು ಅನುಪಾಲನಾ ವರದಿ ಸಲ್ಲಿಸಿದೆ. ಸರ್ಕಾರದ ಪರ ವಕೀಲರು ನ್ಯಾಯಾಲಯಕ್ಕೆ ಮಾಹಿತಿ ನೀಡಿ, ಶೇ.92ರಷ್ಟು ಸ್ಮಶಾನ ಜಾಗಗಳನ್ನು ಮಂಜೂರು ಮಾಡಲಾಗಿದ್ದು, ಕಾನೂನು ತೊಡಕುಗಳ ಕೆಲ ಕಾರಣಗಳಿಂದಾಗಿ ಒಂದಿಷ್ಟು ಕಡೆ ಸ್ಮಶಾನ ಜಾಗ ಮಂಜೂರು ಮಾಡಲು ವಿಳಂಬವಾಗಿದೆ. ಸ್ಮಶಾನ ಜಾಗಗಳ ಒತ್ತುವರಿಗಳನ್ನು ತೆರವುಗೊಳಿಸಬೇಕು ಮತ್ತು ಶವಸಂಸ್ಕಾರಕ್ಕೆ ಅಗತ್ಯ ಜಮೀನು ಇಲ್ಲದ ಗ್ರಾಮಗಳಿಗೆ ಸ್ಮಶಾನಕ್ಕೆ ಜಾಗ ಮಂಜೂರು ಮಾಡಬೇಕು ಎಂಬ ಕೋರ್ಟ್ ಆದೇಶ ಪಾಲನೆಗೆ 3 ವಾರ ಕಾಲಾವಕಾಶ ಬೇಕು ಎಂದು ಕೋರಿದರು. ಇದನ್ನು ದಾಖಲಿಸಿಕೊಂಡ ಪೀಠವು ವಿಚಾರಣೆಯನ್ನು ಮುಂದೂಡಿತು.

ರಾಜ್ಯದಲ್ಲಿ ಒಟ್ಟು 1,141 ಸ್ಮಶಾನ ಜಾಗಗಳು ಒತ್ತುವರಿಯಾಗಿರುವುದನ್ನು ಗುರುತಿಸಲಾಗಿದ್ದು, ಇಲ್ಲಿವರೆಗೆ 282 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಇನ್ನೂ 859 ಸ್ಮಶಾನ ಜಾಗಗಳ ಒತ್ತುವರಿ ತೆರವುಗೊಳಿಸಬೇಕಾಗಿದೆ. ಅದೇ ರೀತಿ ರಾಜ್ಯದಲ್ಲಿರುವ ಒಟ್ಟು 29,616 ಗ್ರಾಮಗಳ ಪೈಕಿ 27,458 ಗ್ರಾಮಗಳಲ್ಲಿ ಸ್ಮಶಾನ ಜಾಗ ಒದಗಿಸಲಾಗಿದ್ದು, ಶೇ.92ರಷ್ಟು ಸ್ಮಶಾನ ಒದಗಿಸಿದಂತಾಗಿದೆ. ಇನ್ನುಳಿದ 1,003 ಗ್ರಾಮಗಳಿಗೆ ಸ್ಮಶಾನ ಜಾಗ ಒದಗಿಸಬೇಕಾಗಿದೆ. ಇದರಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆಯ ಸಮಸ್ಯೆ, ವ್ಯಾಜ್ಯಗಳು ಹಾಗೂ ಜಮೀನು ಖರೀದಿ ಮಾಡಬೇಕಾಗಿರುವ ಕಾರಣದಿಂದ 600 ಗ್ರಾಮಗಳಲ್ಲಿ ಸ್ಮಶಾನ ಜಾಗ ಒದಗಿಸಲು ಆಗಿಲ್ಲ. 403 ಗ್ರಾಮಗಳಲ್ಲಿ ಸ್ಮಶಾನ ಜಾಗ ಒದಗಿಸಬೇಕಾಗಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಸರ್ಕಾರದ ವರದಿಯಲ್ಲಿ ವಿವರಿಸಲಾಗಿದೆ. ಅದೇ ರೀತಿ 25,011 ಸ್ಮಶಾನ ಜಾಗಗಳನ್ನು ಆರ್‌ಟಿಸಿಯಲ್ಲಿ ಉಲ್ಲೇಖಿಸಲಾಗಿದ್ದು, 2,333 ಬಾಕಿ ಇವೆ. 23,815 ಸ್ಮಶಾನ ಜಾಗಗಳನ್ನು ಸ್ಥಳೀಯ ಆಡಳಿತ ಸಂಸ್ಥೆಗಳು ಸುಪರ್ದಿಗೆ ನೀಡಲಾಗಿದ್ದು, 3,765 ಜಾಗಗಳನ್ನು ಸುಪರ್ದಿಗೆ ನೀಡಲು ಬಾಕಿ ಇದೆ. 516 ಸ್ಮಶಾನ ಜಾಗಗಳ ಖರೀದಿ, ಮೀಸಲಿಡುವ ಮತ್ತು ಮಂಜೂರು ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಸರ್ಕಾರ ಹೇಳಿದೆ.

ಯಡಿಯೂರಪ್ಪಗೆ ಸಂಕಷ್ಟ

ಭ್ರಷ್ಟಾಚಾರ ಆರೋಪ ಪ್ರಕರಣದ ಮರುವಿಚಾರಣೆಗೆ ಹೈ ಆದೇಶ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ, ಕುಟುಂಬದ ವಿರುದ್ಧದ ಭ್ರಷ್ಟಾಚಾರ ಆರೋಪ ಪ್ರಕರಣದ ಮರುವಿಚಾರಣೆಗೆ ಹೈಕೋರ್ಟ್ ಆದೇಶ ನೀಡಿದೆ. 2021ರ ಜು.8ರಂದು ವಿಶೇಷ ನ್ಯಾಯಾಲಯವು ಯಡಿಯೂರಪ್ಪ ವಿರುದ್ಧ ದಾಖಲಾಗಿದ್ದ ಖಾಸಗಿ ದೂರನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಟಿಜೆ ಅಬ್ರಹಾಂ ಸಲ್ಲಿಸಿದ್ದ ಅರ್ಜಿಯನ್ನು ಅಂಗೀಕರಿಸಿರುವ ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಈ ಆದೇಶವನ್ನು ನೀಡಿದ್ದಾರೆ.

ಯಡಿಯೂರಪ್ಪ ಬಿ.ವೈ.ವಿಜಯೇಂದ್ರ ಹಾಗೂ ಅವರ ಕುಟುಂಬದ ಕೆಲ ಸದಸ್ಯರು ಹಾಗೂ ಸಚಿವ ಎಸ್.ಟಿ.ಸೋಮಶೇಖರ್ ಸೇರಿದಂತೆ 9 ಜನರ ವಿರುದ್ಧದ ಅಪರಾಧಗಳ ವಿಚಾರಣೆಗೆ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಯೋಜನೆ ನೀಡಲು ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್‌ನಿಂದ 12.5 ಕೋಟಿ ರೂಪಾಯಿ ಲಂಚ ಪಡೆದ ಆರೋಪದ ಕುರಿತು ತನಿಖೆಗೆ ಆದೇಶಿಸುವಂತೆ ಅಬ್ರಹಾಂ ವಿಶೇಷ ನ್ಯಾಯಾಲಯದ ಮೊರೆ ಹೋಗಿದ್ದರು.

ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಪೂರ್ವಾನುಮತಿ ನಿರಾಕರಣೆ ಹಿನ್ನೆಲೆಯಲ್ಲಿ ಇತ್ತೀಚೆಗೆ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ತನಿಖೆಗೆ ಆದೇಶಿಸಲು ನಿರಾಕರಿಸಿತ್ತು. ಹೀಗಾಗಿ ಟಿಜೆ ಅಬ್ರಹಾಂ ಹೈಕೋರ್ಟ್ ಮೆಟ್ಟಿಲೇರಿದ್ದರು.